

ಐಕ್ಯರಂಗ

ಸಂಪುಟ 21 ಸಂಚಿಕೆ 46

ನವಂಬರ್ 9-15, 1998 ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

"ಸ್ವಾರ್ಥ ರಾಜಕಾರಣಕ್ಕೋಸ್ಕರ ಕಿತ್ತಾಡಿ ಜನಾದೇಶದ ವಿರುದ್ಧ ಹೋಗಬೇಡಿ"

ವಿಧಾನ ಸಭೆಯಲ್ಲಿ ಜನತಾದಳ ಸರಕಾರಕ್ಕೆ ಶ್ರೀರಾಮರೆಡ್ಡಿ ಆಗ್ರಹ

ಕರ್ನಾಟಕ ರಾಜ್ಯದ ಜನತೆ 1994 ರಲ್ಲಿ ನೀಡಿದ ಜನಾದೇಶಕ್ಕೆ ಇಂದು ಜನತಾದಳದವರು ಒಂದು ಕಡೆ ದ್ರೋಹ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಕರ್ನಾಟಕದ ಜನತೆ ಈ ಹಿಂದೆ ತಿರಸ್ಕರಿಸಿದ್ದ ಕಾಂಗ್ರೆಸ್ ಮತ್ತು ಬಿಜೆಪಿ ಇವರಿಬ್ಬರೂ ಸೇರಿ ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ ಎಂದು ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿ ಹೇಳಿದ್ದಾರೆ. ಅವರು ಕರ್ನಾಟಕ ವಿಧಾನಸಭೆಯಲ್ಲಿ ಜೆ.ಹೆಚ್.ಪಟೇಲ್ ಸರ್ಕಾರದ ವಿರುದ್ಧ ಕಾಂಗ್ರೆಸ್ ಮತ್ತು ಬಿಜೆಪಿ ಮಂಡಿಸಿದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಮಾತನಾಡುತ್ತಿದ್ದರು.

ಕರ್ನಾಟಕದ ಜನತೆ ನಾಲ್ಕು ವರ್ಷಗಳ ಹಿಂದೆ ಏನು ತೀರ್ಪು ಕೊಟ್ಟಿದ್ದರೋ ಅದರ ಪ್ರಕಾರ ನಡೆಯುವಂತದ್ದು ಎಲ್ಲರ ಕರ್ತವ್ಯ. "ಇದರಲ್ಲಿ ಯಾವುದೇ ಲೋಪ ಸಲ್ಲದು. ಆಂತರಿಕ ಕಿತ್ತಾಟದಿಂದ ಈ ಸರ್ಕಾರ ಬಿದ್ದು ಹೋದರೆ ಜನತೆಯ ವಿಶ್ವಾಸ ಮತ್ತು ದೇಶಕ್ಕೆ ನೀವು ದ್ರೋಹ ಬಗೆದಂತೆ ಆಗುತ್ತದೆ" ಎಂದು ಜನತಾದಳದ ಮುಖಂಡರನ್ನು ಎಚ್ಚರಿಸುತ್ತಾ ಅವರು ಇದನ್ನು ಗಮನಕ್ಕೆ ತಗೊಳ್ಳದಿದ್ದರೆ 'ಇತಿಹಾಸ ನಿಮ್ಮನ್ನು ಕ್ಷಮಿಸುವುದಿಲ್ಲ" ಎಂದರು. ಏಕೆಂದರೆ ಇಂದು ದೇಶದ ಹಾಗೂ ರಾಜ್ಯದ ರಾಜಕಾರಣದಲ್ಲಿ ಗಂಡಾಂತರಕಾರಿ ಶಕ್ತಿಗಳು ರಣಹದ್ದುಗಳಂತೆ ಹಾರಾಡುತ್ತಿವೆ. ಜಾತ್ಯಾತೀತ ಶಕ್ತಿಗಳು ಒಂದಾಗಿರಬೇಕಾದಂತಹ ಈ ಸಂದರ್ಭದಲ್ಲಿ ಕೋಮುಶಕ್ತಿಗಳ ವಿರುದ್ಧ ಹಾಗೂ ಕಾಂಗ್ರೆಸ್ ದುರಾಡಳಿತದ ವಿರುದ್ಧ ರಾಜ್ಯದ ಜನತೆ ನೀಡಿಧ ಮತಕ್ಕೆ ವಿರುದ್ಧ ಹೋದಂತಾಗುತ್ತದೆ ಎಂದು ಶ್ರೀರಾಮರೆಡ್ಡಿ ನೆನಪಿಸಿದರು.

ಅವಿಶ್ವಾಸ ನಿರ್ಣಯವನ್ನು ಮಂಡಿಸಿದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದವರ ಬಗ್ಗೆ ಮಾತನಾಡುತ್ತ ಶ್ರೀರಾಮರೆಡ್ಡಿಯವರು ಇವರಿಬ್ಬರೂ ಸೇರಿ ಸರ್ಕಾರ ರಚಿಸಲು ಸಿದ್ಧರಾಗಿದ್ದಾರೆಯೇ ಎಂದು ಸದನಕ್ಕೆ ಜನತೆಗೆ ಸ್ಪಷ್ಟಪಡಿಸಬೇಕು ಎಂದರು. ಅಂತಹ ಉದ್ದೇಶ ಇಲ್ಲದಿದ್ದರೆ, ಕೇವಲ ಸರ್ಕಾರ ಉರುಳಿಸುವುದಷ್ಟೇ ಉದ್ದೇಶವಾಗಿದ್ದರೆ 'ನೀವು ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಶೂನ್ಯತೆ, ಆಡಳಿತಾತ್ಮಕ ಶೂನ್ಯತೆಯನ್ನು ತರುವುದಕ್ಕೆ ಪ್ರಯತ್ನ ಪಡುತ್ತೀರಿ ಎಂದು ನಾವು ಅಭಿಪ್ರಾಯ ಪಡಬೇಕಾಗುತ್ತದೆ" ಎಂದ ಶ್ರೀರಾಮರೆಡ್ಡಿಯವರು "ಇವರು ಮತ್ತು ಅವರು ರಾಜಿ ಮಾಡಿಕೊಂಡು ಜನರಿಗೆ ಟೋಪಿ ಹಾಕುತ್ತಿದ್ದಾರೆ" ಎಂದು ಟೀಕಿಸಿದರು.

ಬೆಲೆಯೇರಿಕೆ, ಕಾನೂನು-ವ್ಯವಸ್ಥೆ ಸ್ಥಿತಿ, ಆಡಳಿತದಲ್ಲಿ ಸಡಿಲಿಕೆ, ನಿರ್ಲಕ್ಷ ಇತ್ಯಾದಿಗಳು ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪ್ರಸ್ತಾಪನೆಗೊಂಡು ಪ್ರಶ್ನೆಗಳನ್ನು ಶ್ರೀರಾಮರೆಡ್ಡಿಯವರು ಒಂದೊಂದಾಗಿ ವಿಶ್ಲೇಷಿಸಿದರು. ಬೆಲೆಯೇರಿಕೆಯ ಪ್ರಶ್ನೆಯ ಹಿನ್ನಲೆಯಲ್ಲಿ ಈ ಅವಿಶ್ವಾಸ ನಿರ್ಣಯ ಮಂಡಿಸುವ ನೈತಿಕ ಹಕ್ಕು ಕಾಂಗ್ರೆಸ್‌ಗಾಗಲೀ ಬಿಜೆಪಿಗಾಗಲೀ ಇಲ್ಲ, ಏಕೆಂದರೆ ಬೆಲೆಯೇರಿಕೆಗೆ ಕಾರಣ 1991 ರಲ್ಲಿ ಕಾಂಗ್ರೆಸ್ ಆರಂಭಿಸಿದ ಆರ್ಥಿಕ ನೀತಿಗಳು. ಸಂಯುಕ್ತ ರಂಗ ಅದನ್ನು ಮುಂದುವರೆಸಿತು. ಬಿಜೆಪಿಯೂ ಮುಂದುವರೆಸಿದೆ. ದೆಹಲಿಯಲ್ಲಿ ಈರುಳ್ಳಿಗೆ ಕೆ.ಜಿ.ಗೆ 60 ರೂ. ಇದೆ, ಅಲ್ಲಿ ಯಾರ ಸರ್ಕಾರ ಇದೆ ಎಂದು ಶ್ರೀರಾಮರೆಡ್ಡಿಯವರು ಬಿಜೆಪಿಯವರನ್ನು ತೀಕ್ಷ್ಣವಾಗಿ ಪ್ರಶ್ನಿಸಿದರು. 'ಮೂಲಭೂತ ಆರ್ಥಿಕ ನೀತಿಗಳಲ್ಲಿ ನಿಮ್ಮ ಮೂವರಲ್ಲೂ ಯಾವುದೇ ಭಿನ್ನಾಭಿಪ್ರಾಯವಿಲ್ಲ" ಎಂದು ಅವರು ಒತ್ತಿ ಹೇಳುತ್ತಾ ಅವಿಶ್ವಾಸ ನಿರ್ಣಯವನ್ನು ವಿರೋಧಿಸಿತು.

ಕಾನೂನು-ವ್ಯವಸ್ಥೆ ಹದಗೆಟ್ಟಿದೆಯೆಂಬುದು ನಿಜ. ಆದರೆ ಇಲ್ಲೂ ಕೂಡಾ ಬಿಜೆಪಿಯ ರಾಜ್ಯ ಸರಕಾರವಿರುವ ಉತ್ತರ ಪ್ರದೇಶದ ಸ್ಥಿತಿ ಹೇಗಿದೆಯೆಂದು ಅವರು ಪ್ರಶ್ನಿಸಿದರು. ಅದೇ ರೀತಿ ಜನತಾದಳ ಸರ್ಕಾರದ ಪೋಲೀಸ್ ನೀತಿಯನ್ನು ಶ್ರೀರಾಮರೆಡ್ಡಿಯವರು ಕಟುವಾಗಿ ಟೀಕಿಸಿದರು. ಅನಗತ್ಯವಾಗಿ ಕಾರ್ಮಿಕ ವಿವಾದಗಳಲ್ಲಿ ಪೋಲೀಸರು ಆಡಳಿತ ವರ್ಗಗಳ ಪರ ವಹಿಸುವುದನ್ನು ಬಲವಾಗಿ ಖಂಡಿಸಿದರು.

ಜನತಾದಳದೊಳಗಿನ ಭಿನ್ನಮತದ ಪಿಡುಗಿನ ಬಗ್ಗೆ ಹೇಳುತ್ತಾ ಇವರಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳು ಇದ್ದಂತಿಲ್ಲ, ರಾಜ್ಯದ ಅಭಿವೃದ್ಧಿಯ ಬಗ್ಗೆಯೂ ಭಿನ್ನಾಭಿಪ್ರಾಯಗಳಿದ್ದಂತಿಲ್ಲ ಎಂದು ಗಮನಿಸಿದ ಶ್ರೀರಾಮರೆಡ್ಡಿಯವರು 'ಇವರ ಬೀದಿರಂಪ ವರ್ಷಕ್ಕೆ ಒಂದು ಸಾರಿ ಪ್ರಾರಂಭವಾಗುತ್ತದೆ - ಪ್ರತಿವರ್ಷ ಸತ್ತ ನಂತರ ಶ್ರಾದ್ಧ ಮಾಡುವ ರೀತಿಯಲ್ಲಿ. ಇವರಿಗೆ ಶ್ರಾದ್ಧ ಆದರೆ ತೊಂದರೆಯಿಲ್ಲ. ಆದರೆ ಕರ್ನಾಟಕ ರಾಜ್ಯದ ಜನತೆಗೆ ಯಾವ ರೀತಿ ಶ್ರಾದ್ಧ ಆಗುತ್ತದೆ ಎಂದು ಇವರು ಯೋಚಿಸುವುದಿಲ್ಲ" ಎಂದು ಖೇದ ವ್ಯಕ್ತಪಡಿಸಿದರು. ಆಂತರಿಕ ಜಗಳದಿಂದ ಜನತೆಯ ಮೇಲೆ ಏನೆಲ್ಲಾ ಪರಿಣಾಮವಾಗುತ್ತದೆ ಅನ್ನುವ ಕನಿಷ್ಠ ಆಲೋಚನೆ ಜನತಾದಳದವರಿಗೆ ಇರಬೇಕಾಗಿತ್ತು ಎಂದ ಅವರು ಇವರ ಈ ವರ್ತನೆಗಳಿಂದಾಗಿ ಹೇಗೆ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ ಎಂದು ಉದಾಹರಣೆಗಳನ್ನು ನೀಡಿದರು. ಆದ್ದರಿಂದ ಜನತಾದಳ ಸರಕಾರ ರಾಜಕೀಯ ಜವಾಬ್ದಾರಿಯಿಂದ ಪ್ರಾಮಾಣಿಕವಾಗಿ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು, ಈಗಿನ ಗಂಭೀರ ರಾಜಕೀಯ ಪರಿಸ್ಥಿತಿಯಲ್ಲಿ ಕರ್ನಾಟಕಕ್ಕೆ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕು ಎಂದು ಅವರು ಆಗ್ರಹಪಡಿಸಿದರು.

ಇ.ಎಂ.ಎಸ್. ಭವನದ ಶಂಕು ಸ್ಥಾಪನೆ : ನ.೨೯ ರಂದು

ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್ ರವರು ನವೆಂಬರ್ ೨೯ ರಂದು ಬೆಂಗಳೂರಿನಲ್ಲಿ 'ಎ.ಕೆ. ಗೋಪಾಲನ್ ಸ್ಮಾರಕ ಸಾಮಾಜಿಕ ಶಿಕ್ಷಣ ದತ್ತಿ' ಯೋಜಿಸಿರುವ 'ಇ.ಎಂ.ಎಸ್. ಭವನ'ದ ಅಡಿಗಲ್ಲನ್ನು ಹಾಕಲಿದ್ದಾರೆ. ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ನಿವೇಶನದಲ್ಲಿ ಈ ಸಮಾರಂಭ ಬೆಳಿಗ್ಗೆ ೧೧ ಗಂಟೆಯಿಂದ ನಡೆಯುತ್ತದೆ ಎಂದು ದತ್ತಿಯ ಪಾತ್ರರು ತಿಳಿಸಿದ್ದಾರೆ.

ಅವಿಶ್ವಾಸ ನಿರ್ಣಯ ಮಂಡಿಸಿದ್ದ ಭಾ.ಜ.ಪ.ದ ವಿರುದ್ಧ ಅವಿಶ್ವಾಸ

ಸಂಪಾದಕೀಯ

ವಿಧಾನ ಸಭೆಯಲ್ಲಿ ಜನತಾದಳ ಸರ್ಕಾರದ ವಿರುದ್ಧ ಕಾಂಗ್ರೆ ಹಾಗೂ ಭಾಜಪಕ್ಷಗಳೆರಡೂ ಅವಿಶ್ವಾಸ ನಿರ್ಣಯ ಮಂಡಿಸಿವೆ. ಈ ಗೊತ್ತುವಳಿಯ ಮೇಲೆ ಚರ್ಚೆ ನಡೆಯುತ್ತಿದೆ. ಈ ಅವಿಶ್ವಾಸ ನಿರ್ಣಯದ ಬಗ್ಗೆ ಪಕ್ಷದ ನಿಲುವೇನು ಎಂಬ ಪ್ರಶ್ನೆ ಎದುರಾಗಿದೆ. ಈ ಪ್ರಶ್ನೆಯಲ್ಲಿಯೇ ರಾಜ್ಯದ ಜನತಾದಳದ ಸರ್ಕಾರದ ಬಗ್ಗೆ ಪಕ್ಷದ ನಿಲುವೇನು ಎಂಬ ಪ್ರಶ್ನೆಯೂ ಅಡಕವಾಗಿದೆ. ಈ ಸಂದಿಗ್ಧ ಪ್ರಶ್ನೆಯನ್ನು ಪಕ್ಷ ಜನತಾದಳ ಸರ್ಕಾರ ರಾಜ್ಯದಲ್ಲಿ 1994 ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಆಗಿಂದಾಗೆ ಎದುರಿಸಬೇಕಾಗಿ ಬಂದಿದೆ. ಪಕ್ಷದ ರಾಜ್ಯ ಸಮಿತಿಯ ನಿರ್ಣಯಗಳು ಮುಖ್ಯವಾಗಿ ಇತ್ತೀಚಿಗಿನ ಕೋಲಾರ ರಾಜ್ಯ ಸಮ್ಮೇಳನದ ರಾಜಕೀಯ ಸಂಘಟನಾ ವರದಿ ರಾಜ್ಯ ಜನತಾದಳ ಸರ್ಕಾರದ ಮೌಲ್ಯ ಮಾಪನ ಮಾಡಿದೆ.

ಕಾಂಗ್ರೆ ಪಕ್ಷವಂತೂ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯನ್ನು ಆಕ್ರಮಣಕಾರಿಯಾಗಿಯೇ ಆರಂಭಿಸಿ 23 ಆರೋಪಗಳ ಪಟ್ಟಿಯನ್ನು ಸಲ್ಲಿಸಿತು. ಅದರ ಪಕ್ಷದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಜ್ಯ ಅಧ್ಯಕ್ಷ ಧರ್ಮಸಿಂಗ್ ಮೊದಲಾದವರು ಮಾತನಾಡಿ ಆರೋಪ ಪಟ್ಟಿಯನ್ನು ಸಮರ್ಥಿಸಿದ್ದಾರೆ. ವಿರೋಧ ಪಕ್ಷದ ನಾಯಕ ಸ್ಥಾನವನ್ನು ಕಳೆದುಕೊಂಡಿರುವ ಬಿಜೆಪಿ ಪಕ್ಷವೂ ಈಶ್ವರಪ್ಪ, ಯಡಿಯೂರಪ್ಪನವರ ಮೂಲಕ ತನ್ನ ಅವಿಶ್ವಾಸ ನಿರ್ಣಯವನ್ನು ಸಮರ್ಥಿಸಿಕೊಂಡಿದೆ. ಈ ಚರ್ಚೆಯ ಸಮಯದಲ್ಲಿ ಅನೇಕ ಬಾರಿ ಕಾಂಗ್ರೆ ಹಾಗೂ ಬಿಜೆಪಿ ಪಕ್ಷಗಳ ನಡುವೆಯೇ ಪರಸ್ಪರ ವಾಗ್ಯುದ್ಧ ನಡೆದದ್ದು ಈ ಪಕ್ಷಗಳು ಮುಂದೆ ಬರಲಿರುವ ಚುನಾವಣೆಯಲ್ಲಿ ರಾಜ್ಯದ ಆಡಳಿತಾಧಿಕಾರಕ್ಕಾಗಿ ನಡೆಸಲಿರುವ ಪ್ರಬಲ ಪೈಪೋಟಿಯನ್ನು ಸೂಚಿಸಿದೆ. ಅದೇ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆದ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ರಾಜ್ಯ ಶಿಕ್ಷಣ ಸಚಿವರುಗಳಿಬ್ಬರೂ ಸರಸ್ವತಿ ವಂದನವನ್ನು ಪಶ್ಚಿಮಬಂಗಾಳ ಮೊದಲಾದ ಇತರ ಭಾಜಪೇತರ ಪಕ್ಷಗಳ(ಭಾಜಪ ಬೆಂಬಲದ ಎರಡು ಪಕ್ಷಗಳ ಶಿಕ್ಷಣ ಸಚಿವರೂ ಸೇರಿದಂತೆ) ಜೊತೆ ಬಹಿಷ್ಕರಿಸಿದ ಬಗ್ಗೆ ಭಾಜಪದ ನಾಯಕ ಈಶ್ವರಪ್ಪ ಸರ್ಕಾರವನ್ನು ಖಂಡಿಸಲೆತ್ನಿಸಿದಾಗ ಎಲ್ಲಾ ಜಾತ್ಯಾತೀತ ಪಕ್ಷಗಳು ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವ ಕಾಂಗ್ರೆ ಹಾಗೂ ಸಿಪಿಐ(ಎಂ) ಜೊತೆಗೆ ಇತರ ಪಕ್ಷಗಳು ಸೇರಿ ಒಗ್ಗೂಡಿ ಭಾಜಪದ ವಾದವನ್ನು ಮೂಲೆಗುಂಪು ಮಾಡಿದ್ದು ಚರ್ಚೆಯ ಪ್ರಧಾನ ಅಂಶವಾಗಿತ್ತು. ಈ ರೀತಿ ತೀವ್ರ ಮುಖಭಂಗಕ್ಕೊಳಗಾದ ಅದರ ನಾಯಕ ತಮ್ಮ ವಾದವನ್ನು ಅರ್ಧಕ್ಕೆ ಕೈ ಬಿಡಬೇಕಾಯಿತು. ಹಾಗೂ ಅದರ ರಾಜ್ಯ ಅಧ್ಯಕ್ಷ ಯಡಿಯೂರಪ್ಪನವರು ಈ ತೇಜೋವಧೆಗೆ ಪ್ರತೀಕಾರ ಮಾಡಲು ನಾನು ಮಾತನಾಡುವಾಗ ಬೇರೆ ಯಾರಿಗೂ, ಸರ್ಕಾರಕ್ಕೂ ಕೂಡ ಮಧ್ಯೆ ಪ್ರವೇಶಿಸಲು ಅವಕಾಶ ನೀಡುವುದಿಲ್ಲ ಎಂದು ಹಠಮಾಡಿ ತಮ್ಮ ಪಕ್ಷದ ವಿಧಾನಸಭಾ ನಾಯಕ ಈಶ್ವರಪ್ಪನವರ ಮುಖಭಂಗವನ್ನು ಇದಕ್ಕೆ ಕಾರಣ ನೀಡಿ ಕೊನೆಗೆ ಸ್ಪೀಕರ್‌ರವರಿಂದ ಹಿಡಿದು ಎಲ್ಲರಿಂದಲೂ ಮತ್ತೆ ಮುಖಭಂಗಕ್ಕೊಳಗಾಗಿ ಫ್ಯಾಸಿಸ್ಟ್ ಎಂದೂ, ಪ್ರಜಾಸತ್ತಾತ್ಮಕ ಚರ್ಚೆಗೆ ಬಿಜೆಪಿ ತಯಾರಿಲ್ಲ ಎಂಬ ಕಟುಟೀಕೆಗೆ ಗುರಿಯಾಗಬೇಕಾಯಿತು.

ಜನತಾದಳದ ಹಾಗೂ ಅದರ ಸಹ ಸದಸ್ಯರೆಲ್ಲರೂ ಒಟ್ಟಾಗಿ ಅವಿಶ್ವಾಸ ನಿರ್ಣಯವನ್ನು ಎದುರಿಸುತ್ತೇವೆ ಎಂದು ಭಿನ್ನಮತೀಯ ಶಾಸಕರ ನಾಯಕ ದೇವೇಗೌಡರು ಘೋಷಿಸಿರುವುದರಿಂದ

ಪುಟ 2 ನೋಡಿ

ನವೆಂಬರ್ 16: ಬೆಂಗಳೂರು ಚಲೊ

ಸುತ್ತ ಮುತ್ತೆಲ್ಲಾ ಬೆಂಕಿ ಬಿದ್ದಿದೆ - ಬನ್ನಿ ಧಾವಿಸಿ ನಮ್ಮ ಮನೆಯನ್ನು ಕಾಪಾಡಿಕೊಳ್ಳಲು

ಜಿ.ಎನ್.ನಾಗರಾಜ್

ಸುತ್ತಮುತ್ತೆಲ್ಲಾ ಬೆಂಕಿಬಿದ್ದಿದೆ
ದಹ ದಹಿಸುತ್ತಿವೆ ದೇಶ ದೇಶಗಳು
ಸುಡುತ್ತಿವೆ ಕೋಟಿ ಕೋಟಿ ಜನರ ಬದುಕು
ಹೊತ್ತಿಕೊಳ್ಳುವ ಮೊದಲೇ ನಮ್ಮ ಮನೆ
ಸುಟ್ಟುಕರಿಕಾಗುವ ಮೊದಲೇ ನಮ್ಮೆಲ್ಲರ ಬದುಕು
ಎಚ್ಚರಾಗೋಣ ಬನ್ನಿ, ಬನ್ನಿ ಬೆಂಗಳೂರಿಗೆ

ನಾನು ತಾನೆಂದು ಮೊನ್ನೆ ಮೊನ್ನೆಯವರೆಗೆ ಮೆರೆಯುತ್ತಿದ್ದ ಹಲವು ದೇಶಗಳು "ಏಷ್ಯಾದ ಹುಲಿ" ಗಳೆಂಬವು, ಇಂದು ಇಲಿಗಳಾಗಿವೆ. ಥೈಲಾಂಡಿನಿಂದ ಆರಂಭವಾಗಿ ಇಂಡೋನೇಷ್ಯ, ಮಲೇಷ್ಯಾ ಫಿಲಿಫೈನ್ಸ್‌ಗಳನ್ನು ಸುಟ್ಟು ದ.ಕೊರಿಯಕ್ಕೆ ಸಾಗಿದೆ. ಅಲ್ಲಿಗೆ ನಿಂತಿತೇ? ಖಂಡ ಖಂಡಗಳನ್ನು ದಾಟಿ ಮೆಕ್ಸಿಕೊ, ಬ್ರೆಜಿಲ್, ಅರ್ಜಂಟೈನಾಗಳನ್ನು ಸುಡಲಾರಂಭಿಸಿದೆ. ವಿಶ್ವವನ್ನೇ ಅಲುಗಾಡಿಸಿದೆ.

ಈ ಎಲ್ಲಾ ದೇಶಗಳ ಕೋಟಿ ಕೋಟಿ ಜನರ ಆಕ್ರಂದನ ಮುಗಿಲು ಮುಟ್ಟುತ್ತಿದೆ. ಇಂಡೋನೇಷಿಯಾದಲ್ಲಿ ಆಹಾರಕ್ಕಾಗಿ, ಬಟ್ಟೆಗಾಗಿ ಬಡಜನರ ಪರದಾಟ ನೋಡಿದ್ದಿರಾ? ಸಾವಿರಾರು ಅಂಗಡಿಗಳ ಲೂಟಿಯ ಕಥೆ ಕೇಳಿದ್ದೀರಾ?

ಅದು ಎಲ್ಲಿಯೋ ಸಾವಿರಾರು ಮೈಲಿಗಳ ದೂರದಲ್ಲಿ ಎನಿಸುತ್ತಿದ್ದಂತೆಯೇ ಆ ಧ್ವನಿ ಹತ್ತಿರ ಹತ್ತಿರಕ್ಕೆ ಬರುತ್ತಾ ಬಿದರ್,ಗುಲ್ಬರ್ಗಗಳ ರೈತರ ಮನೆಗಳ ಗೋಳಾಗಿ ಮಾರ್ದನಿಸುತ್ತಿರುವುದು ಕೇಳುತ್ತಿದೆಯೇ? ಅಲ್ಲಿಯ ತೊಗರಿಬೆಳೆಗಾರರು, ಆಂಧ್ರದ ಹತ್ತಿ ಬೆಳೆಗಾರರು, ಮಹರಾಷ್ಟ್ರ, ರಾಜಸ್ತಾನ ಅಷ್ಟೇ ಏಕೆ ಕೃಷಿ ಸಂಪತ್ತಿನ ಸಿರಿಬೀಡು ಪಂಜಾಬು, ಹರಿಯಾಣಗಳ ಮನೆಗಳಿಂದಲೂ ಈ ಆಕ್ರಂದನ ಪ್ರತಿಧ್ವನಿಸುತ್ತಿಲ್ಲವೆ? ಮತ್ತೆ ಮತ್ತೆ ಹತ್ತಿರಾಗುತ್ತಾ ಸಿರಾದಲ್ಲಿ, ಬಾಗೂರು-ನವಿಲೆಯಲ್ಲಿ ಧಿಕ್ಕಾರದ ಧ್ವನಿಗಳಾಗಿ, ಮರುಕ್ಷಣವೇ ಲಾಟಿಗಳ ಆರ್ಭಟಕ್ಕೆ, ಗುಂಡೇಟಿನ ಹೊಡೆತಕ್ಕೆ ಚೀರಾಡುವ ಧ್ವನಿಯಾಗಿ ಮಾರ್ದನಿಸುತ್ತಿರುವುದು ಕೇಳುತ್ತಿಲ್ಲವೇ? ಬೆಂಗಳೂರೆಂಬ ಝಗ ಝಗನೆ ಕೋರೈಸುವ ಬೆಳಕಿನಡಿಯ ಕತ್ತಲೆಯಾಗಿ ಆಹುತಿಯಾಗುತ್ತಿರುವ ಬದುಕುಗಳ ಕೊರಗು ನಿಮ್ಮ ಕಿವಿಗೆ ಬೀಳುತ್ತಿಲ್ಲವೆ? ಹೆಜ್ಜಾಲದಲ್ಲಿ ಸಿಡಿದ ಗುಂಡುಗಳು ಎಷ್ಟು ಬದುಕನ್ನು ಆಹುತಿ ತೆಗೆದುಕೊಂಡಿವೆ ಹೇಳಿ? ಅದೆಷ್ಟು ಲಕ್ಷ ಮನೆಗಳಲ್ಲಿ ಸಾಯಲಾರದೆ ಇತ್ತ ಬದುಕಲಾರದೆ ಜೀವನವೆಂಬುದು ಬವಣೆ ಪಡುತ್ತಿದೆ ಹೇಳಿ?

ಸುತ್ತಮುತ್ತೆಲ್ಲಾ ಬೆಂಕಿಬಿದ್ದಿದೆ. ಐ.ಎಂ.ಎಫ್.-ವಿಶ್ವಬ್ಯಾಂಕ್‌ಗಳ ಮೂಲಕ ಬೆಂಕಿಹಚ್ಚಿದ ಕ್ರೂರಿಗಳು-ಅಮೇರಿಕಾ ಮೊದಲಾದ ದೇಶಗಳ ಸಾಮ್ರಾಜ್ಯಶಾಹಿಗಳು-ಮೈಕಾಯಿಸಿಕೊಳ್ಳುತ್ತಿದ್ದಾರೆ. ಆ ಬೆಂಕಿಯ ದೂರದ ಝಳಕ್ಕೆ ನಮ್ಮಲ್ಲನೇಕರ ಬದುಕು ಸೀದು ಕರಕಾಗಿದೆ. ಆ ಬೆಂಕಿಯನ್ನು ನಮ್ಮ ದೇಶದತ್ತ ದೂಡುತ್ತಾ ನಮ್ಮ ದೇಶವನ್ನು ನುಂಗಿ ನೊಣೆಯುವುದನ್ನು ಕಾಯುತ್ತ ಕುಳಿತಿದ್ದಾರೆ ಅದೇ ಕ್ರೂರಿಗಳು. ಆ ಬೆಂಕಿ ಬಡಬಾನಲದಂತೆ ಧಾವಿಸಿ ಬಂದು ನಮ್ಮನ್ನು ಸುಡುವವರೆಗೂ ಕಾದು ಕುಳಿತುಕೊಳ್ಳಬೇಕೇ? ಅಥವಾ ಈಗಲೇ ಎಚ್ಚರಾಗಬೇಕೆ? ನವೆಂಬರ್ 16, ಡಿ.11 ಕೇಳುತ್ತಿರುವ ಸವಾಲಿದು. ಇದು ಭಾರತ ದೇಶದ ಸ್ವಾತಂತ್ರ್ಯದ ಸವಾಲು. ನಮ್ಮ ನಿಮ್ಮೆಲ್ಲರ ಬದುಕಿನ ಸವಾಲು.

ಜೊತೆಗೆ ಮತ್ತೊಂದು ಸವಾಲಿದೆ - ಡಿ.6.1992 ರ ನಂತರ ಭಾರತವನ್ನೆಲ್ಲಾ ಸುಟ್ಟ ಬೆಂಕಿ, ಬಾಂಬೆಯನ್ನು ತಿಂಗಳಗಟ್ಟಲೆ ದಹಿಸಿದ ಬೆಂಕಿ, ಕೊಯಂಬತ್ತೂರನ್ನು ಇಂದೂ ಕೂಡ ಕಾಡುತ್ತಿರುವ ಬೆಂಕಿ ಮತ್ತಷ್ಟು ಬೆಳೆಯುತ್ತಿದೆ. ಒಳಗೊಳಗೇ ತಣ್ಣನೆ ಬೆಳೆಯುತ್ತಿದೆ. ಉತ್ತರ ಪ್ರದೇಶ, ರಾಜಸ್ತಾನಗಳ ಮಕ್ಕಳ ಪಠ್ಯ ಪುಸ್ತಕಗಳಲ್ಲಿ, ಭಾರತೀಯ ಇತಿಹಾಸ ಸಂಶೋಧನ ಮಂಡಳಿಯಲ್ಲಿ, ಸಣ್ಣ ರಾಜ್ಯಗಳ ಕುತಂತ್ರದಲ್ಲಿ, ಅಟಂಬಾಂಬಿನ ಆರ್ಭಟದಲ್ಲಿ ಒಮ್ಮೆಗೇ ಮುಗಿಲಿಗೇರಿ ದಹಿಸಬೇಕೆನ್ನುತ್ತಿದೆ. ಇದು ನಮ್ಮೊಳಗಿನ ಬೆಂಕಿ. ವಿಶ್ವದಾಳದ ರಕ್ಕಸ ಕುಲಗಳು ತುಪ್ಪ ಹಾಕಿ ಬೆಳೆಸುತ್ತಿರುವ ಬೆಂಕಿ. ಭುಗಿಲೆದ್ದು ನಿಂತು 1947 ರಲ್ಲಿ ಈ ಮಹಾನ್ ದೇಶವನ್ನೇ ಹೋಳಾಗಿಸಿದ ಬೆಂಕಿ ಮತ್ತೆ ದೇಶವೆಲ್ಲಾ ಹಬ್ಬಿ ಲಕ್ಷಾಂತರ ಬದುಕನ್ನು ನುಂಗಿ ನೊಣೆಯಲು ಕಾಯುತ್ತಿದೆ, ಸರಿಯಾದ ಸಮಯಕ್ಕಾಗಿ.

ಪುಟ 8 ಕ್ಕೆ

ಬಿಚ್ಚು ಮೆಯಾಗೆ ನವಂಬರ್ 9-15, 1998

ಇತಿಹಾಸದ ಪುಟಗಳಿಂದ

"ವಿಯೆಟ್ನಾಂ-ಆನೆಯನ್ನು ಮಣಿಸಿದ ಮಿಡತೆಗಳು"

ಇದು ಟೆರಿಕ್ಸ್ಟಾನ್ ಎಂಬ ಅಮೆರಿಕನ್ ಬರೆದ ಇಂಗ್ಲೀಷ್ ಪುಸ್ತಕದ ಕನ್ನಡ ಅನುವಾದ. ವಿಯೆಟ್ನಾಮ್ ಜನ ಸಾಮ್ರಾಜ್ಯಶಾಹಿಗಳನ್ನು ಮಣಿಸಿ ಸ್ವಾತಂತ್ರ್ಯ ಪಡೆದ ರೋಚಕ ಕತೆ. ಇದರ ಒಂದು ಅಧ್ಯಾಯವನ್ನು ಇಲ್ಲಿ ಕೊಡಲಾಗಿದೆ. ಇದು ಅಮೆರಿಕ ತನ್ನ ಎಲ್ಲಾ ದೈತ್ಯ ಬಲದೊಂದಿಗೆ 60 ರ ದಶಕದಲ್ಲಿ ಎರಗಿದಾಗ ಅಲ್ಲಿನ ಜನಜೀವನ ಹೇಗಿದ್ದಿರಬಹುದು? ಎನ್ನುವ ಚಿತ್ರ ಕೊಡುವ ಅಧ್ಯಾಯವನ್ನು ಇಲ್ಲಿ ಕೊಡಲಾಗಿದೆ. ಕನ್ನಡಾನುವಾದ ಕೃಪೆ: ಬೆಳ್ಳಿ ಚುಕ್ಕಿ ಪ್ರಕಾಶನ. *(ಕಳೆದ ಸಂಚಿಕೆಯಿಂದ)*

ನಿರರ್ಥಕ ಬಾಂಬುಗಳು:

ಉತ್ತರ ವಿಯೆಟ್ನಾಮಿನ ಮೇಲೆ ನಡೆದ ಬಾಂಬುಧಾಳಿ ಬಹುಮಟ್ಟಿಗೆ ನಿರರ್ಥಕವಾಗಿದ್ದಿತ್ತು. ಬಹಳಷ್ಟು ಸಂಖ್ಯೆಯ ಜನರೂ ಸಾವನ್ನಪ್ಪಿದ್ದರು. ಆಸ್ಪತ್ರೆಗಳು,ಶಾಲೆಗಳು, ಪ್ರಾರ್ಥನಾ ಮಂದಿರಗಳು ಹಳ್ಳಿಗಳು, ನಗರಗಳು, ಹೆದ್ದಾರಿಗಳು, ರೈಲುದಾರಿಗಳು, ಸೇತುವೆಗಳು ಹೀಗೆ ಎಲ್ಲಾ ನಾಶವಾಗಿದ್ದುವು. ಇವೆಲ್ಲವುಗಳನ್ನು ವ್ಯವಸ್ಥಿತ ರೀತಿಯಲ್ಲಿ ನಾಶಪಡಿಸಲಾಗಿತ್ತು. ಇದರ ಹಿಂದೆ ಜನರನ್ನು ಮಾನಸಿಕವಾಗಿ ದುರ್ಬಲಗೊಳಿಸುವ ಒಂದು ಹುನ್ನಾರವಿತ್ತು. ಇದು ಎಷ್ಟೊಂದು ಅನೀತಿಯುತವಾಗಿತ್ತೆಂದರೆ ಹತ್ತು ವರ್ಷದ ಬಾಲಕನೊಬ್ಬನು ತನ್ನ ಕೋಣಗಳಿಗೆ ಹೊಲದಲ್ಲಿ ನೀರುಣಿಸುತ್ತಿರುವಾಗಲೇ ಆತನನ್ನು ಬಂದೂಕಿನಿಂದ ಸುಟ್ಟು ಹಾಕಿದರು. ರಾತ್ರಿಯ ಹೊತ್ತು ಜನ ವಸತಿಗಳ ಮೇಲೆ ಬಾಂಬು ಧಾಳಿ ನಡೆಯುತ್ತಿತ್ತು. ಶಾಲೆಯು ಆರಂಭವಾಗುವ ಹೊತ್ತಿನಲ್ಲಿಯೇ ರಸ್ತೆ ಮತ್ತು ಶಾಲೆಗಳ ಮೇಲೆ ಬಾಂಬು ಧಾಳಿ ನಡೆಸಲಾಗುತ್ತಿತ್ತು. ಜಾನ್ಸನ್ ಹೇಳುವ ಪ್ರಕಾರ ಉತ್ತರ ವಿಯೆಟ್ನಾಮಿನ ಉಕ್ಕು ಮತ್ತು ಕಾಂಕ್ರೀಟ್ ಅವರ ಗುರಿಯಾಗಿತ್ತು. ಆದರೆ ಇಲ್ಲಿ ಗಮನಿಸಬಹುದಾದ ವಿಷಯವೇನೆಂದರೆ ಇವೆರಡು ಅಲ್ಲಿ ಇರಲೇ ಇಲ್ಲ ಎನ್ನುವಷ್ಟು ಸಣ್ಣಪ್ರಮಾಣದಲ್ಲಿದ್ದುವು. ಅಮೇರಿಕವು ಜನರ ಧೈರ್ಯದ ವಿರುದ್ಧ ಆಯುಧ ಹಿಡಿದು ಯುದ್ಧಕ್ಕಿಳಿದಿತ್ತು. ಅಲ್ಲಿ ಅವರು ಸೋಲುವುದೂ ಖಚಿತವಿತ್ತು.

ಹೋರಾಟದಲ್ಲಿ ಮಡಿದವರ ಸಂಖ್ಯೆ ಬಹಳ ಕಡಿಮೆ ಎಂಬುದೇ ವಿಯೆಟ್ನಾಮಿಗರ ಸ್ಥೈರ್ಯಕ್ಕೆ ಉತ್ತಮ ಉದಾಹರಣೆಯಾಗಬಲ್ಲುದು. ಇದಕ್ಕೆ ಬಹುಮುಖ್ಯ ಕಾರಣ ಉತ್ತರ ವಿಯೆಟ್ನಾಮಿನ ಜನರು ತಮ್ಮ ರಕ್ಷಣೆಗೆ ಮಾಡಿಕೊಂಡ ವ್ಯವಸ್ಥೆ, ಶಾಲೆ ಆಸ್ಪತ್ರೆ, ಮನೆಗಳಲ್ಲಿ, ಮಂಚಗಳ ಕೆಳಗೆ ಅವಿತುಕೊಂಡು ಸುಸಜ್ಜಿತ ಯುದ್ಧ ವಿಮಾನಗಳ ವಿರುದ್ಧ ಬಂಧೂಕುಧಾರಿಗಳಾದ ಹದಿಹರೆಯದ ಯುವತಿಯರು ಹೋರಾಡಿದರು. ಜೇನೋಸೈಡ್' ಯುದ್ಧವು ವಿಫಲವಾಗುವುದಕ್ಕೆ ವಿಯೆಟ್ನಾಮಿಗರ ಕ್ರಿಯಾತ್ಮಕ ಚಟುವಟಿಕೆಯೇ ಕಾರಣ, ಫ್ರೆಂಚರ ವಿರುದ್ಧ ನಡೆದ ಹೋರಾಟದಲ್ಲಿ ವಿಯೆಟ್ನಾಮಿಗರು ತಮ್ಮ ಸೈಕಲುಗಳಲ್ಲಿ ಅರ್ಧಟನ್ನುಗಳಷ್ಟು ಭಾರವನ್ನು ಸಾಗಿಸಿದ್ದರು. ಇವರ ಈ ವಿದ್ಯೆಯನ್ನು ಕುರಿತು ಅಮೇರಿಕನ್ನರು ಅರಿಯದವರಾಗಿದ್ದರು. ಅವೇ ಸೈಕಲ್ಲುಗಳಲ್ಲಿ ಈಗಲೂ ಇಟ್ಟಿಗೆ, ಕಲ್ಲಿದ್ದಲು ಮತ್ತು ಸಾಧ್ಯವಾದ ಎಲ್ಲಾ ವಸ್ತುಗಳನ್ನು ಹೇರಿಕೊಂಡು ರಸ್ತೆಗಳಲ್ಲಿ ಸಾಗಿಸುತ್ತಿದ್ದರು. ಇದೇ ಜನರು ಸೇತುವೆಯೊಂದು ಮುರಿದು ಬಿದ್ದಾಗ ರಾತ್ರೋ ರಾತ್ರಿ ಅಲ್ಲೊಂದು ಸೇತುವೆಯನ್ನು ಕಟ್ಟುತ್ತಿದ್ದರಲ್ಲದೆ ಬೆಳಗಾಗುವುದರೊಳಗೆ ಬಿಚ್ಚಿಡುತ್ತಿದ್ದರು. ಇದರಿಂದ ಹೆದ್ದಾರಿಗಳಲ್ಲಿ ಸಂಚರಿಸುವ ಟ್ರಕ್, ಮೊದಲಾದ ವಾಹನಗಳಿಗೆ ಅಡ್ಡಿಯಾಗುತ್ತಿತ್ತು. ರೈಲು ಮಾರ್ಗದಲ್ಲಿಯೂ ಕೂಡಾ ನಡೆಯುತ್ತಿದ್ದ ಬಾಂಬು ಧಾಳಿಯಲ್ಲಿ ಈ ಜನರು ನಿಮಿಷಗಳಲ್ಲೇ ಮತ್ತೆ ಚೇತರಿಸಿ ಕಾರ್ಯಾಚರಣೆಯನ್ನು ಪ್ರಾರಂಭಿಸುತ್ತಿದ್ದರು. ರೈಲು ಮಾರ್ಗಗಳು ನಿಷ್ಕ್ರಿಯವಾದುದರ ಬಗ್ಗೆ ವಿಯೆಟ್ನಾಮಿಗರಿಗೆ ಯಾರಾದರೂ ಸಂದೇಶವನ್ನು ಕೊಡುತ್ತಿದ್ದರು.

ದಕ್ಷತೆ:

ತಮ್ಮ ಸ್ವಾಭಿಮಾನ ಮತ್ತು ರಾಷ್ಟ್ರ ಪ್ರೇಮದಲ್ಲಿ ವಿಯೆಟ್ನಾಮಿಗರು ಸ್ವಾವಲಂಬಿಗಳು, ವಿಯೆಟ್ನಾಮಿಗರಲ್ಲದವರನ್ನು ಅವರು ಎಷ್ಟು ಮಾತ್ರಕ್ಕೂ ನಂಬುತ್ತಿರಲಿಲ್ಲ. ಜಾನ್ಸನ್ ಹೇಳುವ ಸುಳ್ಳುಗಳನ್ನು ನಂಬಲಾಗದಷ್ಟು ಅವರಿಗೆ ತಮ್ಮ ಸ್ವಸಾಮರ್ಥ್ಯದ ಮೇಲೆ ನಂಬಿಕೆ ಇತ್ತು. ಅನೇಕ ಬಾರಿ ಬಾಂಬುಧಾಳಿಗಳಿಂದ ಉಂಟಾದ ಇಪ್ಪತ್ತು ಅಡಿಗಳಷ್ಟು ಆಳದ ಜಾಗಗಳಲ್ಲಿ ನೀರನ್ನು ತುಂಬಿಸಿ ಮೀನುಗಳನ್ನು ಸಾಕಿ ದೇಶವು ಹಿಂದೆಂದೂ ಕಾಣದಿದ್ದ ಆರ್ಥಿಕ ಲಾಭವನ್ನು ಮಾಡುತ್ತಿದ್ದರು. ಯುದ್ಧದ ಸಂದರ್ಭದಲ್ಲಿ ಚೂರಾಗಿ ಬಿದ್ದ ವಿಮಾನದ ನಿಷ್ಪ್ರಯೋಜಕ ಭಾಗಗಳಿಂದ ವೈದ್ಯಕೀಯ ಉಪಕರಣ, ಹೂದಾನಿ ಮೊದಲಾದವುಗಳನ್ನು ಮಾಡುತ್ತಿದ್ದರು.

ಆ ದೇಶದ ಜನರ ಬದುಕಿನ ಪ್ರತಿಯೊಂದು ಅಂಗವೂ ಯುದ್ಧದಿಂದ ಒಂದಲ್ಲ ಒಂದು ರೀತಿಯ ಪ್ರಭಾವವನ್ನು ಪಡೆದುಕೊಂಡಿದೆ. ಆದರೂ ಅವರು ಯುದ್ಧವನ್ನು ಬತ್ತ ಬೆಳೆಯುವ ಕ್ರಿಯೆಯಷ್ಟೇ ಸಹಜವಾಗಿ ಅನುಭವಿಸುತ್ತಿದ್ದರು. ಉತ್ತರ ವಿಯೆಟ್ನಾಮ್ ಎನ್ನುವುದು ಒಂದು ಸಾಂಕೇತಿಕ ದೃಶ್ಯವೊಂದನ್ನು ಕಾಣಿಸುತ್ತಿತ್ತು. ಅಲ್ಲಿ ಸುಂದರಿಯರಾದ ಮತ್ತು ಆಕರ್ಷಕರಾದ ಎಳೆಯ ವಯಸ್ಸಿನ ಹೆಣ್ಣುಮಕ್ಕಳು ತಮ್ಮ ಹೆಗಲಲ್ಲಿ ಬಂದೂಕನ್ನು ಧರಿಸಿಯೇ ಭತ್ತದ ಗದ್ದೆಗಳಲ್ಲಿ ಕೆಲಸಮಾಡುತ್ತಿದ್ದರು. ಹನಾಯ್ ಬೀದಿಯಲ್ಲಿ ಸೈಕಲನ್ನು ತುಳಿಯುವ ವ್ಯಕ್ತಿಯೊಬ್ಬನ ಮುಂಭಾಗದಲ್ಲಿ ಬಿದಿರಿನ ಕುರ್ಚಿಯಲ್ಲಿ ಪುಟ್ಟ ಮಗುವೊಂದು ಕುಳಿತಿದ್ದು ಬಂದೂಕು ಆದರ ಬೆನ್ನಿನಲ್ಲಿ ತೂಗುತ್ತಿತ್ತು. ಕೈಗಳಲ್ಲಿ ಉದ್ದ ದಂಟಿನ ಕೆಂಪು ನೀಲಿ ಮತ್ತು ಬಿಳಿಯ ಹೂಗಳಿದ್ದುವು. ಇದು ಸಾಮಾನ್ಯವಾದೊಂದು ದೃಶ್ಯ.

ವಿಯೆಟ್ನಾಮಿನಲ್ಲಿ ಯುದ್ಧವೊಂದು ನಡೆಯುತ್ತಿದ್ದಿತು. ಅವರದನ್ನು ಬದುಕಿಗೆ ಅನುಕೂಲವಾಗುವಂತೆ ಬಳಸಿಕೊಳ್ಳುತ್ತಿದ್ದರು. ಇದಲ್ಲದೆ ಅವರಿಗೆ ಬೇರೆ ವಿಧಿಯಿರಲಿಲ್ಲ".


ಎರಡು ಸಾವಿರ ವರ್ಷಗಳ ವಿದೇಶಿ ಆಕ್ರಮಣದಿಂದ ಹಿಂದೆದೂ ಈ ಜಗತ್ತಿನಲ್ಲಿ ನಡೆಯದಿರುವಷ್ಟು ದಾರುಣವಾದ ಬಾಂಬುಧಾಳಿಗೆ ಗುರಿಯಾದ ವಿಯೆಟ್ನಾಮಿನ ಉತ್ತರ ಭಾಗವು ಜನರ ಪ್ರಯತ್ನದಿಂದ ಸ್ವತಂತ್ರವಾಯಿತು.

ಸಂಪಾದಕೀಯ

ಪುಟ 1 ರಿಂದ

ಜನತಾದಳ ಸರ್ಕಾರದ ವಿರುದ್ಧದ ಅವಿಶ್ವಾಸ ನಿರ್ಣಯ ಸೋಲುವುದು ಖಚಿತವಾಗಿದೆ. ಹಾಗಾಗಿ ಬಿಜೆಪಿಯು ವಿರುದ್ಧ ಅದರ ಕೇಂದ್ರ. ಸರ್ಕಾರದ ಕೋಮುವಾದೀಕರಣ ನೀತಿಯ ವಿರುದ್ಧ ಅವಿಶ್ವಾಸ ಮಂಡಿಸಿದ ಬಿಜೆಪಿಯ ಮೇಲೆಯೇ ಇಡೀ ಶಾಸನ ಸಭೆ ಅವಿಶ್ವಾಸ ಮಂಡಿಸಿದಂತಾಗಿದೆ. ಅವಿಶ್ವಾಸ ನಿರ್ಣಯದ ಮೇಲೆ ಇನ್ನೂ ಚರ್ಚೆ ಮುಂದುವರೆದಿದೆ. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಒಟ್ಟು ಸ್ವರೂಪದ ಬಗ್ಗೆ ಮುಂದಿನವಾರ ಇದೇ ಕಾಲಂನಲ್ಲಿ ಮತ್ತೆ ಚರ್ಚಿಸೋಣ.

ಹಳೆಯ ರಾಗಗಳ ಹೊಸ ಸಾಲ ನೀತಿ



ಭಾರತೀಯ ರಿಸರ್ವ್ ಬ್ಯಾಂಕ್ 1998-99ರ ಉತ್ತರಾರ್ಧಕ್ಕೆ ಹೊಸ ಸಾಲ ನೀತಿಯನ್ನು ಘೋಷಿಸಿದೆ. ಮೊದಲರ್ಧಕ್ಕೆ ಘೋಷಿಸಿದ ಸಾಲ ನೀತಿಗಿಂತ ಹೊಸತೇನೂ ಇಲ್ಲದ ಈ ನೀತಿಯಲ್ಲಿ ಜನಪರವಾದದ್ದೇನೂ ದುರ್ಬೀನುಹಾಕಿ ಹುಡುಕಿದರೂ ಸಿಗುವುದಿಲ್ಲ. ಆರ್ಥಿಕ ಇನ್ನೂ ಹದಗೆಡದಂತೆ ತಡೆಯಲು ಯಾವುದೇ ಪ್ರಯತ್ನವೂ ಅದರಲ್ಲಿಲ್ಲ. ಹಣಕಾಸು ವ್ಯವಸ್ಥೆಯ ಸಮೀಕ್ಷೆ ಮಾಡಿರುವ ಈ ನೀತಿ ಆರ್ಥಿಕದ ಬಗ್ಗೆ ಅಂತಹ ಆಶಾದಾಯಕ ಚಿತ್ರಣ ನೀಡುವುದಿಲ್ಲ. ಬ್ಯಾಂಕುಗಳನ್ನು ಬಡವರಿಂದ ಜನ ಸಾಮಾನ್ಯರಿಂದ ದೂರಕ್ಕೆ ಕೊಂಡೊಯ್ಯುವ ನೀತಿಯಲ್ಲಿ ಯಾವುದೇ ಬದಲಾವಣೆಯಿಲ್ಲ. ಬಂಡವಾಳಿಗರಿಗೆ, ಶ್ರೀಮಂತರಿಗಾಗಿ ಬ್ಯಾಂಕುಗಳು-ಅಲ್ಲಿ ಇಲ್ಲಿ ಏನಾದರೂ ಜನಸಾಮಾನ್ಯರಿಗೆ ತೊಟ್ಟಿಕ್ಕ ಬಹುದು- ಆದರೆ ಶ್ರೀಮಂತರಿಗೇ ಎಲ್ಲ ಹಣಕಾಸು ಸೇವೆಗಳು ಎಂಬುದು ಈ ನೀತಿಗಳ ತಳದಲ್ಲೇ ಇದೆ.

ಹಣಕಾಸು ವ್ಯವಸ್ಥೆಯ ಸಮೀಕ್ಷೆ ಮತ್ತು ಸಾಲ ನೀತಿಯ ಮುಖ್ಯಾಂಶಗಳು ಹೀಗಿವೆ.

- ಒಟ್ಟು ಆಂತರಿಕ ಉತ್ಪಾದನೆಯ ಅಂದಾಜು ತೀರ ಆಶಾದಾಯಕವಾಗಿ ಮಾಡಿದರೂ ಶೇ. 6 ರಷ್ಟಿರಬಹುದು.
- ಹಣಕಾಸು ಶಿಲ್ಕು ಅನುಪಾತ, ಬಡ್ಡಿದರಗಳನ್ನು ಈಗಿರುವ ದರಗಳಲ್ಲೇ ಬಿಡಲಾಗಿದೆ. ಬದಲಾವಣೆಗಳಿಲ್ಲ.
- ಬ್ಯಾಂಕ್ ದರವನ್ನೂ ಹಾಗೇ ಬಿಡಲಾಗಿದೆ.
- ಸರ್ಕಾರಿ ಅನುಮೋದಿತ ಭದ್ರತೆಗಳಿಗೆ ಶೇ 5 ರಷ್ಟು ಮಾರುಕಟ್ಟೆ ರಿಸ್ಕಿನ ಶೇ.5 ತೂಕ. ಸರ್ಕಾರೀ ಜಮೀನಿನ ಸಾಲಗಳಿಗೆ ಬೇರೆಲ್ಲಾ ಸಾಲಗಳಂತೆ ರಿಸ್ಕ್ ಇರುತ್ತದೆ. (ಅಂದರೆ ಇಂತಹ ಸಾಲ ನೀಡಲು ಬ್ಯಾಂಕುಗಳು ಮುಂದೆ ಬರುವುದಿಲ್ಲ)
- ಬ್ಯಾಂಕುಗಳು ಮಾರ್ಚ್ 2000 ದ ವೇಳೆಗೆ ತಮ್ಮ ರಿಸ್‌ವೇಟೆಡ್ ಸಾಲಗಳ ಶೇ. 9 ರಷ್ಟು ಪಾಲು ಬಂಡವಾಳ ಹೊಂದಿರಬೇಕು.
- ಈಗಿರುವ ಆಸ್ತಿ ವರ್ಗೀಕರಣ ನೀತಿಯನ್ನು ಬಿಗಿಗೊಳಿಸಲಾಗುವುದು.
- ಉತ್ತಮ ಸಾಲಗಳಿಗೂ ಶೇ. 0.25 ರಷ್ಟು (ಮನ್ನಾ) ಅವಕಾಶ ಮಾಡಿರಬೇಕು.
- ರಫ್ತುದಾರರು ವಿದೇಶೀ ಸಾಲ ಉಪಯೋಗಿಸಿಕೊಳ್ಳಲು ಒತ್ತು, ಇತ್ಯಾದಿ.

ಹೀಗೆ ಈ ನೀತಿ ದೇಶದ ಹಣಕಾಸು ವ್ಯವಸ್ಥೆ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೇ ಎಚ್ಚರಿಕೆ ನೀಡುವುದರ ಜೊತೆಗೆ ಬಹುತೇಕ ಈಗಿರುವ ಕ್ರಮಗಳನ್ನೇ ಮುಂದುವರೆಸಿಕೊಂಡು ಹೋಗುವ ಪ್ರಯತ್ನ ಮಾಡಿದೆ.

ಹಣದುಬ್ಬರವನ್ನು ತಡೆಯುವ ಪ್ರಯತ್ನ ಇದರಲ್ಲಿಲ್ಲ. ಹಾಗೆಯೇ ಜನ ಸಾಮಾನ್ಯರಿಗಾಗಿ ಯಾವುದೇ ಯೋಜನೆ / ಸೌಲಭ್ಯಗಳ ಘೋಷಣೆ ಇಲ್ಲ. ಇರುವ ಸೌಲಭ್ಯಗಳನ್ನೇ ಬಂಡವಾಳಿಗರ ಅನುಕೂಲಕ್ಕೆ ತಕ್ಕಂತೆ ಉತ್ತಮ ಪಡಿಸುವ ಪ್ರಯತ್ನ ಮಾತ್ರ ಇದರಲ್ಲಿದೆ. ಇದಲ್ಲವೆ ಬಿಜೆಪಿಯ ನಿಜವಾದ ಕಳಕಳಿ/ ಕಾಳಜಿ?

ಕಾಮಧೇನುಗಳ ಮಾರಾಟ

ಕಂದಾಯ ಸಂಗ್ರಹದ ಗುರಿ ಮುಟ್ಟಲಾರದ ಸರ್ಕಾರ ನಾಲ್ಕು ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟಕ್ಕೆ ಹೊರಟಿದೆ. ಈ ಮಾರಾಟಗಳಿಂದ 5000 ಕೋಟಿ ರೂಪಾಯಿಗಳ ಸಂಗ್ರಹದ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ, ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ (ಗೇಲ್) ವಿದೇಶ್ ಸಂಚಾರ್ ನಿಗಮ ನಿಯಮಿತ (ವಿ.ಎಸ್.ಎನ್.ಎಲ್) ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಇವೇ ಈ ನಾಲ್ಕು ಉದ್ದಿಮೆಗಳು. ಶೇರು ಮಾರುಕಟ್ಟೆ ಇಂದು ಬಹಳ ಮಂದಿಯಾಗಿದೆ. ಹೀಗಿರುವಾಗ ಈ ಶೇರುಗಳ ಮಾರಾಟದಿಂದ ಸರ್ಕಾರಕ್ಕೆ ನಿಜವಾದ ಬೆಲೆ ಬರಲಿಕ್ಕಿಲ್ಲ. ಅಲ್ಲದೆ ಸಾರ್ವಜನಿಕ ವಲಯದ ಉದ್ದಿಮೆಗಳ ನಿಜವಾದ ಮೌಲ್ಯ ಮಾಪನವೇ ಬೇರೆ ರೀತಿಯಲ್ಲಿ ಆಗಬೇಕು. ಆದರೆ ಬರೀ ಲಾಭದ ಮಂತ್ರವೇ ಆರ್ಥಿಕದ ತಳಹದಿಯಾಗಿರುವ ಈ ದಿನಗಳಲ್ಲಿ ಅತ್ತ ಗಮನ ಹರಿಸುವವರಾರು?

ಹೀಗೆ ಇಂತಹ ಉತ್ತಮ ಉದ್ದಿಮೆಗಳನ್ನು ಮೂರು ಕಾಸಿಗೆ ಮಾರಾಟ ಮಾಡಹೊರಟಿರುವ ಬಿಜೆಪಿ ಸರ್ಕಾರದ ಉದ್ದೇಶಗಳ ಬಗ್ಗೆ ಸಂದೇಹವೇ ಇರಲು ಸಾಧ್ಯವಿಲ್ಲ. ಬಂಡವಾಳಿಗರಿಗೆ ಮೂರು ಕಾಸಿಗೆ ಇಂತಹ ಕಾಮಧೇನುಗಳನ್ನು ಮಾರಿ ದೇಶದ ಜನ ಸಾಮಾನ್ಯರ ಮೇಲೆ ಆ ಹೊರೆ ಹೇರಿಸುವ ಉದ್ದೇಶ ಇದು.

ಈ ಉದ್ದಿಮೆಗಳ ಲಾಭದಾಯಕತೆ ಅವುಗಳ ನೌಕರರ ನೌಕರಿ ಮತ್ತು ಇವು ದೇಶದ ಆರ್ಥಿಕದಲ್ಲಿ ನಿರ್ವಹಿಸುವ ಪಾತ್ರ ಇವೆಲ್ಲಕ್ಕೂ ಹೊಡೆತ ಬೀಳಲಿದೆ.

ಹಣಕಾಸು ಕೊರತೆ ಕಡಿಮೆ ಮಾಡುವುದು ಸುಲಭದ ಕೆಲಸವಲ್ಲ - ಡಾ|| ವಿಮಲ್ ಜಾಲನ್

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಮಹಾಶಯರೇ ಈ ಮಾತನ್ನು ಹೇಳುತ್ತಿದ್ದಾರೆ. ಆರ್ಥಿಕದಲ್ಲಿನ ಹಣಕಾಸು ಕೊರತೆಯನ್ನು ಕಡಿಮೆ ಮಾಡುವುದು ಸುಲಭಸಾಧ್ಯವಲ್ಲ ಎಂದು.

ಜಾಲನ್ ಅವರ ಪ್ರಕಾರ ಈ ಬಗ್ಗೆ ಹಣಕಾಸು ಮಂತ್ರಿಗಳೇ ತೀವ್ರವಾದ ಕಾಳಜಿ ಹೊಂದಿದ್ದಾರೆ. (ಬಹಳ ಸಹಜವಾದದ್ದು. ಯಾಕೆಂದರೆ ಐ.ಎಂ.ಎಫ್ ವಿಶ್ವ ಬ್ಯಾಂಕುಗಳ ಜೊತೆಗೆ ನೇರ ಸಂಪರ್ಕ ಅವರದ್ದಲ್ಲವೆ? ಈ ಧಣಿಗಳು ಹೇಳಿದಂತೆ ಕೇಳುವುದು ಅವರ ಕಾಳಜಿಯಾಗಿರುತ್ತದೆ. ಹಣಕಾಸು ಮಂತ್ರಿಗಳ ಈ ಕಾಳಜಿಗೆ ತಕ್ಕಂತೆ ನಡೆದುಕೊಳ್ಳುವುದು ಭಾರತೀಯ ರಿಸರ್ವ್ ಬ್ಯಾಂಕಿನ ಕರ್ತವ್ಯ. ಆದರೆ ಹಣಕಾಸು ಕೊರತೆ ಕಡಿಮೆ ಮಾಡುವುದು ಸುಲಭದ ಕೆಲಸವಲ್ಲ. ಈಗಿನ ಚಾಲ್ತಿ ಖಾತೆ ಕೊರತೆ ಒಟ್ಟು ಆಂತರಿಕ ಉತ್ಪಾದನೆಯ ಶೇ. 2 ರಷ್ಟಿರುವುದರಿಂದ ಅದು ತೀರ ಅನಾನುಕೂಲಕರವಾಗಿಲ್ಲವಂತೆ ಸದ್ಯಕ್ಕೆ ಈ ಕೊರತೆ ತೀವ್ರ ಏರುವ ಆತಂಕವೂ ಇಲ್ಲವಂತೆ.

ಶತಾಯಗತಾಯ ಹಣಕಾಸು ಕೊರತೆಯನ್ನು ಕಡಿಮೆ ಮಾಡಿ ಧಣಿಗಳಿಂದ ಬೇಷ್ ಏನಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುವವರು ಅದು ಕಠಿಣ ಕೆಲಸ ಎಂದು ಹೇಳುತ್ತಿರುವುದು ಸೋಜಿಗದ ವಿಷಯವಲ್ಲವೇ?

ಬಕಗಳಿಂದ ನಮ್ಮನ್ನು ರಕ್ಷಿಸಿ

ಈ ಮಾತು ಹೇಳಿದವರು ಯಾರೆಂದು ಗೊತ್ತೆ ಆಸ್ಸೋಚಾಮ್ ಎಂಬ ಉದ್ಯಮಿಗಳ ಸಂಘಟನೆ. ಬಹುರಾಷ್ಟ್ರೀಯ ಕಂಪನಿಗಳ ವಶೀಕರಣದ ಮುಷ್ಟಿಯಿಂದ ದೇಶೀ ಉದ್ದಿಮೆಗಳನ್ನು ರಕ್ಷಿಸಿ ಎಂಬ ಮೊರೆ ಅವರದು.

ಭಾರತೀಯ ಉದ್ದಿಮೆಗಳನ್ನು ಇನ್ನು 5-7 ವರ್ಷಗಳ ಕಾಲ ರಕ್ಷಣೆ ಮಾಡಬೇಕಾದ ಅವಶ್ಯಕತೆ ಇದೆಯಂತೆ. ಇಲ್ಲವಾದರೆ ಬಹುರಾಷ್ಟ್ರೀಯ ಕಂಪನಿಗಳು ತಿಮಿಂಗಲಗಳು ಸಣ್ಣ ಮೀನುಗಳನ್ನು ನುಂಗಿಹಾಕುವಂತೆ ದೇಶೀ ಉದ್ದಿಮೆಗಳನ್ನು ನುಂಗಿಬಿಡುತ್ತವೆ ಎಂಬ ಭಯ ಈಗ ಬಂಡವಾಳಿಗರ ಸಂಘಟನೆಗೆ.

ತಮ್ಮದೇ ಶೇರು ಮರುಕೊಳ್ಳುವಿಕೆಗೆ ಕಂಪನಿಗಳಿಗೆ ಅವಕಾಶ ನೀಡಬೇಕೆಂಬ ಕೂಗು ಈ ಹಿನ್ನೆಲೆಯಲ್ಲೇ ಬಂದಿರುವುದು. ಆದರೆ ಉದಾರೀಕರಣದ ಭಾಗವಾಗಿ ಬಂದಿರುವ ಕ್ರಮಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಜನ ಪರವಾದ ನಿಲುವುಗಳಿಂದ ಮಾತ್ರವೇ ಯಶಸ್ವಿಯಾಗುವುದು ಸಾಧ್ಯವೇ ಹೊರತು ಬರೀ ಬಂಡವಾಳಿಗರ ಕೂಗುಗಳಿಂದಲ್ಲ. ಈ ನಡುವೆ ಬಕಗಳು ಇನ್ನೂ ಹೆಚ್ಚಿನ ಉದಾರೀಕರಣ ಆಗಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇವೆ. ಈ ಒತ್ತಡಗಳನ್ನು ಎದುರಿಸಿ ದೇಶದ ಹಿತ ರಕ್ಷಿಸುವ ಉದ್ದೇಶ, ತಾಕತ್ತು ಎರಡೂ ಬಿಜೆಪಿ ಸರ್ಕಾರಕ್ಕಿಲ್ಲ.

ಸಿರಾದಲ್ಲಿ ಉದಾರೀಕರಣದ ಶಿಕಾರಿಗಳು

ಸಿರಾದಲ್ಲಿ ಎಂಟು ಜನ ಅಮಾಯಕರು ಸತ್ತಿದ್ದಾರೆ. ರೈತರ ತೊಂದರೆಗಳಿಂದುಂಟಾದ ಸಾವುಗಳು ಇವು. ಶೇಂಗಾ ಬೆಳೆದ ರೈತರ ನೋವು ಹೆಪ್ಪುಗಟ್ಟಿದ ರೀತಿ ಇದು ರಾಜಕೀಯ ಕೈವಾಡ, ವಿರೋಧ ಪಕ್ಷಗಳ ಸಂಚು ಸಮಾಜ ಘಾತುಕ ಶಕ್ತಿಗಳ ಕೆಲಸ ಎಂದೆಲ್ಲ ಈ ಘಟನೆಗಳಿಗೆ ಕಾರಣಗಳನ್ನು ಆರೋಪಿಸಲಾಗುತ್ತಿದೆ. ಇವೆಲ್ಲ ನಿಜವಿರಬಹುದು. ಆದರೆ ಇವೆಲ್ಲವುಗಳ ಹಿಂದೆ ಇವಕ್ಕೂ ದೊಡ್ಡದಾದ ಕಾರಣವಿದೆ. ಅದೇ ಉದಾರೀಕರಣ. ರೈತರ ಆತ್ಮಹತ್ಯೆ ಆಲೂಗಡ್ಡೆಗೆ ಮಾರುಕಟ್ಟೆಯೇ ದೊರೆಯದೆ ರೈತರು ನೊಂದದ್ದು, ಟೊಮ್ಯಾಟೊ ಬೆಳೆದು ರೈತರು ಕಂಗಾಲಾದದ್ದು, ಕೆಲವೇ ಕೆಲವರು ಈ ಬೆಳೆಗಳನ್ನು ಬೇರೆ ಸಮಯಗಳಲ್ಲಿ ಬೆಳೆದು ಕುಬೇರರಾದದ್ದು. ಇವೆಲ್ಲವೂ ಆಗಿವೆ. ಬೆಳೆಗಳನ್ನು ಬೆಳೆಯಲು ಬೇಕಾದ ಕನಿಷ್ಠ ಪ್ರಮಾಣದ ರಕ್ಷಣೆ ರೈತರಿಗೆ ಇಲ್ಲವಾಗಿದೆ. ಮಾರುಕಟ್ಟೆ ಆರ್ಥಿಕದೆಡೆಗೆ ಅಡಿಯಿಟ್ಟಿರುವಾಗ ರೈತರಿಗೆ ಯಾವ ಬೆಳೆ ಬೆಳೆಯಬೇಕು ಎಂಬುದು ತೋಚದಂತಹ ಪರಿಸ್ಥಿತಿ ಉಂಟಾಗಿದೆ. ಯಾವ ಬೆಳೆಗೆ ಯಾವ ಸಮಯದಲ್ಲಿ ಯಾವ ಬೆಲೆ ದೊರೆಯುತ್ತದೆ ಎಂಬುದು ಅನಿಶ್ಚಿತವಾಗಿ ಹೋಗಿದೆ. ಹೀಗಿರುವಾಗ ಬೆಳೆ ಬೆಳೆದ ರೈತ ಕಂಗಾಲಾಗಿ ಹೋಗುವ ಪರಿಸ್ಥಿತಿಗಳು ದಿನ ನಿತ್ಯ ಉಂಟಾಗುತ್ತಿದೆ. ಸಿರಾದಲ್ಲಿ ಆದದ್ದೂ ಅದೇ. ಶೇಂಗಾ ಬೆಳೆದು ಮಾರುಕಟ್ಟೆಗೆ ತಂದ ರೈತರಿಗೆ ಹಿಂದಿನ ದಿನ ಕ್ವಿಂಟಾಲ್‌ಗೆ 1400 ರೂಪಾಯಿ ದೊರೆತರೆ ಮರುದಿನ 600 ರಿಂದ 800 ಕ್ಕಿಂತ ಹೆಚ್ಚಿನ ಬೆಲೆಗೆ ಕೇಳುವವರಿಲ್ಲ. ರೈತರು ಹೆಚ್ಚಿನ ಬೆಲೆ ಬೇಕೆಂದು ಕೇಳಿದರು. ಹೆಚ್ಚಿನ ಬೆಲೆ ನೀಡುವ ಪ್ರಯತ್ನ ಮಾಡುವ ಭರವಸೆ ನೀಡಿದ ಅಧಿಕಾರಿಗಳು ಏನೂ ಮಾಡಲಾಗಲಿಲ್ಲ. ಶೇಂಗಾ ತಂದ ರೈತರು ಕಂಗಾಲಾದರು. ಪರಿಸ್ಥಿತಿ ಬಿಗಡಾಯಿಸಿತು. ಕೊನೆಗೆ ಆರು ಜನ ರೈತರು ಜನಸಾಮಾನ್ಯರು, ಇಬ್ಬರು ಪೋಲಿಸರು ಸತ್ತರು.

ಈಗ ರಾಜ್ಯ ಸರ್ಕಾರವೇನೊ ಕೇಂದ್ರದ ಬೆಂಬಲ ಬೆಲೆಯಲ್ಲಿ ಶೇಂಗಾ ಕೊಳ್ಳುವ ಭರವಸೆ ನೀಡಿದೆ. ಆದರೆ ಇದು ಇಂತಹ ಒಂದು ಕ್ರಮದಿಂದ ಪರಿಹಾರವಾಗುವ ಸಮಸ್ಯೆಯಲ್ಲ. ಇಡೀ ಆರ್ಥಿಕ ನೀತಿಯನ್ನೇ ಬದಲಾಯಿಸಬೇಕಾದ ಅವಶ್ಯಕತೆ ಇದೆ. ಇದಕ್ಕಾಗಿ ಪ್ರಜ್ಞಾಪೂರ್ವಕ ಪ್ರಯತ್ನವನ್ನು ರಾಜ್ಯ ಸರ್ಕಾರ ಸಮೇತ ಎಲ್ಲರೂ ಮಾಡಬೇಕಾದ ಅವಶ್ಯಕತೆ ಇದೆ. ಆದರೆ ಪಟೇಲರ ಸರ್ಕಾರಕ್ಕೆ ಈ ಬಗ್ಗೆ ಸ್ಪಷ್ಟ ತಿಳುವಳಿಕೆ ನಿಲುವು ಇರುವಂತೆ ಕಾಣುವುದಿಲ್ಲ ಅಲ್ಲವೆ?

ಶಿರಾ ರೈತರ ಮೇಲೆ ಗೋಲಿಬಾರ್- ಸಿಪಿಐ(ಎಂ) ಖಂಡನೆ

ಅಕ್ಟೋಬರ್ 28 ರಂದು ಕಡಲೆಕಾಯಿ ಬೆಲೆಯ ದಿಢೀರ್ ಕುಸಿತವನ್ನು ಪ್ರತಿಭಟಿಸಿದ ಶಿರಾದ ಮುಗ್ಧ ರೈತರ ಮೇಲೆ ಅಮಾನುಷವಾಗಿ ಗೋಲಿಬಾರ್ ನಡೆಸಿದ ಪೋಲೀಸರ ಕ್ರಮವನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸಿದೆ. ಮರುದಿನವೇ ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ಅದು ಮುಂದೊದಗಬಹುದಾದ ಪರಿಸ್ಥಿತಿಯ ಬಗ್ಗೆ ಸ್ವತಃ ಜಿಲ್ಲಾ ಉಸ್ತುವಾರಿ ಸಚಿವ ಸತ್ಯನಾರಾಯಣರವರು ಜಿಲ್ಲಾ ಪೋಲೀಸ್ ವರಿಷ್ಠ ಅಧಿಕಾರಿಗಳಿಗೆ ತಿಳಿಸಿದ್ದಾಗ್ಯೂ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷಿಸಿರುವುದು ಇಂತಹ ದುರಂತಕ್ಕೆ ಕಾರಣವಾಗಿದೆ. ಮತ್ತು ಈ ವಿಫಲತೆಗೆ ಕಾರಣವಾಗಿರುವ ಪೋಲೀಸ್ ಅಧಿಕಾರಿಗಳ ಮೇಲೆ ಸರ್ಕಾರ ಉಗ್ರ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದೆ.

ಗೋಲೀಬಾರ್ ಘಟನೆಯ ಬಗ್ಗೆ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶ ನೀಡಿದೆ. ಆದರೆ ಇದೊಂದು ನಾಮಕಾವಸ್ತೆ ಆಗಬಾರದು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ಈ ಘಟನೆಯನ್ನು ಕ್ಷುಲ್ಲಕ ರಾಜಕೀಯಕ್ಕೆ ಬಳಸುವ ಹೀನ ಪ್ರಯತ್ನಗಳನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ.

ಬೆಲೆ ಕುಸಿತ-
ಕೇಂದ್ರ ಸರ್ಕಾರದ ನೀತಿ ಪರಿಣಾಮ

ಕಡಲೇಕಾಯಿ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರದ ಆಮದು -ರಫ್ತು ನೀತಿಯೇ ಕಾರಣ. ಕೇಂದ್ರದ ಬಿಜೆಪಿ ಸರ್ಕಾರ ವ್ಯಾಪಾರಿಗಳ ಹಿತಾಸಕ್ತಿ ಕಾಪಾಡಲು ಎಣ್ಣೆಯ ರಫ್ತುಗೆ ಅವಕಾಶ ಕಲ್ಪಿಸಿತು. ಇದರಿಂದ ಬೆಲೆಗಳು ಹೆಚ್ಚಾಗಿ ಜನಸಾಮಾನ್ಯರು ತತ್ತರಿಸುವಂತಾಗಿದೆ. ಚುನಾವಣೆಗಳ ಮೇಲೆ ಕಣ್ಣಿರಿಸಿದ ಬಿಜೆಪಿಯು ರಫ್ತು ನಿಷೇಧಿಸಿದ್ದರಿಂದ ಬೆಲೆ ಕುಸಿಯಲು ಕಾರಣವಾಯಿತು. ಈ ಸಂದರ್ಭವನ್ನೇ ವ್ಯಾಪಾರಿಗಳು ದುರುಪಯೋಗ ಪಡಿಸಿಕೊಂಡು ರೈತರನ್ನು ಇನ್ನೂ ಸುಲಿಯುವ ಪ್ರಯತ್ನ ನಡೆಸಿದ್ದಾರೆ.

ರೈತರು ಸಂಕಷ್ಟಕ್ಕೆ ಸಿಲುಕಿರುವಾಗ ರಾಜ್ಯ ಸರ್ಕಾರವೂ ಸಹ ಬೆಂಬಲಿತ ಬೆಲೆ ನೀಡಿ ಸ್ವಲ್ಪವಾದರೂ ರಕ್ಷಣೆಗೆ ಮುಂದಾಗಬಹುದಿತ್ತು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಶಿರಾಕ್ಕೆ ಸಿಪಿಐ(ಎಂ) ನಿಯೋಗ

ಈ ಗೋಲಿಬಾರ್ ಘಟನೆಯ ಬಗ್ಗೆ ಹಾಗೂ ಜನರ ಪರಿಸ್ಥಿತಿ ಬಗ್ಗೆ ಪರಿಶೀಲಿಸಲು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣ್‌ರಾವ್ ಹಾಗೂ ಕಾರ್ಯದರ್ಶಿಮಂಡಳಿಯ ಸದಸ್ಯರಾದ ಜಿ.ಎನ್. ನಾಗರಾಜ್ ಅಕ್ಟೋಬರ್ 31 ರಂದು ಶಿರಾಕ್ಕೆ ಭೇಟಿ ನೀಡಿದರು.

ದಬ್ಬಾಳಿಕೆ ನಿಲ್ಲಿಸಲು ಮನವಿ

ಈ ಘಟನೆಯ ಹಿನ್ನೆಲೆಯಲ್ಲಿ ಪೋಲೀಸರು ಮುಗ್ಧ ಜನತೆಯ ಮೇಲೆ ಭಾರೀ ದಬ್ಬಾಳಿಕೆ ನಡೆಸಬಹುದಾದ ಸಾಧ್ಯತೆಗಳಿರುವುದರಿಂದ ಸರ್ಕಾರವು ಕೂಡಲೇ ಮಧ್ಯಪ್ರವೇಶಿಸಿ ಮುಂದಾಗಬಹುದಾದ ದುರ್ಘಟನೆಗಳನ್ನು ನಿಲ್ಲಿಸಬೇಕೆಂದು ಸಿಪಿಐ(ಎಂ) ಸರ್ಕಾರಕ್ಕೆ ಒತ್ತಾಯಿಸಿದೆ.

ರೈತ ಸಂಘ ಖಂಡನೆ

ಅಕ್ಟೋಬರ್ 29 ರಂದು ಕರ್ನಾಟಕ ಪ್ರಾಂತ ರೈತ ಸಂಘ ಒಂದು ಹೇಳಿಕೆ ನೀಡಿ ಶಿರಾ ರೈತರ ಮೇಲೆ ನಡೆದಿರುವ ಗೋಲಿಬಾರನ್ನು ಕರ್ನಾಟಕ ಪ್ರಾಂತ ರೈತ ಸಂಘ ಉಗ್ರವಾಗಿ ಖಂಡಿಸಿದೆ.

ಗೋಲೀಬಾರ್ ಘಟನೆಯ ಬಗ್ಗೆ ಸರ್ಕಾರ ಈಗಾಗಲೇ ನ್ಯಾಯಾಂಗ ತನಿಖೆಗೆ ಆದೇಶ ನೀಡಿದೆ. ಆದರೆ ಇದೊಂದು ನಾಟಕ ಆಗಬಾರದು. ಸರ್ಕಾರಕ್ಕೆ ಇದರ ಬಗ್ಗೆ ಮುಂದೊದಗ ಬಹುದಾದ ಪರಿಸ್ಥಿತಿಯ ಬಗ್ಗೆ ಸ್ವತಃ ಆ ಕ್ಷೇತ್ರದ ಶಾಸಕರು ಕಾರ್ಮಿಕ ಸಚಿವರಾದ ಶ್ರೀ ಸತ್ಯನಾರಾಯಣರವರು ಜಿಲ್ಲಾ ಪೋಲೀಸ್ ವರಿಷ್ಠ ಅಧಿಕಾರಿಗಳಿಗೆ ತಿಳಿಸಿದ್ದಾಗ್ಯೂ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳದೆ ನಿರ್ಲಕ್ಷಿಸಿರುವುದು ಇಂತಹ ದುರಂತ ಕ್ಕೆ ಕಾರಣವಾಗಿದೆ. ಈ ವಿಫಲತೆಗೆ ಕಾರಣರಾದ ಪೋಲೀಸ್ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಜರುಗಿಸಬೇಕೆಂದು ಕರ್ನಾಟಕ ಪ್ರಾಂತ್ಯ ರೈತ ಸಂಘ ಒತ್ತಾಯಿಸಿದೆ.

ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರದ ನೀತಿಯೇ ಕಾರಣವಾಗಿದೆ. ಕಡಲೆಕಾಯಿ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರದ ಆಮದು, ರಫ್ತು ನೀತಿಯೇ ಕಾರಣವಾಗಿದೆ ಬಿಜೆಪಿಯ ಕೇಂದ್ರ ಸರ್ಕಾರ ವ್ಯಾಪಾರಿಗಳ ಹಿತಾಸಕ್ತಿ ಕಾಪಾಡಲು ಎಣ್ಣೆಯ ರಫ್ತಿಗೆ ಅವಕಾಶ ಮಾಡಿ ಕೊಟ್ಟಿರುವುದು ಹೆಚ್ಚಾಗಿ ರೈತರು, ಜನಸಾಮಾನ್ಯರು ತತ್ತರಿಸುವಂತಾಗಿದೆ.

ರಾಜ್ಯ ಸರ್ಕಾರ ರೈತರು ಸಂಕಷ್ಟಕ್ಕೆ ಸಿಲುಕಿರುವಾಗ ಅವರ ಒಳಜಗಳವನ್ನು ಬಿಟ್ಟು ರೈತರಿಗೆ ಬೆಂಬಲಿತ ಬೆಲೆ ನೀಡಬೇಕೆಂದು, ಸತ್ತ ಕುಟುಂಬಗಳಿಗೆ ಹೆಚ್ಚಿನ ಪರಿಹಾರಕ್ಕಾಗಿ ಕರ್ನಾಟಕ ಪ್ರಾಂತ್ಯ ರೈತ ಸಂಘ ಒತ್ತಾಯಿಸಿದೆ.

ಡಿವೈಎಫ್‌ಐ ಖಂಡನೆ

ಶೇಂಗಾದ ಬೆಲೆ ಕುಸಿತ ವಿರೋಧಿಸಿ ಚಳುವಳಿ ನಡೆಸಿದ ಮುಗ್ಧ ರೈತರ ಮೇಲೆ ಪೋಲೀಸರು ನಡೆಸಿದ ಅಮಾನುಷ ಗೋಲೀಬಾರ್ ಮತ್ತು ಹಿಂಸಾಚಾರದ ಘಟನೆಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸಿದೆ.

ಪೋಲೀಸರು ಮುಂಜಾಗರೂಕತೆಯಾಗಿ ಸೂಕ್ತ ಕ್ರಮವಹಿಸಿದ್ದರೆ ಈ ದುರ್ಘಟನೆಯನ್ನು ತಪ್ಪಿಸಬಹುದಾಗಿತ್ತು. ಈ ದುರಂತಕ್ಕೆ ಕಾರಣರಾದ ಎಲ್ಲಾ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದು ಡಿ.ವೈ.ಎಫ್.ಐ. ಆಗ್ರಹಿಸಿದೆ ಮತ್ತು ಮುಗ್ಧ ಜನರ ಮೇಲೆ ದಬ್ಬಾಳಿಕೆ ಮುಂದುವರಿಸುವುದನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಬೆಲೆ ಕುಸಿಯಲು ಕೇಂದ್ರದ ಆಮದು ರಫ್ತು ನೀತಿ ಹಾಗೂ ವ್ಯಾಪಾರಿಗಳ ದುರ್ಲಾಭದ ಯತ್ನ ಕಾರಣವಾಗಿದ್ದು, ಈ ಬಗ್ಗೆ ನೀತಿಯಲ್ಲಿ ಬದಲಾವಣೆ ಮಾಡದಿದ್ದರೆ ಇಂತಹ ದುರಂತಗಳು ತಪ್ಪಿದ್ದಲ್ಲ ಎಂದು ಡಿ.ವೈ.ಎಫ್.ಐ. ಅಭಿಪ್ರಾಯ ಪಟ್ಟಿದೆ.

ಸಾವಿಗೀಡಾದವರಿಗೆ ಡಿ.ವೈ.ಎಫ್.ಐ. ಸಂತಾಪ ವ್ಯಕ್ತ ಪಡಿಸಿದ್ದು, ಸೂಕ್ತ ಪರಿಹಾರ ರಕ್ಷಣೆ ನೀಡಲು ಒತ್ತಾಯಿಸಿದೆ.

ಕರ್ನಾಟಕದಲ್ಲಿ ಕಳೆದವಾರ

ಅಕ್ಟೋಬರ್, 30

- ಸಿರಾ ಪ್ರಕರಣ ಪರಿಶೀಲನೆಗೆ ಸದನ ಸಮಿತಿ. ಪ್ರತಿಪಕ್ಷಗಳ ಒತ್ತಡಕ್ಕೆ ಮನ್ನಣೆ, ಧರಣಿ ಅಂತ್ಯ.
- ಕೇಂದ್ರದ ಬೆಂಬಲ ಬೆಲೆಯಲ್ಲಿ ರೈತರ ಹದಿನೇಳು ಧಾನ್ಯಗಳ ಖರೀದಿ-ಕೃಷಿ ಸಚಿವರು.
- ಸರ್ಕಾರಿ ವೈದ್ಯರ ಮುಷ್ಕರ ನಿಷೇದ. ಅಗತ್ಯಬಿದ್ದಲ್ಲಿ ಎಸ್ಮಾ ಕಾಯಿದೆ ರಾಜ್ಯ ಸರ್ಕಾರ.

ಅಕ್ಟೋಬರ್ 31

- ಮಳೆಹಾನಿ ಇನ್ನೂ 100 ಕೋಟಿ ರೂ ಹೆಚ್ಚುವರಿ ನೆರವಿಗಾಗಿ ಪ್ರಧಾನಿಗೆ ರಾಜ್ಯದ ಮನವಿ.
- ಗುಲ್ಬರ್ಗದಲ್ಲಿ ವಲ್ಲಭಾ ಬಾಯಿ ಪಟೇಲ್ ಪ್ರತಿಭೆ ಅನಾವರಣ. ಅಡ್ವಾನಿ ವಿರುದ್ಧ ಸಿಪಿಐ(ಎಂ) ನಿಂದ ಕಪ್ಪು ಬಾವುಟ ಪ್ರದರ್ಶನ.
- ತೊಗರಿ ಬೆಳೆಗಾರರಿಗೆ ಸರ್ಕಾರ ನೀಡಿದ ಚೆಕ್‌ಗಳು ತಿರಸ್ಕತ.

ನವೆಂಬರ್ 1

- ನೀರಸ ರಾಜ್ಯೋತ್ಸವ, ಬೆಳಗಾವಿಯಲ್ಲಿ ಮೆರವಣಿಗೆಗೆ ಕಲ್ಲು ತೂರಾಟ 26 ಜನರ ಬಂಧನ.
- ಮಂಡ್ಯದ ಮೈಸೂರು ಅಸಿಟೇಟ್ ಕಾರ್ಖಾನೆ ಪುನಶ್ಚೇತನಕ್ಕೆ 5 ಕೋಟಿ ರೂ ಮಂಜೂರು.

ನವೆಂಬರ್ 2

- ಆಲಮಟ್ಟಿಯ ಕಾಮಗಾರಿ ನಿಲ್ಲಿಸಲು ರಾಜ್ಯಕ್ಕೆ ಸುಪ್ರಿಂಕೋರ್ಟು ಆದೇಶ.
- ಕಬ್ಬನ್‌ಪಾರ್ಕ್ ವ್ಯಾಪ್ತಿ, ರಾಜ್ಯ ಸರ್ಕಾರದ ಆದೇಶಕ್ಕೆ ಹೈ ಕೋರ್ಟು ತಡೆ.
- ಸಿರಾ ಕೃಷಿ ಉತ್ಪನ ಮಾರುಕಟ್ಟೆ ಸಮಿತಿಗೆ ಕೋಟಿ ರೂ. ಬಡ್ಡಿ ರಹಿತ ಸಾಲ.

ನವೆಂಬರ್ 3

- ರಾಜ್ಯ ಯೋಜನಾ ವೆಚ್ಚ 5353 ಕೋಟಿ. ಹೆಚ್ಚಿದ ಪ್ರಕೃತಿ ವಿಕೋಪ ಪರಿಹಾರ.
- ಕಬ್ಬನ್ ಪಾರ್ಕ್ ಒಂದಂಗುಲವೂ ಅತಿಕ್ರಮವಿಲ್ಲ-ಶಾಸಕಾಂಗ ಸಭೆಯಲ್ಲಿ ಕಾನೂನು ಸಚಿವರು.
- ಹಿರಿಯ ಬರಹಗಾರ, ಬಾಷಾಶಾಸ್ತ್ರಜ್ಞ ಡಾ.ಆರ್.ಸಿ. ಹಿರೇಮಠ ನಿಧನ.
- ಕೃಷ್ಣ ಮೇಲ್ದಂಡೆ ಯೋಜನೆಯ ಸಂತ್ರಸ್ತರಿಗೆ 380 ಕೋಟಿ ರೂ ಪರಿಹಾರ-ವಿಧಾನ ಪರಿಷತ್‌ನಲ್ಲಿ ಕಂದಾಯ ಸಚಿವರು.

ನವೆಂಬರ್ 5

- ಕರ್ನಾಟಕ ಆಲಮಟ್ಟಿ ಕ್ರೆಸ್ಟ್‌ಗೇಟ್ ಅಳವಡಿಸಿಲ್ಲ. ಸುಪ್ರಿಂ ಕೋರ್ಟಿಗೆ ತಜ್ಞ ಆಯೋಗದ ಡಾ.ಎಸ್.ಎಂ.ಸೇಠ್ ವರದಿ ಸಲ್ಲಿಕೆ.
- ನೈಟ್‌ಕ್ಲಬ್ 'ಅರೆಬೆತ್ತಲೆ ನೃತ್ಯ' ನಡೆಯದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಆದೇಶ.
- ಬೆಳೆ ಪರಿಹಾರಕ್ಕೆ ಒತ್ತಾಯಿಸಿ ಮೇಲ್ಮನೆಯಲ್ಲಿ ಪ್ರತಿ ಪಕ್ಷದ ಧರಣಿ.

ಏಜೆನ್ಸಿದಾರರಲ್ಲಿ ಮತ್ತೊಮ್ಮೆ ಮನವಿ

'ಐಕ್ಯರಂಗ' ದ ಹಣಕಾಸಿನ ಸ್ಥಿತಿಯನ್ನು ಸುಧಾರಿಸುವಲ್ಲಿ ನೆರವಾಗಲು ಈ ಹಿಂದೆ ಹಲವು ಬಾರಿ ವಿನಂತಿಸಿಕೊಂಡರೂ ನಮ್ಮ ಏಜೆನ್ಸಿದಾರರು ಸಾಕಷ್ಟು ಪ್ರಮಾಣದಲ್ಲಿ ಸ್ಪಂದಿಸಿಲ್ಲ. ಇದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು ಮೂರು ತಿಂಗಳಿಗಿಂತ ಹೆಚ್ಚಿನ ಬಿಲ್ ಬಾಕಿ ಮಾಡಿರುವ ಏಜೆನ್ಸಿಗಳಿಗೆ ಪತ್ರಿಕೆಯನ್ನು ನಿಲ್ಲಿಸುವುದು ಅನಿವಾರ್ಯ ವಾಗುತ್ತಿದೆ. ಆದ್ದರಿಂದ ತಕ್ಷಣವೇ ನಿಮ್ಮ ಬಿಲ್ ಬಾಕಿಯನ್ನು ತೀರಿಸಲು ಕ್ರಮ ಕೈಗೊಂಡು ಸಹಕರಿಸಬೇಕು ಎಂದು ಮತ್ತೊಮ್ಮೆ ಕಳಕಳಿಯಿಂದ ವಿನಂತಿಸಿ ಕೊಳ್ಳುತ್ತೇವೆ.

- ವ್ಯವಸ್ಥಾಪಕರು

ಮಂಡ್ಯ ಜಿಲ್ಲಾ ವಾರ್ತಾಪತ್ರ - ಕೃಷ್ಣೇಗೌಡ ಟಿ.ಎಲ್.

ಅಂಗನವಾಡಿ ನೌಕರರ ಯಶಸ್ವಿ ಉಪವಾಸ ಸತ್ಯಾಗ್ರಹ

ರಾಜ್ಯ ಸಮಿತಿ ಕರೆಯ ಮೇರೆಗೆ 12,13,14, ಅಕ್ಟೋಬರ್ -98 ರಂದು ಜಿಲ್ಲಾ ಪಂಚಾಯತ್ ಕಛೇರಿ ಮುಂದೆ ಅಂಗನವಾಡಿ ನೌಕರರು ಸರದಿ ಉಪವಾಸ ಸತ್ಯಾಗ್ರಹ ನಡೆಸಿದರು.

ತಮ್ಮ ಬಹುದಿನಗಳ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಡೆದ ಈ ಸತ್ಯಾಗ್ರಹದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದು, ಸತ್ಯಾಗ್ರಹದ ನೇತೃತ್ವವನ್ನು ಮುಖಂಡರುಗಳಾದ ಮಂಡ್ಯದ ಪಂಕಜ, ಪುಷ್ಪಾವತಿ, ಶಹಜಹಾನ್, ಮಳವಳ್ಳಿಯ ಜಯಲಕ್ಷಮ್ಮ ಮಹದೇವಮ್ಮ ನಾಗಮಂಗಲದ ರೋಲಾಕ್ಷಮ್ಮ ವಹಿಸಿದ್ದರು. ಮೇಲ್ ಸಮಿತಿಗಳಿಂದ ಹನುಮಂತು .ಟಿ, ಚೌಡೇಗೌಡ ಹಾಗೂ ವರಲಕ್ಷ್ಮಿ ಹಾಜರಿದ್ದರು. ದರಣಿ ಸ್ಥಳಕ್ಕೆ ಜಿಲ್ಲಾಧಿಕಾರಿ, ಜಿ.ಪಂ. ಅಧ್ಯಕ್ಷ, ಉಪಾಧ್ಯಕ್ಷರು ಬೇಟಿಕೊಟ್ಟು ಬೇಡಿಗೆ ಈಡೇರಿಸುವ ಭರವಸೆ ನೀಡಿದರು.

ಡಿ.ವೈ.ಎಫ್.ಐ ತಾ|| ಸಮ್ಮೇಳನಗಳು

ಮಳವಳ್ಳಿ : ಡಿ.ವೈ.ಎಫ್.ಐ. ನ ಮಳವಳ್ಳಿ ತಾ|| ಸಮ್ಮೇಳನವು ಗುಳಗಟ್ಟದಲ್ಲಿ ಅಕ್ಟೋಬರ್ 12 ರಂದು ಯಶಸ್ವಿಯಾಗಿ ಜರುಗಿತು.

ತಾಲೂಕಿನ 40 ಕ್ಕೂ ಹೆಚ್ಚು ಗ್ರಾಮ ಘಟಕಗಳನ್ನು ಪ್ರತಿನಿಧಿಸಿ 80 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನವನ್ನು ವಕೀಲರಾದ ಜಯಶೇಖರಪ್ಪ ಉದ್ಘಾಟಿಸಿದರು. ಜಿಲ್ಲಾ ಸಂಚಾಲಕ ಪುಟ್ಟಮಾದು, ಭರತ್‌ರಾಜ್ ಉಪಸ್ಥಿತರಿದ್ದರು.

ಉತ್ತಮ ಚರ್ಚೆ ಮತ್ತು ಉತ್ಸಾಹ ಕಂಡ ಸಮ್ಮೇಳನವು 22 ಜನರ ನೂತನ ತಾ|| ಸಮಿತಿಯನ್ನು ಆಯ್ಕೆಮಾಡಿತು.

ಅಧ್ಯಕ್ಷರಾಗಿ ಭರತ್‌ರಾಜ್, ಉಪಾಧ್ಯಕ್ಷರಾಗಿ ಆರ್.ಎನ್. ಮಹಾದೇವು, ಪುಟ್ಟಸ್ವಾಮಿ, ಚಲುವಯ್ಯ, ಕಾರ್ಯದರ್ಶಿ ಯಾಗಿ ಎ.ಸಿ. ಚಿಕ್ಕರಾಜು ಸಹಕಾರ್ಯ ದರ್ಶಿಗಳಾಗಿ ಟಿ.ಹೆಚ್. ಆನಂದ, ರಾಜು, ಪಿ.ನಾಗರಾಜ್, ದೊರೆಸ್ವಾಮಿ, ಮಹೇಶ್, ಖಜಾಂಚಿ ಯಾಗಿ ಆರ್.ಕೃಷ್ಣ ಆಯ್ಕೆಗೊಂಡರು.

ಮದ್ದೂರು ತಾಲೂಕು ಸಮ್ಮೇಳನ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ)ನ ಮದ್ದೂರು ತಾ|| ಸಮ್ಮೇಳನವು ಮದ್ದೂರಿನ ಸ.ಪ.ಪೂ. ಕಾಲೇಜಿನಲ್ಲಿ ಅಕ್ಟೋಬರ್ 25 ರಂದು ಯಶಸ್ವಿಯಾಗಿ ಜರುಗಿತು.

70 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನವನ್ನು ಬಿ.ಜಿ.ವಿ.ಎಸ್. ರಾಜ್ಯ ಮುಖಂಡ ಇ. ಬಸವರಾಜು ಉದ್ಘಾಟಿಸಿ ಯುವಜನತೆಯ ಮುಂದಿರುವ ಸವಾಲುಗಳನ್ನು ವಿವರಿಸಿದರು. ಉದ್ಘಾಟನಾ ಸಮಾರಂಭದಲ್ಲಿ ರೈತ ಸಂಘದ ಅಶೋಕ್.ವಿ, ಪತ್ರಕರ್ತ ದೇಶಹಳ್ಳಿ ಮೋಹನ್ ಕುಮಾರ್ ಮಾತನಾಡಿದರು. ಟಿ.ಆರ್. ಸಿದ್ದೇಗೌಡ ಅಧ್ಯಕ್ಷತೆ ವಹಿಸಿದ್ದರು.

ನೂತನ ತಾಲೂಕು ಸಮಿತಿ

ಅಧ್ಯಕ್ಷರಾಗಿ -ರಮೇಶ್, ಕಾರ್ಯದರ್ಶಿಯಾಗಿ - ಧನಂಜಯ ಆಯ್ಕೆಗೊಂಡರು.

ಡಿ.ವೈ.ಎಫ್.ಐ. ಘಟಕ ರಚನೆ

ಮದ್ದೂರು ನಗರದ ಲೀಲಾವತಿ ಬಡಾವಣೆಯಲ್ಲಿ ನೂತನ ಡಿವೈ.ಎಫ್.ಐ. ಘಟಕ ರಚಿಸಲಾಯ್ತು.
ಅಧ್ಯಕ್ಷರಾಗಿ - ಹೆಚ್.ಟಿ. ಶ್ರೀನಿವಾಸ್, ಉಪಾಧ್ಯಕ್ಷರಾಗಿ - ಲಿಂಗಪ್ಪ.ಎಂ.ಎಲ್. ಕಾರ್ಯದರ್ಶಿಯಾಗಿ - ವೆಂಕಟೇಶ್., ಸಹಕಾರ್ಯದರ್ಶಿ - ಎಸ್.ಜಿ. ಅರುಣ್ ಕುಮಾರ್, ಖಜಾಂಚಿಯಾಗಿ - ಕೆ.ಹೆಚ್. ಶ್ರೀನಿವಾಸ್(ಸಿಂಹ) ಆಯ್ಕೆಯಾದರು.

ತಾ|| ಸಮಿತಿಯಿಂದ ರಮೇಶ್ ಮತ್ತು ಜಿಲ್ಲಾ ಸಮಿತಿಯಿಂದ ಪ್ರಕಾಶ್ ಹಾಜರಿದ್ದರು.

ಕೃಷಿ ಕೂಲಿಕಾರರ ಸಂಘದ ಘಟಕ ಉದ್ಘಾಟನೆ

ಮಳವಳ್ಳಿ ತಾ|| ಕಾಗೇಪುರ ಗ್ರಾಮದಲ್ಲಿ ಇತ್ತೀಚೆಗೆ AIAWU ನ ಘಟಕವನ್ನು ಉದ್ಘಾಟಿಸಲಾಯಿತು.

ಕಾಂ|| ಜಿ.ಸಿ. ಬಯ್ಯಾರೆಡ್ಡಿ ಉದ್ಘಾಟಿಸಿದರೆ, ಮುಖ್ಯ ಅತಿಥಿಗಳಾಗಿ ರೈತ ಸಂಘದ ಸುನಂದಾ ಜಯರಾಮ್, ಜಿ. ರಾಮಕೃಷ್ಣ, ಪುಟ್ಟಮಾದು ಭಾಗವಹಿಸಿದ್ದರು. ಘಟಕದ ಅಧ್ಯಕ್ಷ ಮರಿಗೌಡ ಅಧ್ಯಕ್ಷತೆ ವಹಿಸಿದ್ದರು.

ಪುಟ್ಟಣ್ಣ ಕೆ.ಎಂ. ಸ್ವಾಗತಿಸಿ, ಶಿವಣ್ಣ ವಂದಿಸಿದರು ಕಾರ್ಯಕ್ರಮವನ್ನು ಶಿವಪ್ಪ ನಿರೂಪಿಸಿದರು.

ಎನ್.ಪಿ.ಎಂ.ಓ ಸಮಾವೇಶ

ಧಾರವಾಡ: ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (ಎನ್.ಪಿ.ಎಂ.ಓ) ಧಾರವಾಡ ಗದಗ-ಹಾವೇರಿ ಜಿಲ್ಲಾ ಸಮಾವೇಶವು ರವಿವಾರ ಅಕ್ಟೋಬರ್ 25 ರಂದು ಹುಬ್ಬಳ್ಳಿಯ ಚೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು.

ಪ್ರಾಸ್ತಾವಿಕವಾಗಿ ವಿಮಾನೌಕರರ ಸಂಘದ ಅಧ್ಯಕ್ಷರು ಹಾಗೂ ಸಮಾವೇಶದ ಸಂಚಾಲಕರಾದ ಆರ್.ಹೆಚ್. ಆಯಿ ಅವರು ಸಾಮೂಹಿಕ ಸಂಘಟನೆಯ ಉದ್ದೇಶ ಹಾಗೂ ಮಹತ್ವವನ್ನು ತಿಳಿಸಿದರು. 300 ಕ್ಕೂ ಹೆಚ್ಚು ಪ್ರತಿನಿಧಿಗಳು ಹಾಜರಿದ್ದರು. ಎಂ.ಕೆ. ದೇಶಪಾಂಡೆ, ಎಸ್.ಎಸ್.ಶೆಟ್ಟಿ ಹಾಗೂ ಎಂ.ಜಿ. ಮುಧೋಳರು ಅಧ್ಯಕ್ಷ ಮಂಡಳಿಯಲ್ಲಿದ್ದರು.

ಸಮಾವೇಶದ ಉದ್ಘಾಟನೆಯನ್ನು ಪಿ.ಡಬ್ಲ್ಯೂ ಡಿ.ಯು.ಸಿ.ಯ ಆರ್.ಎನ್ ಗೋಡಬೋಲೆಯವರು ಮಾಡಿದರು.

ಮುಖ್ಯ ಅತಿಥಿಗಳಾಗಿ ಸಿ.ಐ.ಟಿ. ಯು.ನ ರಾಜ್ಯ ಉಪಾಧ್ಯಕ್ಷರಾದ ನಿತ್ಯಾನಂದಸ್ವಾಮಿ, ರಾಜ್ಯ ಎ.ಐ.ಟಿ.ಯು.ಸಿ.ಯು ಪ್ರಧಾನ ಕಾರ್ಯದರ್ಶಿ ಎಚ್.ವಿ. ಅನಂತ್ ಸುಬ್ಬಾರಾವ್ ಮಾತನಾಡಿ, ಹಿಂದೂ ರಾಷ್ಟ್ರ ನಿರ್ಮಿಸಲು ಹೊರಟಿರುವ ಆರ್.ಎಸ್.ಎಸ್.ನ ರಹಸ್ಯ ಕಾರ್ಯಕ್ರಮವನ್ನು ವಿರೋಧಿಸಲು ಹಾಗೂ ಫ್ಯಾಸಿಸಂನ ತೋಳ ಈಗ ದಿಲ್ಲಿಯ ಸಿಂಹಾಸನವನ್ನು ಆಕ್ರಮಿಸಿ ದ್ದರಿಂದ ಶ್ರಮಿಕ ವರ್ಗ ಹೋರಾಟಕ್ಕೆ ಇಳಿಯುವುದು ಅವಶ್ಯವಾಗಿದೆ. ಎಂದರು.

ಸಮಾವೇಶದ ಕರಡು ನಿರ್ಣಯವನ್ನು ಟೆಲಿಕಾಂನ ಸದಾನಂದ್‌ರವರು ಮಂಡಿಸಿದರು. ಠರಾವನ್ನು ಒಕ್ಕೊರಲಿನಿಂದ ಬೆಂಬಲಿಸಿ ವಿವಿಧ ಸಂಘಟನೆಯ ಸದಸ್ಯರಾದ ವಿಮಾ ನೌಕರರ ಸಂಘದ ಬಿ.ಎನ್. ಪೂಜಾರಿ, ಸಿ.ಐ.ಟಿ.ಯು. ಎಮ್.ಬಿ.ಕಟ್ಟಿ, ಎ.ಐ.ಬಿ.ಇ.ಎ. ರಿಂದ ಎಸ್.ಎಸ್. ಕರಗುದರಿ, ಹಾನಗಲ್ ಕೃಷಿ ಕೂಲಿಕಾರರ ಸಂಘದ ವಿ.ಡಿ. ತುಪ್ಪದ, ಎ.ಐ.ಟಿ.ಯು.ಸಿ.ಯು ದೇವಾಪೂರ್, ಎ.ಐ.ಬಿ.ಓ.ಸಿ.ಯು ಎಸ್.ಎಮ್. ಜಾಲವಾದಿ, ಕೆ.ಇ.ಬಿ. ನೌಕರ ಸಂಘದ ಎಸ್.ಬಿ. ಶಿವಾನಂದ್, ಎಫ್.ಎಮ್ .ಆರ್.ಐ.ಯ ಅನಿಲ್ ಕಾಳಗಿ, ಗ್ರಾಮೀಣ ಬ್ಯಾಂಕ್ ಅಧಿಕಾರಿ ಹಾಗೂ ನೌಕರರ ಸಂಘದ ವಿ.ಕೆ. ಬನ್ನಿಗೋಳ್ ಗ್ರಾಮ ಪಂಚಾಯಿತಿ ನೌಕರರ ಜಿಲ್ಲಾ ಅಧ್ಯಕ್ಷರಾದ ಸಿ.ಆರ್. ಭಟ್, ಕರ್ನಾಟಕ ವಿಶ್ವ ವಿದ್ಯಾನಿಲಯ-ಕಾಲೇಜು ಶಿಕ್ಷಕರ ಸಂಘದ ಎಸ್.ವೈ. ಹಲಸಗಿ, ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಕೆ.ವಿ. ರಾಯಚೂರ್, ಸಮೂದಾಯದ ಬಿ.ಐ. ಈಳಿಗೇರ, ಪ್ರಾಂತ ರೈತ ಸಂಘದ ಸಿ.ವೈ. ಪಾಟೀಲ್, ಎಸ್.ಎಫ್.ಐ.ನಿಂದ ಸೋಮಾಪೂರ್, ಹಮಾಲಿಗರ ಸಂಘದ ಬೀಮಣ್ಣ ಸವಣೂರ, ಎ.ಐ.ಡಬ್ಲ್ಯೂ.ಎಫ್.ನ ಶಶಿಕಲಾ ಬೆಳಗಲಿ ಹಾಗೂ ಡಿ.ವೈ.ಎಫ್.ಐ. ದಿಂದ ಅಬ್ದುಲ್ ರಜಾಕ್ ಮುಲ್ಲಾ ಮಾತನಾಡಿದರು. ಠರಾವು ಸರ್ವಾನುಮತ ದಿಂದ ಅಂಗೀಕರಿಸಲ್ಪಟ್ಟಿತು. ಎಲ್ಲಾ ಸಂಘಟನೆಯ ಪ್ರತಿನಿಧಿಯನ್ನೊಳಗೊಂಡ ಸಾಮೂಹಿಕ ಸಂಘಟನೆಯ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷೀಯ ಮಂಡಳಿ ಪರವಾಗಿ ಹಿರಿಯ ನಾಯಕ ಎ.ಜಿ. ಮುಧೋಳ ಮಾತನಾಡಿದರು.

ವಿಶ್ವ ವಿದ್ಯಾಲಯ ಹಾಗೂ ಕಾಲೇಜು ಶಿಕ್ಷಕರ ಸಂಘದ ಎಲ್.ಆರ್. ಅಂಗಡಿಯವರು ವಂದನೆ ಸಲ್ಲಿಸಿದರು.

ಶಹಾಪೂರ ತಾಲೂಕು ಸಮಾವೇಶ:

ಅಕ್ಟೋಬರ್ 25 ರಂದು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ತಾಲೂಕು ಸಮಾವೇಶವು ಶಹಪುರ ನಗರದಲ್ಲಿ ನಡೆಯಿತು. ಸಮಾವೇಶದ ಉದ್ಘಾಟನೆಯನ್ನು ವಿಮಾ ನೌಕರರ ಸಂಘದ ವಿಜಯಕುಮಾರ್ ನೇರವೇರಿಸಿದರು.

ಮುಖ್ಯ ಅತಿಥಿಗಳಾಗಿ ಎ.ಐ.ಜೆ.ಎಂ.ಎಸ್.ನ ನೀಲಾ.ಕೆ ಭಾಗವಹಿಸಿದ್ದರು. ಎಸ್.ಎಂ. ಬಿರಾದಾರ, ಬಸ್ಸಯ್ಯಾ ಸ್ವಾಮಿ, ಧವಲ್ ನದಾಪ್ ಸಾಬ್ ಸಮಾವೇಶದಲ್ಲಿ ಮಾತನಾಡಿದರು.

13 ಸಂಘಟನೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಮಾತನಾಡಿದರು. ಚನ್ನಪ್ಪ ಆನೆಗುಂದಿ ಅಧ್ಯಕ್ಷತೆ ವಹಿಸಿದ್ದು, ಮಲ್ಲಿಕಾರ್ಜುನ ಕರಿಗುಡ್ಡ ವಂದನೆ ಸಲ್ಲಿಸಿದರು.

ಬಂಟ್ವಾಳ: ಅಕ್ಟೋಬರ್ 17 ರಂದು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಸಮಾವೇಶ ಯಶಸ್ವಿಯಾಗಿ ಜರುಗಿತು. ಸಮಾವೇಶದಲ್ಲಿ ಮುಂದಾಳುಗಳಾದ ಬಿ.ಮಾದವ, ಪಿ.ಆರ್.ಕಾರಂತ, ಹೆಚ್. ಉಮಾನಾಥ ನಾಯಕ್, ಪಿ.ವಿಶ್ವನಾಥ ರೈ, ಹಾಗೂ ಹಲವು ಸಂಘಟನೆಗಳ ಪ್ರತಿನಿಧಿಗಳು ಮಾತನಾಡಿದರು.

ಸಮಾವೇಶದ ಅಧ್ಯಕ್ಷತೆಯನ್ನು ಬಿ. ವಿಶ್ವನಾಥ ನಾಯಕ್ ವಹಿಸಿದ್ದು ವಾಸುಗಟ್ಟಿ ಸ್ವಾಗತಿಸಿ, ಸಂಜೀವರ ತಂಡ ಕ್ರಾಂತಿ ಗೀತೆಯೊಂದಿಗೆ ವಂದನೆ ಸಲ್ಲಿಸಿತು.

ಅಕ್ಟೋಬರ್ ಕ್ರಾಂತಿಯ 81ನೇ ವಾರ್ಷಿಕೋತ್ಸವ

ಎಂದೆಂದೂ ದುಡಿಯುವ ಜನರಿಗೆ, ದಾರಿದ್ರ್ಯ ಪೀಡಿತರಿಗೆ ದಾರಿದೀಪ



ಸುರ್ಜಿತ್

81 ವರ್ಷಗಳ ಹಿಂದೆ ನವೆಂಬರ್ 7 ರಂದು ಜಗತ್ತನ್ನೇ ನಡುಗಿಸಿದ ಒಂದು ಘಟನೆ ನಡೆಯಿತು. ರಶ್ಯಾದಲ್ಲಿ ಆಗ ಬೋಲ್ಶೆವಿಕ್ ಪಾರ್ಟಿ ಎಂದು ಹೆಸರಿದ್ದ ಲೆನಿನ್ ನೇತೃತ್ವದ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದಲ್ಲಿ ಅಕ್ಟೋಬರ್ ಕ್ರಾಂತಿ ಯಶಸ್ವಿಯಾಯಿತು. ಇದೊಂದು ಹೊಸ ಮಾದರಿಯ ಕ್ರಾಂತಿಯಾಗಿತ್ತು, ಏಕೆಂದರೆ ಶೋಷಣೆಯನ್ನೇ ಅಂತ್ಯಗೊಳಿಸುವುದು ಅದರ ಗುರಿಯಾಗಿತ್ತು.

ಮಾರ್ಕ್ಸ್‌ವಾದದ ಅತ್ಯಂತ ದೊಡ್ಡ ಕೊಡುಗೆಯೆಂದರೆ ಚಾರಿತ್ರಿಕ ಭೌತವಾದ ಎಂದು ಎಲ್ಲರಿಗೂ ಗೊತ್ತು. ಅದುವರೆಗಿನ ವೈಜ್ಞಾನಿಕ ಬೆಳವಣಿಗೆಯ ಆಧಾರದ ಮೇಲೆ ಸಮಾಜ ಸದಾ ಹೀಗೆಯೇ ಇರಲಿಲ್ಲ ಎಂಬ ತೀರ್ಮಾನಕ್ಕೆ ಅವರು ಬಂದಿದ್ದರು. ಅದು ವಿಭಿನ್ನ ಘಟ್ಟಗಳನ್ನು ಹಾದು ಬಂದಿದೆ - ಆದಿಕಾಲದ ಸಮತಾವಾದ, ಗುಲಾಮಪದ್ಧತಿ, ಊಳಿಗಮಾನ್ಯ ಪದ್ಧತಿಯ ಹಂತಗಳನ್ನು ದಾಡಿ ಅದು ಬಂಡವಾಳಶಾಹಿ ಘಟ್ಟ ತಲುಪಿದೆ. ಶೋಷಣಾ ವ್ಯವಸ್ಥೆಯನ್ನು ಕಿತ್ತೆಸೆಯುವ ಮೂಲಕವಷ್ಟೆ ಸಮಾಜವಾದವನ್ನು ಪೂರ್ಣಗೊಳಿಸಿ ಸಮತಾವಾದೀ ಸಮಾಜದತ್ತ ಸಾಗಲು ಸಾಧ್ಯ. ಹಾಗಾದಾಗ ಉತ್ಪಾದನಾ ಶಕ್ತಿಗಳು ಪ್ರತಿಯೊಬ್ಬರಿಂದ ಅವರವರ ಸಾಮರ್ಥ್ಯಕ್ಕನುಗುಣವಾಗಿ, ಪ್ರತಿಯೊಬ್ಬರಿಗೆ ಅವರವರ ಅಗತ್ಯಕ್ಕನುಗುಣವಾಗಿ" ಎಂಬ ಮಟ್ಟ ತಲುಪಿದಾಗ ಮಾತ್ರವೇ ಸಮಾಜದ ಬೆಳವಣಿಗೆಯ ಅಂತಿಮ ಘಟ್ಟ ತಲುಪಲು ಸಾಧ್ಯ. ಈ ಬೆಳವಣಿಗೆಗೆ ವರ್ಗಹೋರಾಟ ಚಾಲಕ ಶಕ್ತಿ. ಕೆಲವರು ಈ ವರ್ಗಹೋರಾಟದ ಸಿದ್ಧಾಂತವೇ ಮಾರ್ಕ್ಸ್‌ರ ಅತಿ ದೊಡ್ಡ ಕೊಡುಗೆ ಎನ್ನುತ್ತಾರೆ. ಆದರೆ ಇದು ಸರಿಯಲ್ಲ. ಏಕೆಂದರೆ, ಲೆನಿನ್ ಹೇಳಿದಂತೆ 'ವರ್ಗಹೋರಾಟದ ಸಿದ್ಧಾಂತವನ್ನು ಸೃಷ್ಟಿಸಿದವರು ಬೂರ್ಜ್ವಾ ವರ್ಗವೇ, ಮಾರ್ಕ್ಸ್‌ರಲ್ಲ. ಮಾರ್ಕ್ಸ್‌ವಾದವನ್ನು ವರ್ಗಹೋರಾಟಕ್ಕೆ ಸೀಮಿತಗೊಳಿಸುವುದೆಂದರೆ ಅದನ್ನು ಕಡಿತಗೊಳಿಸುವುದು.... ವರ್ಗ ಹೋರಾಟವನ್ನು ಮಾನ್ಯ ಮಾಡುವುದನ್ನು ಇನ್ನಷ್ಟು ವಿಸ್ತರಿಸಿ ಶ್ರಮಿಕ ವರ್ಗದ ಸರ್ವಾಧಿಕಾರವನ್ನು ಮಾನ್ಯ ಮಾಡುವವರೇ ಮಾರ್ಕ್ಸ್‌ವಾದಿಗಳು"

ಮೂಲಭೂತ ವಿಶ್ಲೇಷಣೆ ಈಗಲೂ ಸತ್ಯ

ಬಂಡವಾಳಶಾಹಿ ಸಾಮ್ರಾಜ್ಯಶಾಹಿಯ ಮಟ್ಟ ತಲುಪಿದಾಗ ಎಲ್ಲಾ ವೈರುಧ್ಯಗಳು ಉಲ್ಬಣಗೊಂಡಾಗ ಆ ಆಧಾರದಲ್ಲೇ ಅಕ್ಟೋಬರ್ ಕ್ರಾಂತಿ ಯಶಸ್ವಿಯಾಯಿತು. ಆ ಮೂಲಕ ಲೆನಿನ್‌ರ ವಿಶ್ಲೇಷಣೆ ಸತ್ಯ ಎಂದು ಸಾಬೀತಾಯಿತು. ಆನಂತರ ಹಲವು ಬದಲಾವಣೆಗಳಾದರೂ, ಸಮಾಜವಾದಕ್ಕೆ ಹಿನ್ನಡೆಯಾದರೂ ಅಕ್ಟೋಬರ್ ಕ್ರಾಂತಿಯ ಮೂಲಭೂತ ವಿಶ್ಲೇಷಣೆ ಈಗಲೂ ಅಷ್ಟೇ ಸತ್ಯ. ಕ್ರಾಂತಿ ಮುಂದುವರಿಯುತ್ತದೆ, ಅದು ಬೂರ್ಜ್ವಾ ಪ್ರಜಾಪ್ರಭುತ್ವ ಹಂತದಿಂದ ಸಮಾಜವಾದಿ ಹಂತಕ್ಕೆ ಪರಿವರ್ತನೆಗೊಳ್ಳುತ್ತದೆ. ಆದರೆ ಇದು ಶ್ರಮಿಕ ವರ್ಗದ ಪಕ್ಷದ ಕ್ರಾಂತಿಕಾರಿ ಹೋರಾಟದ ರಾಜಕೀಯ ಮಾರ್ಗದರ್ಶನದಿಂದ ಮಾತ್ರ ಸಾಧ್ಯ ಎಂದ ಲೆನಿನ್ 1905 ರ ರಶ್ಯನ್ ಕ್ರಾಂತಿ, ಫೆಬ್ರವರಿ ಕ್ರಾಂತಿ ಮತ್ತು ನಂತರದ ಅಕ್ಟೋಬರ್ ಕ್ರಾಂತಿಯ ಅನುಭವಗಳಿಂದ ಈ ತೀರ್ಮಾನಕ್ಕೆ ಬಂದರು. ಇಲ್ಲಿ ಪಕ್ಷದ ಪಾತ್ರವನ್ನು ಒತ್ತಿ ಹೇಳಲಾಗಿದೆ. ಏಕೆಂದರೆ ಅದರ ಮುಖಂಡತ್ವವಿಲ್ಲದೆ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗಲು ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆಯ ವೈರುಧ್ಯಗಳ ಅಧ್ಯಯನ ಮಾಡುವಾಗ ಲೆನಿನ್ ಇನ್ನೊಂದು ತೀರ್ಮಾನಕ್ಕೆ ಬಂದರು - ಒಂದು ಅಥವಾ ಕೆಲವು ದೇಶಗಳಲ್ಲಿ ಸಮಾಜವಾದವನ್ನು ಕಟ್ಟಲು ಸಾಧ್ಯ ಎಂದು. ಅವರ ಭವಿಷ್ಯವಾಣಿ, ವಿಶ್ಲೇಷಣೆಯನ್ನು ನಂತರದ ಬೆಳವಣಿಗೆಗಳು ಸಾಬೀತು ಮಾಡಿವೆ.

ಸ್ಫೂರ್ತಿಯ ಸೆಲೆ

ಅಕ್ಟೋಬರ್ ಕ್ರಾಂತಿಯ ಆರಂಭದಲ್ಲೇ ಅದು ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳಿಂದ ಒಂದು ದೊಡ್ಡ ಸವಾಲನ್ನು ಎದುರಿಸಬೇಕಾಗಿ ಬಂತು, ಸಾಮ್ರಾಜ್ಯಶಾಹಿ ಹಸ್ತಕ್ಷೇಪ, ಅಂತರ್ಯುದ್ಧ, ಅತ್ಯಂತ ಕೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂತು. ಇವನ್ನೆಲ್ಲಾ ಎದುರಿಸಿ ಪಿತೂರಿಗಳನ್ನೆಲ್ಲಾ ಸೋಲಿಸಲು ಅದಕ್ಕೆ ಸಾಧ್ಯವಾಯಿತು. ಇದಕ್ಕೆ ಕಾರಣ ಅದು ಕಾರ್ಮಿಕ ವರ್ಗಕ್ಕೆ, ರೈತಾಪಿ ವರ್ಗಕ್ಕೆ ನೀಡಿದ ಸ್ಫೂರ್ತಿ ಹಾಗೂ ಈ ಎರಡು ವರ್ಗಗಳಲ್ಲಿ ಅದು ಬೆಳಸಿದ ಐಕ್ಯತೆ. ಈ ಮೂಲಕ ಅದು ಸಮಾಜವಾದೀ ಸಮಾಜವನ್ನು ಬೆಳೆಸಲಾರಂಭಿಸಿತು. ಅದು ಹೊಸದೊಂದು ಕೈಗಾರಿಕಾ ಆಧಾರವನ್ನು ಸೃಷ್ಟಿಸಿತು. ಕೃಷಿಯನ್ನು ಅಭಿವೃದ್ಧಿ ಪಡಿಸಿತು. ಸೋವಿಯೆತ್ ಒಕ್ಕೂಟದಲ್ಲಿ ಮಾತ್ರವಲ್ಲ ಇಡಿ ಜಗತ್ತಿನಲ್ಲಿ ಕೋಟ್ಯಾಂತರ ಶ್ರಮ ಜೀವಿಗಳಲ್ಲಿ ಸ್ಫೂರ್ತಿ ತುಂಬಿತು. ಅಷ್ಟೇ ಅಲ್ಲ, ರಾಷ್ಟ್ರೀಯ ವಿಮೋಚನೆಗಾಗಿ ವಸಾಹತುಶಾಹಿ-ವಿರೋಧಿ ಹೋರಾಟಗಳಿಗೂ ಅದು ಹೊಸ ಚಾಲನೆ ನೀಡಿತು. ಈಗಲೂ ಅಕ್ಟೋಬರ್ ಕ್ರಾಂತಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕಾರ್ಮಿಕ ವರ್ಗಕ್ಕೆ ಸ್ಫೂರ್ತಿಯ ಒಂದು ಸೆಲೆ.

ಅಕ್ಟೋಬರ್ ಕ್ರಾಂತಿಯ ಯಶಸ್ವಿನಿಂದಾಗಿ 1919 ರಲ್ಲಿ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಮುತುವರ್ಜಿಯಿಂದ, ಲೆನಿನ್‌ರ ಮಾರ್ಗದರ್ಶನದಲ್ಲಿ 'ತೃತೀಯ ಅಂತರ್ರಾಷ್ಟ್ರೀಯ' ರಚನೆಗೊಂಡಿತು. ಇದರಲ್ಲಿ ವಿವಿಧ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಸೇರಿದ್ದವು. ಮೊದಲ ಮಹಾಯುದ್ಧದಲ್ಲಿ ತಂತಮ್ಮ ದೇಶಗಳ ಬೂರ್ಜ್ವಾ ವರ್ಗದವರ ಬೆಂಬಲಕ್ಕೆ ನಿಂತ ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷಗಳ ಕುಸಿತದ ಹಾಗೂ ಕ್ರಾಂತಿಕಾರಿ ವಿಭಾಗಗಳ ಮೇಲೆ ದಮನದ ಹಿನ್ನೆಲೆಯಲ್ಲಿ ಇದು ನಡೆಯಿತು. ಇದು ವಿಶ್ವಾದ್ಯಂತ ಕಮ್ಯುನಿಸ್ಟ್ ಆಂದೋಲನಕ್ಕೆ ದೊಡ್ಡ ಪ್ರಚೋದನೆ ನೀಡಿತು. ನಂತರ ಫ್ಯಾಸಿಸ್ಟ್-ವಿರೋಧಿ ಹೋರಾಟದಲ್ಲೂ ತೃತೀಯ ಅಂತರ್ರಾಷ್ಟ್ರೀಯದ ಸಂಯುಕ್ತ ರಂಗದ ಮನವಿಗೆ ಗಮನ ಕೊಡದ ಸಾಮ್ರಾಜ್ಯಶಾಹಿ ಮುಖಂಡತ್ವದ ದೇಶಗಳು ಒಂದರ ಮೇಲೊಂದರಂತೆ ಹಿಟ್ಲರ್‌ನ ಪಡೆಗಳ ಎದುರು ಕುಸಿದಾಗ ಸೋವಿಯತ್ ಒಕ್ಕೂಟ ಮಾತ್ರವೇ ಈ ಫ್ಯಾಸಿಸ್ಟ್ ಮಂದೆಗಳನ್ನು ಸದೆಬಡಿದು ಫ್ಯಾಸಿಸಂ ನೊಗದಿಂದ ಹಲವಾರು ದೇಶಗಳನ್ನು ವಿಮೋಚನೆಗೊಳಿಸಿದ್ದು ಕೇವಲ ಆಕಸ್ಮಿಕವಲ್ಲ.

ವೈಜ್ಞಾನಿಕ, ಚಾರಿತ್ರಿಕ ರಂಗದಲ್ಲೂ ಸೋವಿಯತ್ ಒಕ್ಕೂಟ ಗಮನಾರ್ಹ ಪ್ರಗತಿ ಸಾಧಿಸಿತು. ಅಣುವಿನ ಮೇಲಿನ ಗುತ್ತೇದಾರಿಕೆಯನ್ನು ಮುರಿಯಲು ಅದಕ್ಕೆ ಸಾಧ್ಯವಾಯಿತು. ಬಾಹ್ಯಾಕಾಶ ಸಂಶೋಧನೆಯಲ್ಲಿ ಅದು ಯಾರಿಂದಲೂ ಹಿಂದೆಯಿರಲಿಲ್ಲ. ಅದು ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ವಿರುದ್ಧ ಒಂದು ಕೋಟೆಯಾಗಿತ್ತು. ಅದರ ಅಸ್ತಿತ್ವವೇ ಹಲವಾರು ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗಳ ಯಶಸ್ವಿಗೆ ಕಾಣಿಕೆ ನೀಡಿತು.

ಮುಂದೊಯ್ಯುವುದು ಸಾಧ್ಯವೇ?

ಸಮಾಜವಾದಕ್ಕೆ ಹಿನ್ನಡೆಯಾದ ನಂತರ, ವಿಶೇಷವಾಗಿ ಸೋವಿಯತ್ ಒಕ್ಕೂಟದಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯ ನಂತರ ಈ ಪ್ರಕ್ರಿಯೆಯನ್ನು ಮುಂದೊಯ್ಯುವುದು ಸಾಧ್ಯವೇ ಎಂಬ ಪ್ರಶ್ನೆ ಎದ್ದಿತು. ಅಕ್ಟೋಬರ್ ಕ್ರಾಂತಿ ಅಗಾಧ ಸಾಧನೆಗಳಿದ್ದಾಗ್ಯೂ ಹಿನ್ನಡೆ ಏಕೆ ಕಂಡಿತು?.ಜನಗಳಿಗೆ ಕ್ರಾಂತಿಯ ಸಾಧನೆಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲವೇಕೆ? ಈ ಬಗ್ಗೆ ಸಾಕಷ್ಟು ಬರೆಯಲಾಗಿದೆ. ವಿಭಿನ್ನ ಕಮ್ಯುನಿಸ್ಟ್ ಪಕ್ಷಗಳು ತಂತಮ್ಮ ಅನುಭವಗಳನ್ನು ವಿಶ್ಲೇಷಿಸಿವೆ. ಸಿಪಿಐ(ಎಂ) 1992 ರಲ್ಲಿ 14ನೇ ಮಹಾಧಿವೇಶನದಲ್ಲಿ ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಒಂದು ನಿರ್ಣಯವನ್ನು ಅಂಗೀಕರಿಸಿತು. ಈ ಹಿನ್ನಡೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ನೀತಿಗಳ ತಪ್ಪಿನಿಂದಾಗಿ ಆದದ್ದಲ್ಲ, ಅದನ್ನು ಜಾರಿಗೆ ತರುವಾಗ ಬಂದ ವಿಕೃತಿ, ಮಾರ್ಗಚ್ಯುತಿಗಳ ಫಲಿತಾಂಶ ಇದು ಎಂದು ಆ ನಿರ್ಣಯ ಹೇಳಿತು. ಈ ಬೆಳವಣಿಗೆಗಳ ಅಧ್ಯಯನವನ್ನು ಮುಂದುವರೆಸಬೇಕು ಎಂದೂ ಆ ನಿರ್ಣಯ ಒತ್ತಿ ಹೇಳಿತು.

ಲೆನಿನ್ ಕಮ್ಯುನಿಸ್ಟ್ ಪಕ್ಷಗಳು, ಅಕ್ಟೋಬರ್ ಕ್ರಾಂತಿಯ ಅನುಭವಗಳನ್ನು ಬಳಸಿಕೊಳ್ಳುವಾಗ ತಂತಮ್ಮ ದೇಶಗಳ ನಿರ್ದಿಷ್ಟ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದಿದ್ದರೂ ಹಲವು ಸಮಾಜವಾದಿ ದೇಶಗಳು ಸಮಾಜವಾದೀ ರಚನೆಯ ಸೋವಿಯತ್ ಮಾದರಿಯನ್ನೇ ಅಂಗೀಕರಿಸಿದವು ಎಂಬುದೂ ಒಂದು ವಾಸ್ತವ ಸಂಗತಿ. ಆದರೂ ಈ ಹಿನ್ನಡೆಯ ಮೊದಲೇ ಹಲವು ಸಮಾಜವಾದಿ ದೇಶಗಳು ತಮ್ಮದೇ ಮಾದರಿಗಳನ್ನು ಹುಡುಕಿಕೊಂಡು ಬೆಳೆಸಲಾರಂಭಿಸಿದವು.

ನ್ಯೂನ್ಯತೆಗಳನ್ನು ಮೌಲ್ಯಮಾಪನ ಮಾಡುವಾಗ ಮಾರ್ಕ್ಸ್ ಹಾಗೂ ಎಂಗೆಲ್ಸ್ ವಿಭಿನ್ನ ದೇಶಗಳಲ್ಲಿ ಸಮಾಜವಾದೀ ರಚನೆ ತಳೆಯಬಹುದಾದ ನಿರ್ದಿಷ್ಟ ಸ್ವರೂಪದ ಬಗ್ಗೆ ಕಂಡರಿಸಿರಲಿಲ್ಲ ಎಂಬುದನ್ನು ನಾವು ಅರಿಯಬೇಕು. ಒಂದು ಸಾಬೀತಾಗಿರುವ ಸಂಗತಿಯೆಂದರೆ ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿಯ ಮುಖಂಡತ್ವವನ್ನು ಕಮ್ಯುನಿಸ್ಟ್ ಪಕ್ಷ ವಹಿಸಿದ್ದರೆ ಆ ಕ್ರಾಂತಿ ಮುಂದಿನ ಸಮಾಜವಾದಿ ಕ್ರಾಂತಿಯ ಘಟ್ಟಕ್ಕೆ ಹೋಗಬಲ್ಲದು ಎಂದು.

ಸೋವಿಯತ್ ಒಕ್ಕೂಟದ ವಿಘಟನೆಯಿಂದ ತಾವು ಏನನ್ನು ಕಳಕೊಂಡಿದ್ದೇವೆ ಎಂದು ರಶ್ಯಾದ ಜನಗಳು ಈಗಾಗಲೇ ಅರಿಯಲಾರಂಭಿಸಿದ್ದಾರೆ. ಬಂಡವಾಳಶಾಹಿ ಉತ್ಪಾದನಾ ವಿಧಾನವನ್ನು ಮತ್ತೆ ತರುವುದನ್ನು ಅವರು ಪ್ರತಿರೋಧಿಸುತ್ತಿದ್ದಾರೆ. ಸಾಮಾಜಿಕ ಸೌಲಭ್ಯಗಳು, ಪುಕ್ಕಟೆ ಶಿಕ್ಷಣ, ಪುಕ್ಕಟೆ ಆರೋಗ್ಯ ವ್ಯವಸ್ಥೆ, ಪುಕ್ಕಟೆ ವಸತಿ, ಕೆಲಸದ ಭದ್ರತೆ, ನಿವೃತ್ತಿ ವೇತನ, ಅಗ್ಗದ ಆಹಾರ, ಜೀವನಾವಶ್ಯಕ ವಸ್ತುಗಳ ಸ್ಥಿರ ಬೆಲೆಗಳು - ಇವೆಲ್ಲವುಗಳಿಂದ ಅವರೀಗ ವಂಚಿತರಾಗಿದ್ದಾರೆ. ಸಾಮ್ರಾಜ್ಯಶಾಹಿಗಳು ಆಂತರಿಕ ಬುಡಮೇಲು ಕೃತ್ಯಗಳಿಂದ ಪ್ರತಿಕ್ರಾಂತಿ- ನಡೆಸುವಲ್ಲಿ ಯಶಸ್ವಿಯಾದರೂ ಜನ ಅಲ್ಪ ಸಮಯದಲ್ಲೇ ಪ್ರತಿರೋಧಿಸಲಾರಂಭಿಸಿರುವುದು ಕೇವಲ ಆಕಸ್ಮಿಕವಲ್ಲ. ಕಮ್ಯುನಿಸ್ಟ್ ಪಕ್ಷ ಹೆಚ್ಚೆಚ್ಚು ಪ್ರಮಾಣದಲ್ಲಿ ಜನಗಳ ವಿಶ್ವಾಸ ಗಳಿಸುತ್ತಿದೆ.

ಈ ಹಿನ್ನಡೆಯಿಂದ ಪಾಠ ಕಲಿತ ಈಗ ಅಸ್ತಿತ್ವದಲ್ಲಿರುವ ಸಮಾಜವಾದಿ ದೇಶಗಳು ಪ್ರಸ್ತುತ ಸನ್ನಿವೇಶವನ್ನು ಎದುರಿಸಲು ತಮ್ಮ ಆರ್ಥಿಕಗಳನ್ನು ಪುನರ್ರಚಿಸುತ್ತಿದ್ದಾರೆ, ಅದರಲ್ಲಿ ಸ್ವಲ್ಪ ಯಶಸ್ಸನ್ನು ಗಳಿಸಿದ್ದಾರೆ. ಚೀಣಾ ಏನೇ ತೊಂದರೆಗಳಿದ್ದರೂ ತನ್ನ ಆರ್ಥಿಕವನ್ನು ತ್ವರಿತವಾಗಿ ಬೆಳೆಸುತ್ತಿದೆ, ಅಭಿವೃದ್ಧಿಶೀಲ ದೇಶಗಳಲ್ಲೇ ಅತಿ ಹೆಚ್ಚು ಬೆಳವಣಿಗೆ ದರ ಸಾಧಿಸಿದೆ. ಉತ್ಪಾದನಾ ಶಕ್ತಿಗಳನ್ನು ಬೆಳೆಸಲು ಅಲ್ಲಿ ಪ್ರಧಾನ ಒತ್ತು ನೀಡಲಾಗಿದೆ. ವಿದೇಶಿ ಬಂಡವಾಳವನ್ನು ಬಳಸುವಾಗಲೇ ನಾಲ್ಕು ಮೂಲಾಧಾರ ನೀತಿಗಳಿಗೆ ಬದ್ಧರಾಗಿದ್ದೇವೆ ಎಂದು ಅವರು ಒತ್ತಿ ಹೇಳುತ್ತಾರೆ. ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷವೂ ಬದಲಾದ ಸನ್ನಿವೇಶಗಳಲ್ಲಿ ತಮ್ಮ ಆರ್ಥಿಕವನ್ನು ಬೆಳೆಸಲು ಪ್ರಯತ್ನಿಸುತ್ತಿದೆ. ಕೊರಿಯನರೂ ಕೂಡಾ. ಕ್ಯೂಬಾ ತನ್ನ ಎಲ್ಲಾ ಕಷ್ಟಗಳು ಹಾಗೂ ಅಮೆರಿಕದ ನಿರ್ಬಂಧದ ನಡುವೆಯೂ ಸೋವಿಯತ್ ಒಕ್ಕೂಟದಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯ ನಂತರವೂ ಅಮೆರಿಕನ್ ಸಾಮ್ರಾಜ್ಯಶಾಹಿಯ ಎಲ್ಲಾ ರೀತಿಯ ಒತ್ತಡಗಳನ್ನು ಯಶಸ್ವಿಯಾಗಿ ಎದುರಿಸಿ ನಿಂತು ಸಮಾಜವಾದಿ ದಾರಿಯಲ್ಲಿ ಮುಂದುವರೆಯುತ್ತಿದೆ.

ಸಮಾಜವಾದಕ್ಕೆ ಹಿನ್ನಡೆಯಾದ ಕೂಡಲೇ ಸಮಾಜವಾದ ಸತ್ತಿದೆ, ಬಂಡವಾಳಶಾಹಿ ಸಮಾಜದ ವಿಕಾಸದ ಅಂತಿಮ ಘಟ್ಟ ಎಂದು ಸಾಮ್ರಾಜ್ಯಶಾಹಿ ಬೃಹತ್ ಪ್ರಮಾಣದಲ್ಲಿ ಅಪಪ್ರಚಾರ ಹರಿಯಬಿಟ್ಟಿತು. ಈಗ ಬಂಡವಾಳಶಾಹಿ ದೇಶಗಳ ಬೆಳವಣಿಗೆಗಳು ಇದು ಸಂಪೂರ್ಣ ಸುಳ್ಳು ಎಂದು ಸಾಬೀತು ಮಾಡಿವೆ. ಮೆಕ್ಸಿಕೋ ನಂತರ 'ಏಶ್ಯನ್ ಹುಲಿ'ಗಳಿಗಾದ ಪರಿಸ್ಥಿತಿ, ನಂತರ ರಶ್ಯಾ, ಬ್ರೆಜಿಲ್, ಅರ್ಜೆಂಟಿನಾ ಮತ್ತಿತರ ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿನ ಬೆಳವಣಿಗೆಗಳು ಬಂಡವಾಳಶಾಹಿಯ ದಿವಾಳಿಕೋರತನದ ಸೂಚಕಗಳು. ಇದರಿಂದ ಈ ಉದಾರೀಕರಣ ಹಾಗೂ ಜಾಗತೀಕರಣದ ವಿರುದ್ಧ ಬೃಹತ್ ಮುಷ್ಕರಗಳು ಮುಂದುವರೆಯುತ್ತಿವೆಯಷ್ಟೆ ಅಲ್ಲ, ಇದರ ರಾಜಕೀಯ ಅಂಶವನ್ನೂ ನಿರ್ಲಕ್ಷಿಸುವಂತಿಲ್ಲ. ಯುರೋಪಿನಲ್ಲಿ ನಡೆದ ಇತ್ತೀಚಿನ ಚುನಾವಣೆಗಳಲ್ಲಿ ಬಲಪಂಥೀಯರಿಗೆ ಸೋಲು ಕಂಡುಬಂದಿದೆ. ಜರ್ಮನಿ, ಫ್ರಾನ್ಸ್, ಇಟಲಿ ಮತ್ತು ಇಂಗ್ಲೆಂಡ್ ಕೆಲವು ಉದಾಹರಣೆಗಳು.

ಬಂಡವಾಳಶಾಹಿ ಒಂದು ವ್ಯವಸ್ಥೆಯಾಗಿ ಉತ್ಪಾದನಾ ಶಕ್ತಿಗಳನ್ನು ಪೂರ್ಣವಾಗಿ ಬೆಳೆಸಲಾರದು. ಅದು ಸದಾ ಬಿಕ್ಕಟ್ಟಿನಿಂದ ಗ್ರಸ್ತವಾಗಿರುತ್ತದೆ. ಹಿನ್ನಡೆಗಳೇನೇ ಇದ್ದರೂ ಸಮಾಜವಾದ ಖಂಡಿತಾ ಮುನ್ನಡೆಯುತ್ತಲೇ ಇರುತ್ತದೆ, ಸಮಾಜವಾದಿ ಶಕ್ತಿಗಳು ಮತ್ತೆ ಒಟ್ಟುಗೂಡಿ ಮುನ್ನುಗ್ಗುತ್ತವೆ. ಗಮನದಲ್ಲಿಡಬೇಕಾದ ಸಂಗತಿಯೆಂದರೆ ಮಾರ್ಕ್ಸ್‌ವಾದ ಒಂದು ಕುರುಡು ಸಿದ್ಧಾಂತವಲ್ಲ. ಲೆನಿನ್ ಹೇಳಿರುವಂತೆ ಅದು ಪ್ರತಿಯೊಂದು ದೇಶಗಳಲ್ಲಿ ಆಯಾಯ ದೇಶಗಳಲ್ಲಿನ ಮೂರ್ತ ಪರಿಸ್ಥಿತಿಗಳಿಗೆ ಮೂರ್ತ ರೀತಿಯಲ್ಲಿ ಅನ್ವಯಿಸಬೇಕಾದ ಒಂದು ವಿಜ್ಞಾನ. ಅಕ್ಟೋಬರ್ ಕ್ರಾಂತಿಯ ದಾರದೀಪ ಮುಂದೆಯೂ ದುಡಿಯುವ ಜನಗಳಿಗೆ, ದಾರಿದ್ರ್ಯ ಪೀಡಿತ ಜನಗಳಿಗೆ ಬಂಡವಾಳಶಾಹಿಯಿಂದ ಸಮಾಜವಾದಕ್ಕೆ, ಅಂತಿಮವಾಗಿ ಒಂದು ಕಮ್ಯುನಿಸ್ಟ್ ಸಮಾಜದತ್ತ ಸಾಗುವ ಒಂದು ಹೊಸ ದಾರಿಯ ಮಾರ್ಗದರ್ಶನ ನೀಡುತ್ತಲೇ ಇರುತ್ತದೆ. ○

ಸೋವಿಯತ್ ಒಕ್ಕೂಟದ ವಿಘಟನೆಯಿಂದ ತಾವು ಏನನ್ನು ಕಳೆದುಕೊಂಡಿದ್ದೇವೆ ಎಂದು ರಶ್ಯಾ ಜನಗಳು ಈಗಾಗಲೇ ಅರಿಯಲಾರಂಭಿಸಿದ್ದಾರೆ. ಇದೇ ಅಕ್ಟೋಬರ್ 7 ರಂದು ಮಾಸ್ಕೋದಲ್ಲಿ 10 ಲಕ್ಷ ಜನರು ಬಲವಾದ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯಲ್ಲಿ ಯಲ್ಸಿನ್-ವಿರೋಧಿ ಘೋಷಣೆ ಕೂಗುತ್ತಿರುವ ರಶ್ಯನ್ ಜನ



ನವೆಂಬರ್ 16 ರ ಬೆಂಗಳೂರು ಚಲೋ, ಬೃಹತ್ ಮತ ಪ್ರದರ್ಶನ ಏಕೆ?

ಏಕೆಂದರೆ ವಿವಿಧ ಜನಸಮೂಹಗಳ ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರ ಕಾಣಬೇಕಾದರೆ ಈ ಸಮಸ್ಯೆಗಳನ್ನು ಉಂಟುಮಾಡುವ ಧೋರಣೆಗಳನ್ನೇ ಬದಲಿಸಲು ಹೋರಾಡಬೇಕಾಗುತ್ತದೆ. ಪರಿಹಾರ ನೀಡುವ ಬದಲಿ ಧೋರಣೆಗಳಿಗಾಗಿ ಹೋರಾಡಬೇಕಾಗುತ್ತದೆ, 'ಪರಿಹಾರ ಹೋರಾಟ'ಗಳ ಘಟ್ಟ ದಾಟಿ 'ಬೆಂಗಳೂರು ಚಲೋ' ಹೋರಾಟವನ್ನು ಯಶಸ್ವಿಗೊಳಿಸಿದರೆ ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗುತ್ತದೆ. ಅದರಿಂದ ಈ ಸಮಸ್ಯೆಗಳನ್ನು ಉಂಟುಮಾಡುವ ಜನ-ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸುವುದು ಸಾಧ್ಯ.

ವಿ.ಜೆ.ಕೆ.ನಾಯರ್

ಕೇಂದ್ರ ಮತ್ತು ರಾಜ್ಯ ಸರಕಾರಗಳ ನೀತಿಗಳು, ಕಾರ್ಮಿಕ, ರೈತ ಮತ್ತು ಎಲ್ಲಾ ಜನ ವಿಭಾಗಗಳ ಜೀವನ ಪರಿಸ್ಥಿತಿಯನ್ನು ಕಷ್ಟಕರವಾಗಿ ಮಾಡುತ್ತಿವೆ. ಇದಕ್ಕೆ ವಿರೋಧವಾದ ಬದಲಿ ಧೋರಣೆಯ ಗುರಿಯುಳ್ಳ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ.

ಈ ಉದ್ದೇಶದಿಂದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ರಚಿತವಾಗಿ 9 ಜಾಥಾಗಳು ರಾಜ್ಯದ ಮೂಲೆ ಮೂಲೆಗಳಲ್ಲಿ ಪ್ರಚಾರಾಂದೋಲನದ ಕಾರ್ಯಕ್ರಮವನ್ನು ವಿವರಿಸುತ್ತಾ ಇದೀಗ ಕೊನೆಗೊಂಡಿವೆ. ಮುಂದಿನ ಹಂತವಾದ ಬೆಂಗಳೂರು ಚಲೋ ನವೆಂಬರ್ 16 ಕ್ಕೆ ನಡೆಸಬೇಕಾಗಿದೆ. ದಿನನಿತ್ಯ ಜನರ ಸಮಸ್ಯೆಗಳನ್ನು ಕೈಗೆತ್ತಿ ಕೊಂಡು ಚಟುವಟಿಕೆ ನಡೆಸುವುದೇ ಸಾಮೂಹಿಕ ಸಂಘಟನೆಗಳ ವ್ಯವಸ್ಥೆ. ಆದರೆ ಈ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸ ಬೇಕಾದರೆ ಈ ಸಮಸ್ಯೆಗಳನ್ನು ಉಂಟು ಮಾಡುವ ಧೋರಣೆಗಳ ಬದಲಾಗಿ ಸಮಸ್ಯೆಗಳ ಪರಿಹಾರ ಕಾಣುವ ಧೋರಣೆ ಗಳಿಗಾಗಿ ಹೋರಾಡುವುದು ಪ್ರಥಮ ಕರ್ತವ್ಯವಾಗಬೇಕಾಗಿದೆ.

ಸಾಮೂಹಿಕ ಸಂಘಟನೆಗಳ ನಾಯಕರು ಮತ್ತು ಕಾರ್ಯಕರ್ತರು ಮೇಲೆ ಹೇಳಿದ ಅಂಶವನ್ನು ಮನಗಾಣದೆ ಈ ಸಂಘಟನೆಗಳ ಸದಸ್ಯರ, ಜನತೆಯ ಸಮಸ್ಯೆಗಳಿಗೆ ಪರಿಹಾರ ಕಾಣಲಾಗದು. ಅದುದರಿಂದ ದಿನನಿತ್ಯದ ಸಮಸ್ಯೆಗಳ ಎದುರಿಸಲು ಜೊತೆಗೆ ಒಟ್ಟು ಸಮಸ್ಯೆಗಳ ಪರಿಹಾರದ ಕಡೆ, ಎನ್.ಪಿ.ಎಂ.ಓ. ನಡೆಸುವ ಆಂದೋಲನದ ಕಡೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ಬೆಲೆಏರಿಕೆ

ದಿನನಿತ್ಯದ ಜೀವನಕ್ಕೆ ಅಗತ್ಯವಸ್ತುಗಳ ಬೆಲೆ ಏರಿಕೆ ತೀವ್ರಗತಿಯಲ್ಲಿ ಆಗುತ್ತಿದೆ. ಎಣ್ಣೆ, ಈರುಳ್ಳಿ, ತರಕಾರಿ ಒಳಗೊಂಡು ಯಾವುದೇ ಪದಾರ್ಥಗಳ ಬೆಲೆ ಏರಿಕೆಯಿಂದ ಮುಕ್ತವಾಗಿಲ್ಲ. ಎಣ್ಣೆ ಬೆಲೆ ಏರುತ್ತಿರುವಾಗಲೇ ಎಣ್ಣೆ ಬೀಜದ (ಉದಾ: ಕಡಲೇಕಾಯಿ) ಬೆಲೆ ಕುಸಿಯುತ್ತಿದೆ. ಇದು ಒಂದೇ ಧೋರಣೆಯ ಜನ-ವಿರೋಧಿ ಅಂಶದ ಎರಡು ಮುಖಗಳಾಗಿವೆ. ಎಣ್ಣೆ ಬೆಲೆ ವಿರುದ್ಧ ಹೋರಾಡಬಹುದು, ಕಡಲೇ ಬೀಜಕ್ಕೆ ಸರಿಯಾದ ಬೆಲೆ ಸಿಗಬೇಕೆಂದು ಹೋರಾಡಬಹುದು, ಆದರೆ ಕೇಂದ್ರ ಸರ್ಕಾರ ಎಣ್ಣೆಯ 'ಭವಿಷ್ಯದ ವ್ಯಾಪಾರ' (ಫಾರ್ವರ್ಡ್ ಟ್ರೇಡ್) ಮಾಡಬಹುದೆಂದು ತೆಗೆದುಕೊಂಡ ಧೋರಣೆಯನ್ನು ಕೈಬಿಡಬೇಕೆಂದು ಹೋರಾಡುವುದು ಮುಖ್ಯವಾಗಿರುತ್ತದೆ. ಈ ಹೋರಾಟದ ಜೊತೆಯಲ್ಲೇ ರೈತರ ಉತ್ಪನ್ನ ಬೆಂಬಲಿತ ಬೆಲೆಯ ಆಧಾರದಲ್ಲಿ ಸರ್ಕಾರದ ಸಂಸ್ಥೆಗಳು ಕೊಂಡುಕೊಳ್ಳುವುದು, ಜನಪರವಾದ 'ನ್ಯಾಯಬೆಲೆ' ಅಂಗಡಿಗಳ ಮೂಲಕ ವಿತರಿಸುವುದು ಅಗತ್ಯವಾಗಿದೆ. ಎಣ್ಣೆಯ 'ಭವಿಷ್ಯದ ವ್ಯಾಪಾರ'ನಿಲ್ಲಿಸಬೇಕಾದರೆ, ಬೆಂಬಲಿತ ಬೆಲೆ, ಸಾರ್ವಜನಿಕ ನ್ಯಾಯಬೆಲೆ, ವಿತರಣಾ ವ್ಯವಸ್ಥೆ ಇವೆಲ್ಲ ಪರಿಣಾಮಕಾರಿಯಾಗಬೇಕಾದರೆ ಮುಕ್ತ ಮಾರುಕಟ್ಟೆಯೆಂಬ ಡೋಂಗಿ ಸಂಕಲ್ಪಕ್ಕೆ ವಿರುದ್ಧವಾದ ಸಾಮಾಜಿಕ ಅಥವಾ ಸರ್ಕಾರದ ನಿಯಂತ್ರಣ ಅತ್ಯಗತ್ಯವಾಗುತ್ತದೆ. ಅದುದರಿಂದ ಉದಾರೀಕರಣವನ್ನು ವಿರೋಧಿಸುವ ಚಳುವಳಿಗೆ ಆದ್ಯತೆ ನೀಡುವ ಮೂಲಕ ಮಾತ್ರ ಬೆಲೆಯೇರಿಕೆ ಯನ್ನು ನಿಯಂತ್ರಿಸಬಹುದಾಗಿದೆ.

ಸಾರ್ವಜನಿಕ ಕ್ಷೇತ್ರ

ಬೆಂಗಳೂರಿನ ಐಟಿಐ (ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್), ಮೈಸೂರು ಲ್ಯಾಂಪ್ಸ್, ಹಿಂದೂಸ್ತಾನ್ ಮೆಷಿನ್ ಟೂಲ್ಸ್(ಹೆಚ್.ಎಂ.ಟಿ), ಈ. ಕಾರ್ಖಾನೆಗಳು ಕೆ.ಜಿ.ಎಫ್. ನ ಚಿನ್ನದ ಗಣಿ, ಮಂಡ್ಯದ ನ್ಯಾಷನಲ್ ಪೇಪರ್ ಮಿಲ್ ಮುಂತಾದವುಗಳನ್ನು ನಡೆಸುವುದೇ ಅಸಾಧ್ಯವೆಂಬ ಮಟ್ಟಕ್ಕೆ ಬಂದಿವೆ. ಇವನ್ನು ಒಳಗೊಂಡು ಹಲವಾರು ಕೈಗಾರಿಕೆಗಳ ಕಾರ್ಮಿಕರು ತಮ್ಮ ಸಾಮಾನ್ಯ ವರಮಾನಕ್ಕೆ ತೊಂದರೆಯಾಗಿ, ಸಂಬಳ, ಬೋನಸ್, ಇತ್ಯಾದಿಗೆ ತೊಂದರೆಯಾಗಿ ತಮ್ಮ ತಮ್ಮ ಹೋರಾಟ, ಪ್ರತಿಭಟನೆ ನಡೆಸುತ್ತಾ ಬಂದಿದ್ದಾರೆ. ಪ್ರತ್ಯೇಕವಾದಂತಹ ಈ ಹೋರಾಟಗಳ ಜೊತೆಯಲ್ಲಿ ಲಾಭಕರವಾಗಿ ನಡೆಸಬಹುದಾದ ಕೈಗಾರಿಕೆಗಳಿಗೆ ಸಾರ್ವಜನಿಕ ಹಣಕಾಸು ಸಂಸ್ಥೆಗಳ ಮೂಲಕವಾಗಲಿ, ಸರ್ಕಾರದ ನೇರವಾದ ಸಾಲದ ಮೂಲಕವಾಗಲಿ ನಡೆಸಬಹುದಾಗಿದೆ. ಲಾಭವಿಲ್ಲದ ಕೈಗಾರಿಕೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಉಳಿಸಬೇಕೆಂದು, ದಿಟ್ಟ ವೇತನ ಸರ್ಕಾರದ ಬೊಕ್ಕಸದಿಂದ ನೀಡಬೇಕೆಂದು ಕಾರ್ಮಿಕ ಸಂಘಗಳು ವಾದಿಸುತ್ತಿವೆ ಎಂಬುದು ಅಪ್ಪಟ ಸುಳ್ಳು.

ಖಾಸಗಿ ಕೈಗಾರಿಕೆಯಾಗಲಿ, ಸಾರ್ವಜನಿಕ ಕೈಗಾರಿಕೆಯಾಗಲಿ, ಸಾರ್ವಜನಿಕ ಹಣಕಾಸು ಸಂಸ್ಥೆಗಳ ಬೆಂಬಲವಿಲ್ಲದೆ ನಡೆಸಲು ಸಾಧ್ಯವಿಲ್ಲವೆಂಬುದು ಸತ್ಯ. ಹೀಗಾಗಿ ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಿಗಷ್ಟೆ ಸಾಲ ಒದಗಿಸಬಾರದೆಂಬ ಸರ್ಕಾರದ ನೀತಿ, ಸಾರ್ವಜನಿಕ ಸ್ವತ್ತನ್ನು ಖಾಸಗಿಯವರಿಗೆ ಅತ್ಯಲ್ಪ ಪರಿಹಾರದ ಹೆಸರಲ್ಲಿ ನೀಡುವುದು ಇಂದಿನ ಸಾರ್ವಜನಿಕ ಕ್ಷೇತ್ರದ ಖಾಸಗೀಕರಣದ ರೀತಿ.

ಸಾರ್ವಜನಿಕ ಕ್ಷೇತ್ರದ ಖಾಸಗೀಕರಣದ ಮತ್ತೊಂದು ಮುಖ್ಯ ಅಂಶ - ಸಾರ್ವಜನಿಕ ಅವಶ್ಯಕತೆಗಳನ್ನು ಒದಗಿಸುವ ಸಾಮಾಜಿಕ ನ್ಯಾಯವನ್ನು ಒದಗಿಸುವ ಸಂಸ್ಥೆಗಳನ್ನೇ ಗುರಿತಪ್ಪಿಸುವ ಅಥವಾ ಬುಡಮೇಲು ಮಾಡುವುದಾಗಿದೆ. ಉದಾ: ರೈತರಿಗೆ ಸಾಲ ನೀಡುವ ಸಾರ್ವಜನಿಕ ಹಣಕಾಸು ಸಂಸ್ಥೆಗಳ, ಬ್ಯಾಂಕುಗಳ ಮೇಲೆ ಉದಾರೀಕರಣದ ಬದಲಾಗಿ, ಹಾಗೆ ಸಾಲ ಒದಗಿಸದೆ ಇರುವಂತಹ ನಿಯಂತ್ರಣ ಮಾಡುವುದೆಂದು ರಾಗವಾಗಿ ಹೇಳುವ ಉದಾರೀಕರಣ.

ಡಿಸೆಂಬರ್ 11 ಮುಷ್ಕರದ ತಯಾರಿ ಮುಖ್ಯ ಹೆಜ್ಜೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ಡಿಸೆಂಬರ್ 11 ರಂದು ಆಗಬೇಕಾದ ಮುಷ್ಕರ, ರಸ್ತೆ ರೋಖೋ, ರೈಲ್ ರೋಖೋ ಚಳುವಳಿ, ಬದಲಿ ಧೋರಣೆಗಾಗಿ ಸಾಮೂಹಿಕ ಸಂಘಟನೆಗಳು ನಡೆಸುವ ಹೋರಾಟದಲ್ಲಿ ಒಂದು ಮುಖ್ಯವಾದ ಹೆಜ್ಜೆಯಾಗಬೇಕಾಗಿದೆ.

ಪ್ರತಿಯೊಂದು ಕಾರ್ಖಾನೆ, ವಿದ್ಯಾಸಂಸ್ಥೆ, ವಾಣಿಜ್ಯ ಸಂಸ್ಥೆ, ಎಲ್ಲವೂ ಅಂದು ಬಂದ್ ಆಗಬೇಕು. ಯಾವುದೇ ರಸ್ತೆಯಲ್ಲಿ, ರೈಲು ಮಾರ್ಗದಲ್ಲಿ ಆ ದಿನ ಯಾವುದೇ ವಾಹನ ಸಂಚರಿಸಬಾರದು. ಈ ಮೂಲಕ ದೇಶದ ಜನತೆಯ ಸಾರ್ವಭೌಮತ್ವವನ್ನು ಪ್ರದರ್ಶಿಸಬೇಕಾಗಿದೆ.

ತಮ್ಮ ಹೊಟ್ಟೆ ತುಂಬಿಸುವ ಆಳುವ ಪಕ್ಷಗಳ ರಾಜಕಾರಣಗಳ ಆಟವನ್ನು ಬಯಲುಗೊಳಿಸಬೇಕಾಗಿದೆ. ಜನಹಿತ ಕಾಪಾಡುವ ಎಡ ಮತ್ತು ಪ್ರಜಾಸತ್ತಾತ್ಮಕ ರಾಜಕೀಯ ಬದಲಿಯನ್ನು ಹುಟ್ಟಿಸಬೇಕಿದೆ. ಕರ್ನಾಟಕದ ಜನತೆ ಈ ಹೋರಾಟದಲ್ಲಿ ಮುಂದಾದಾಗ ಅವರು ಎದುರಿಸುವ ಸಮಸ್ಯೆ ಸಂಕಷ್ಟ ಮರೆಯುವಂತಿಲ್ಲ.

ಬೆಂಬಲಿತ ಬೆಲೆ ಕೇಳುವ ರೈತರ ಮೇಲೆ ಆದ ಗೋಲಿಬಾರ್, ತಪ್ಪು ನೀರಾವರಿ ಧೋರಣೆಯಿಂದ ಕೃಷಿ ನಾಶವಾದವರು ಪರಿಹಾರ ಕೇಳಿದಾಗ ನಡೆಸಿದ ಗೋಲಿಬಾರ್, ತಮ್ಮ ಜೀವನದ ಅವಶ್ಯಕ ವೇತನಕ್ಕೆ ಮತ್ತು ಸಂಘ ಸೇರುವ ಹಕ್ಕಿಗಾಗಿ ಹೋರಾಡುವ ಕಾರ್ಮಿಕರ ಮೇಲೆ ಗೋಲಿಬಾರ್, ನಿಷೇಧಾಜ್ಞೆ, ಕೆಲಸಕ್ಕೆ ಹೋಗುವ ಕಾರ್ಮಿಕರನ್ನು ಬಂಡವಾಳದಾರರ ಸಹಾಯಾರ್ಥ ಲಾಠಿ ಪ್ರಹಾರದ ಮೂಲಕ ಓಡಿಸುವಂತದ್ದು, ಕನಿಷ್ಟ ನೆರೆ ಪರಿಹಾರದ ಚೆಕ್ಕುಗಳು ತಿರಸ್ಕೃತವಾಗುವುದು, ಯೋಜನಾ ಬದ್ಧವಾದ ಯಾವುದೇ ಕೆಲಸಗಳು ನಡೆಯದಿರುವುದನ್ನು ಇಂದು ಜನ ಪ್ರಶ್ನಿಸಲೇಬೇಕಾಗಿದೆ.

ಕೋಮುವಾದಿ ಶಕ್ತಿಗಳು ಈ ಪ್ರಶ್ನೆಗಳನ್ನು ದುರುಪಯೋಗ ಮಾಡದಿರಬೇಕಾದರೆ, ಎಡಶಕ್ತಿಗಳು ಬದಲಿಯಾಗಿ ಮುಂದೆ ಬರಬೇಕಾಗಿದೆ. ಎಲ್ಲಾ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಇರುವ ಸಮಿತಿಗಳನ್ನು ರಚಿಸಿಕೊಂಡು ಕೈಗಾರಿಕೆ, ವಿದ್ಯಾಸಂಸ್ಥೆ, ವಾಣಿಜ್ಯ ಸಂಸ್ಥೆ, ವಿವಿಧ ಪ್ರದೇಶಗಳು ಹೋರಾಟಕ್ಕಿಳಿದರೆ ಮಾತ್ರ ಡಿಸೆಂಬರ್ 11 ರಂದು ಭ್ರಷ್ಟ ಆಳುವ ವರ್ಗದ ರಾಜಕಾರಣಿಗಳಿಗೆ ಜನತೆಯು ಸಾರ್ವಭೌಮರೆಂದು ತೋರಿಸುವುದು ಸಾಧ್ಯ.

ಈ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕಾದವರನ್ನು ಒಟ್ಟುಗೂಡಿಸುವುದೇ ನವೆಂಬರ್ 16 ರ ಗುರಿಯಾಗಿದೆ. ಆದ್ದರಿಂದ ಎಲ್ಲಾ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಪರಿಹಾರದ ಹೋರಾಟ ದಾಟಿ ಮೊದಲು ನವೆಂಬರ್ 16 ರಂದು ಬೆಂಗಳೂರು ಚಲೋ ಯಶಸ್ವಿಗೊಳಿಸಬೇಕಾಗಿದೆ. ನವೆಂಬರ್ 16 ರ ಬೆಂಗಳೂರು ಚಲೋ ಯಶಸ್ವಿಯಾದರೆ ಡಿಸೆಂಬರ್ 11 ರ ಮುಷ್ಕರ ಮತ್ತು ಬಂದ್ ಪ್ರಚಂಡ ಯಶಸ್ವಿಯಾಗುವುದು ಖಚಿತ. ಹಾಗೆಯೇ ಇವೆರಡು ಯಶಸ್ವಿಯಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಿ ಬದಲಿ ಧೋರಣೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ○

ಗುಲ್ಬರ್ಗದಲ್ಲಿ ಪ್ರತಿಮೆವಿವಾದ: ಕೋಮುವಾದಿಗಳ ಬಣ್ಣ ಬಯಲು

ಮಾರುತಿ ಮಾನ್ಪಡೆ

ಇಡೀ ದೇಶದಲ್ಲಿ ಕೋಮು ಆರೋಗ್ಯವನ್ನು ಕೆಡಿಸುವುದರಲ್ಲಿ ಸದಾ ನಿರತವಾಗಿರುವ ಸಂಘ ಪರಿವಾರದ ಬಣ್ಣವನ್ನು ಕಲ್ಬುರ್ಗಿಯಲ್ಲಿ ಬಯಲು ಮಾಡಲಾಗಿದೆ. ಪ್ರತೀ ರಾಜ್ಯ ಪ್ರತೀ ಊರಿನಲ್ಲಿ ಒಂದು ಕೋಮು ಸಮಸ್ಯೆಯನ್ನು ಸೃಷ್ಟಿಸಿ ಅದರ ಮೂಲಕ ಸಮಾಜದ ನೆಮ್ಮದಿಯನ್ನು ಹಾಳುಮಾಡಿ ರಾಜಕೀಯ ಲಾಭ ಪಡೆಯುವ ಕೋಮುವಾದಿಗಳನ್ನು ಗುಲ್ಬರ್ಗದಲ್ಲಿ ಯುಶಸ್ವಿಯಾಗಿ ಬಯಲು ಮಾಡಲಾಯಿತು.

ಹೈದ್ರಾಬಾದ್ ಸಂಸ್ಥಾನ ಸ್ವತಂತ್ರ ಭಾರತ ದೊಡನೆ ವಿಲೀನವಾಗಿದ್ದು 13 ತಿಂಗಳು ತಡವಾಗಿ. ಸ್ವತಂತ್ರ ಭಾರತದೊಡನೆ ವಿಲೀನಗೊಳ್ಳಲು ನಿರಾಕರಿಸಿದ ಹೈದ್ರಾಬಾದಿನ ನಿಜಾಮ ನಿರಾಕರಿಸಿದ ನಂತರ ಸೇನಾ ಕಾರ್ಯಾಚರಣೆ ನಡೆಸಿ ಅದನ್ನು ವಶಪಡಿಸಿಕೊಳ್ಳಲಾಯಿತು. ಇದನ್ನು ಈಗ ಬಿಜೆಪಿ ತನ್ನ ರಾಜಕೀಯ ದಾಳವನ್ನಾಗಿ ಮಾಡಿಕೊಂಡಿದೆ.

ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗ ರಾಯಚೂರುಗಳಲ್ಲಿ ವ್ಯಾಪಕವಾಗಿರುವ ಪ್ರಾದೇಶಿಕ ಅಸಮತೋಲನ ಭಾವನೆಯ ಮೇಲೆ ಚೆಲ್ಲಾಟ ನಡೆಸಿರುವ ಬಿಜೆಪಿ ಇದನ್ನೇ ಬಂಡವಾಳವಾಗಿಕೊಂಡು ಹಿಂದೂ ಮುಸ್ಲಿಮರ ನಡುವೆ ದ್ವೇಷವನ್ನು ಹುಟ್ಟು ಹಾಕುವ ಗುಪ್ತ ಅಜೆಂಡಾವನ್ನು ತಯಾರಿಸಿತು.

ಯಾವ ಆರ್‌ಎಸ್‌ಎಸ್ ಹಿಂದೂ ರಾಜರುಗಳು ಎಲ್ಲೆಲ್ಲಿ ಸ್ವತಂತ್ರ ಭಾರತ ದೊಡನೆ ವಿಲೀನಗೊಳ್ಳಲು ನಿರಾಕರಿಸುತ್ತಿದ್ದಾಗ ಅಲ್ಲಿ ಅವರಿಗೆ ಕುಮ್ಮಕ್ಕು ನೀಡಿತ್ತೋ ಅದೇ ಆರ್‌ಎಸ್‌ಎಸ್ ಈಗ ಹೈದ್ರಾಬಾದ್ ಸಂಸ್ಥಾನ ಮುಸ್ಲಿಮರ ಆಡಳಿತದಲ್ಲಿತ್ತು ಎಂಬ ಕಾರಣಕ್ಕೆ ಇದನ್ನು ಕೋಮುವಾದಿ ಅಜೆಂಡಾವಾಗಿ ಬಳಸಲು ಯೋಚಿಸಿತು.

ಈ ಹಿನ್ನೆಲೆಯಲ್ಲಿ ಬಿಜೆಪಿಗಳ ಕೈಗೊಂಬೆಯಾಗಿರುವ ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣಾ ಸಮಿತಿ ಹೆಸರಿನಲ್ಲಿ ಈ ಕೋಮುವಿಷವನ್ನು ಹರಿಯಬಿಟ್ಟಿತು. ಸೇನಾ ಕಾರ್ಯಾಚರಣೆಗೆ ಆಜ್ಞೆ ಮಾಡಿದ್ದ, ಆಗ ಕೇಂದ್ರ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಪ್ರತಿಮೆ ಸ್ಥಾಪಿಸಲು ಈ ಸಮಿತಿ ಮುಂದಾಯಿತು. ಬೆರಳೆಣಿಕೆಯ ಮುಸ್ಲಿಂ ನಾಯಕರು ಇದು ಕರಾಳ ನೆನಪನ್ನು ಕೊಡುತ್ತದೆ ಎಂದು ಹೇಳಿಕೆ ನೀಡಿದ್ದೇ ತಡ ಇಡೀ ಪ್ರಕರಣವನ್ನು ಹಿಂದೂ-ಮುಸ್ಲಿಂ ವಿವಾದವಾಗಿ ಸೃಷ್ಟಿಸಲಾಯಿತು.

ರಾಜ್ಯದಲ್ಲಿ ಆಡಳಿತ ಎಂಬುದು ಹಿಂದೆ ಸರಿಯುತ್ತಿರುವಾಗ ಜೆ.ಎಚ್. ಪಟೇಲರ ಸರ್ಕಾರ ಬಿಜೆಪಿಯ ಗುಪ್ತ ರಾಜಕೀಯವನ್ನು ತಿಳಿದುಕೊಳ್ಳದೆ ತನ್ನ ಒಳಗುಂಪುಗಳ ಒತ್ತಡಕ್ಕೆ ಮಣಿದು ಕೇಂದ್ರ ಗೃಹ ಸಚಿವ ಕೋಮುವಾದಿ ಎಲ್.ಕೆ. ಅಡ್ವಾಣಿ ಅವರನ್ನು ಪ್ರತಿಮೆ ಅನಾವರಣ ಮಾಡಲು ಆಹ್ವಾನ ನೀಡಿಯೇ ಬಿಟ್ಟಿತು.

ವಿವಾದ ಆರಂಭವಾದದ್ದು ಇಲ್ಲಿಂದ. ಗುಲ್ಬರ್ಗ, ಕೋಮು ಸೌಹಾರ್ದದ ನೆಲೆ. ಹಿಂದೂ ಗುರು ಮುಸ್ಲಿಂ ಶಿಷ್ಯ, ಮುಸ್ಲಿಂ ಗುರು ಹಿಂದೂ ಶಿಷ್ಯನನ್ನು ಹೊಂದಿದ ಎಷ್ಟೋ ಸೂಫಿ ಸಂತರು ಈ ಪ್ರದೇಶದಲ್ಲಿ ಆಗಿಹೋಗಿದ್ದಾರೆ. ಶರಣರು ಮಾನವ ಪ್ರೀತಿಯನ್ನು ಬೋಧಿಸಿದ್ದಾರೆ. ಕಲ್ಬುರ್ಗಿ ಜಿಲ್ಲೆಯಲ್ಲಿ ಇಂದಿಗೂ ಶರಣ ಬಸವೇಶ್ವರನಿಗೆ ಖ್ವಾಜಾ ಬಂದೇ ನವಾಜ್‌ರಿಗೆ ನಮಸ್ಕಾರ ಹೇಳುವ ಸಂಸ್ಕೃತಿ ಇದೆ.

ಇಂತಹ ಕೋಮು ಸಾಮರಸ್ಯದ ಪ್ರದೇಶದಲ್ಲಿ ಬಾಬರಿ ಮಸೀದಿ ಉರುಳಿಸಲು ಕಾರಣನಾದ ಒಬ್ಬ ಕೋಮುವಾದಿಯಿಂದ ಪ್ರತಿಮೆ ಅನಾವರಣಗೊಳ್ಳಬಾರದು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಿರ್ಧಾರ ತಳೆಯಿತು. ಹೈದರಾಬಾದ್ ವಿಮೋಚನಾ ದಿನಾಚರಣಾ ಸಮಿತಿ ಒಳಗೊಳಗೇ ಕೋಮು ರಾಜಕೀಯ ನಡೆಸುತ್ತಿದ್ದಾಗ ಅದನ್ನು ಮೊತ್ತ ಮೊದಲ ಬಾರಿಗೆ ಸಿಪಿಎಂ ಹೊರಗೆಳೆಯಿತು. ಕೋಮು ರಾಜಕಾರಣ ಹೇಗೆ ನಡೆಯುತ್ತಿದೆ ಎಂಬುದನ್ನು ಸಮರ್ಥವಾಗಿ ಮನವರಿಕೆ ಮಾಡಿಕೊಟ್ಟಿತು.

ಇಲ್ಲಿಂದ ಪ್ರತಿಭಟನೆಗಳ ಸರಮಾಲೆಯೇ ಆರಂಭವಾಯಿತು. ಕಕ್ಕಾವಿಕ್ಕಿಯಾದ ಸಂಘಪರಿವಾರ ಸರ್ಕಾರದ ಮೊರೆ ಹೋಯಿತು. ಪಟೇಲರ ನಿಷ್ಕ್ರಿಯ ಸರ್ಕಾರ ಆಲೋಚನೆ ಮಾಡುವುದನ್ನು ನಿಲ್ಲಿಸಿರುವುದ ರಿಂದ ಮತ್ತೆ ಅಡ್ವಾಣಿ ಬಂಧುಗಳಿಗೆ ಶರಣಾಯಿತು. ಸಿಪಿಎಂ ಅಡ್ವಾಣಿಯವರನ್ನು ಗುಲ್ಬರ್ಗದಲ್ಲಿ ಅನಾವರಣಕ್ಕೆ ಆಹ್ವಾನಿಸಬಾರದು ಎಂದು ಹೇಳಿ ಧರಣಿಯನ್ನು ನಡೆಸಿತು.

ಇಡೀ ವಿವಾದದ ಮಧ್ಯೆ ಮೂಗು ತೂರಿಸಿದ ರಾಜ್ಯ ಸರ್ಕಾರ ಇದನ್ನು ಮತ್ತಷ್ಟು ಕಗ್ಗಂಟಾಗಿಸಿ ನಂತರ ಅವರದೇ ಕೈಗೊಂಬೆ ಯಾಗಿ ಮತ್ತೆ ಅಡ್ವಾಣಿಯವರನ್ನು ಆಹ್ವಾನಿಸಿ ಪ್ರತಿಮೆ ಅನಾವರಣ ಮಾಡಿಸಿದೆ. ಇದು ಸಂಘಪರಿವಾರದ ಗುಪ್ತ ಅಜೆಂಡಾಗಳ ವಿಷದ ಒಂದು

ಪುಟ 8 ಕ್ಕೆ



'ಅಡ್ವಾಣಿ ಹಿಂದಕ್ಕೆ ತೊಲಗು'

ಗುಲ್ಬರ್ಗದ ತಿಮ್ಮಾಪುರಿ ಚೌಕದಲ್ಲಿ ಸಂಘ ಪರಿವಾರದ ವಂದೇ ಮಾತರಂ ಘೋಷಣೆಯ ನಡುವೆ ಸರ್ದಾರ್ ವಲ್ಲಭಬಾಯಿ ಪಟೇಲರ ಪ್ರತಿಮೆಯನ್ನು ಅನಾವರಣಗೊಳಿಸಿ ಹೆಮ್ಮೆಯಿಂದ ಚಂದ್ರಶೇಖರ ಪಾಟೀಲ ಕ್ರೀಡಾಂಗಣಕ್ಕೆ ಆಗಮಿಸಿದ ಅಡ್ವಾಣಿ ಭಾಷಣ ಮಾಡಲು ಎದ್ದೇಳುತ್ತಿದ್ದಂತೆಯೇ ಕರಪತ್ರಗಳು ತೂರಿಬಂದವು, ಕಪ್ಪು ಬಾವುಟಗಳು ಹಾರಲಾರಂಭಿಸಿದವು.

'ಬಾಬರಿ ಮಸೀದಿ ಉರುಳಿಸಿದ ಅಡ್ವಾಣಿಗೆ ಧಿಕ್ಕಾರ', 'ಅಡ್ವಾಣಿ ಗುಲ್ಬರ್ಗಾದಿಂದ ತೊಲಗು' ಎಂಬ ಘೋಷಣೆಗಳು ಮೊಳಗಿದವು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಆರಂಭದಿಂದಲೂ ಅಡ್ವಾಣಿ ಪ್ರತಿಮೆ ಅನಾವರಣ ಮಾಡಬಾರದು ಎಂಬ ಹೇಳಿಕೆಯಿತ್ತಿದ್ದರಿಂದ ಜಿಲ್ಲಾ ಪೊಲೀಸರು ಬಿಗಿ ಭದ್ರತೆ ನಡೆಸಿದರು. ನಾನಾ ಜಿಲ್ಲೆಗಳಿಂದ ಇನ್ನಿಲ್ಲದಷ್ಟು ಪೊಲೀಸು ಪಡೆ ಆಗಮಿಸಿತ್ತು. ಆದರೆ ಇದೆಲ್ಲವನ್ನು ಮೀರಿ ಅಡ್ವಾಣಿಯ ಕೋಮುವಾದಿ ಮುಖವನ್ನು ಬಯಲಿಗೆಳೆಯಲೇಬೇಕೆಂದು ಪಣ ತೊಟ್ಟ ಸಿಪಿಎಂ ಕಾರ್ಯಕರ್ತರು ಮಿಂಚಿನಂತೆ ಸ್ಟೇಡಿಯಂನಲ್ಲಿ ಒಂದುಗೂಡಿ ಪ್ರತಿಭಟನೆ ನಡೆಸಿದರು.

ಇಡೀ ಕ್ರೀಡಾಂಗಣ ಒಂದು ಕ್ಷಣ ಅವಾಕ್ಕಾಯಿತು. ಅಡ್ವಾಣಿ, ಉಪಮುಖ್ಯಮಂತ್ರಿ ಸಿದ್ಧರಾಮಯ್ಯ, ಸಂಘ ಪರಿವಾರದ ಗುಂಪುಗಳೂ ಸೇರಿದಂತೆ ಎಲ್ಲರೂ ಬೆರಗಾದರು. 'ಅಡ್ವಾಣಿ ಆಗಮನಕ್ಕೆ ವಿರೋಧ ಏಕೆ?' ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಕರಪತ್ರಗಳು ಚಿಮ್ಮಿದವು. ಪೊಲೀಸರ ಕಣ್ತಪ್ಪಿಸಿ ತಂದಿದ್ದ ಕಪ್ಪು ಬಾವುಟಗಳು ಹಾರಲಾರಂಭಿಸಿದವು.

ಅಡ್ವಾಣಿ ಅಲ್ಲಾಡಿಹೋದರು. ಯಾವ ಪ್ರತಿಭಟನೆಯನ್ನೂ ನಿರೀಕ್ಷಿಸದಿದ್ದ ಅಡ್ವಾಣಿ ವಿಚಲಿತರಾದದ್ದು ಇಡೀ ಸಭೆಗೆ ಗೊತ್ತಾಗಿ ಹೋಯಿತು.

ಪೊಲೀಸರು ಸಿಪಿಎಂ ಕಾರ್ಯಕರ್ತರ ಮೇಲೆ ಲಾಠಿಪ್ರಹಾರ ನಡೆಸಿದರು.

ಪುಟ 8 ಕ್ಕೆ

ಮಮತಾ ರಾಜೀನಾಮೆ: ಬಿಜೆಪಿ ಕೂಟಕ್ಕೆ ಮುಖಭಂಗ

ಅಗತ್ಯ ವಸ್ತುಗಳ ಬೆಲೆ ವಿಪರೀತ ಹೆಚ್ಚುತ್ತಿರುವುದನ್ನು ಪ್ರತಿಭಟಿಸಿ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಭಾರತೀಯ ಜನತಾ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳ ಸಮನ್ವಯ ಸಮಿತಿಗೆ ನವೆಂಬರ್ 3 ರಂದು ರಾಜಿನಾಮೆ ನೀಡಿದ್ದಾರೆ. ಮಮತಾ ಬ್ಯಾನರ್ಜಿ ರಾಜಿನಾಮೆ ದೇಶವನ್ನಾಳುತ್ತಿರುವ ಬಿಜೆಪಿ ಮಿತ್ರಕೂಟದ ಅಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಸ್ಥಿರ ಹಾಗೂ ದಕ್ಷ ಸರಕಾರ ಕೊಡುವ ಬಿಜೆಪಿ ಘೋಷಣೆ ಬರೀ ಬೊಗಳೆ ಎನ್ನುವುದು ಇನ್ನೊಮ್ಮೆ ಸಾಬೀತಾಗಿದೆ.

ಬೆಲೆಯೇರಿಕೆ ನಿಯಂತ್ರಿಸಲು ಅಸಫಲವಾದ ಸರಕಾರದ ಕ್ರಮಕ್ಕೆ ಪ್ರತಿಭಟನೆಯಾಗಿ ಸ್ವತಹ ಆಳುವ ಕೂಟದ ಒಬ್ಬ ನಾಯಕಿಯೇ ರಾಜಿನಾಮೆ ಕೊಟ್ಟಿರುವುದು ಸರಕಾರಕ್ಕೆ ದೊಡ್ಡ ಹೊಡೆತವಾಗಿದೆ.

ರಾಜೀನಾಮೆ ಬಗ್ಗೆ ಒತ್ತಡ ಹೇರದಿರುವಂತೆ ಮಮತಾ ಅವರಿಗೆ ಮನವರಿಕೆ ಮಾಡಿಕೊಡಲು ಪ್ರಧಾನಿ ವಾಜಪೇಯಿ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರನ್ನು ಕಲ್ಕತ್ತಾಕ್ಕೆ ಧಾವಿಸುವಂತೆ ಸೂಚಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ ಕಲ್ಕತ್ತದಿಂದ ನವದೆಹಲಿಗೆ ಹೊರಟ ತೃಣಮೂಲ ಕಾಂಗ್ರೆಸ್‌ನ ನಿಯೋಗದ ಜೊತೆ ಮಮತಾ ತಮ್ಮ ರಾಜೀನಾಮೆ ಪತ್ರವನ್ನು ಸಮಿತಿಯ ಅಧ್ಯಕ್ಷರಾಗಿರುವ ಪ್ರಧಾನಿ ವಾಜಪೇಯಿಗೆ ಕಳುಹಿಸಿಕೊಟ್ಟಿದ್ದಾರೆ.

ಸಭೆಗೆ ಸಮಯ ಸಿಕ್ಕಿಲ್ಲ! ಬೆಲೆ ಏರಿಕೆಯ ನಿಯಂತ್ರಣಕ್ಕೆ ಮುಖ್ಯಮಂತ್ರಿಗಳ ಸಭೆ ಕರೆಯುವಂತೆ ಕೇಂದ್ರ ಸರಕಾರವನ್ನು ಪದೇ ಪದೇ ಕೇಳಿಕೊಂಡರೂ ವಾಜಪೇಯಿ ಸರಕಾರಕ್ಕೆ ಅದಕ್ಕೆ ಸಮಯವೇ ಸಿಕ್ಕಿಲ್ಲ. ಈ ಮಧ್ಯೆ ಬೆಲೆಗಳು ವಿಪರೀತ ಏರುತ್ತಿವೆ. ಎಂದು ಮಮತಾ ಆರೋಪಿಸಿದರು. ಕೇಂದ್ರ ಸರಕಾರ ಯಾವತ್ತೂ ದಕ್ಷ, ಸಮರ್ಪಕ ಮತ್ತು ಸಕಾರಾತ್ಮಕ ನಿಲುವು ಹೊಂದಿರಬೇಕು. ಅಗತ್ಯ ಸಾಮಗ್ರಿಗಳ ಕಾಯ್ದೆ ಅಡಿಯಲ್ಲಿ ಕಾಳಸಂತೆ ಮತ್ತು ಲಾಭಕೋರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅದು ರಾಜ್ಯ ಸರಕಾರಗಳಿಗೆ ಸೂಚಿಸಬೇಕು ಎಂದು ಮಮತಾ ಹೇಳಿದ್ದಾರೆ.

ಸಮಿತಿಗೆ ಮತ್ತೆ ಸೇರುವಂತೆ ಬಿಜೆಪಿ ತಮ್ಮನ್ನು ಒತ್ತಾಯಿಸಿದರೂ ತಾವು ರಾಜೀನಾಮೆಯನ್ನು ಹಿಂದೆ ಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಸರಕಾರದ ಪ್ರತಿಷ್ಠೆಗೆ ಧಕ್ಕೆ ತರುವಂಥ, ಮಮತಾ ರಾಜಿನಾಮೆಯಿಂದ ಅವಾಕ್ಕಾಗಿರುವ ಪ್ರಧಾನಿ, ರಕ್ಷಣಾ ಮಂತ್ರಿ ಫರ್ನಾಂಡಿಸರನ್ನು ಸಂಧಾನಕ್ಕಾಗಿ ಕಳಿಸಿದ್ದಾರೆ. ಕೇಂದ್ರ ಸರಕಾರಕ್ಕೆ ನೀಡಿರುವ ಬೆಂಬಲದ ಮರು ವಿಮರ್ಶೆ ಬಗ್ಗೆ ಅಣ್ಣಾ ಡಿ.ಎಂ.ಕೆ. ನಾಯಕಿ ಜಯಲಲಿತಾ ಬೆದರಿಕೆ ಹಾಕಿದಾಗಲೆಲ್ಲಾ ಅವರನ್ನು ಸಮಾಧಾನಪಡಿಸಲೂ ಫರ್ನಾಂಡಿಸ್ ಅವರೇ ಹಲವು ಬಾರಿ ಚೆನ್ನೈಗೆ ಹೋಗಿದ್ದರು. ಇದನ್ನೆಲ್ಲ ನೋಡುವಾಗ, ಇವರು ದೇಶದ ರಕ್ಷಣಾಮಂತ್ರಿಯೋ ಬಿಜೆಪಿ ನೇತೃತ್ವದ ಸರಕಾರದ ರಕ್ಷಣೆ ಸಚಿವರೋ ಎನ್ನುವ ಅನುಮಾನ ಕಾಡುತ್ತದೆ.

ಸಿಮೆಂಟ್ ಮಾಫಿಯಾ ಒತ್ತಡಕ್ಕೆ ಬಲಿ

ಬಿಜೆಪಿಯ ಪ್ರೇಮ ಕುಮಾರ್ ಧುಮಾಲ್ ನೇತೃತ್ವದ ಸರಕಾರ ಸಿಮೆಂಟ್ ಮಾಫಿಯಾದ ಒತ್ತಡಕ್ಕೆ ಶರಣಾಗುತ್ತಿದೆ ಎಂದು ಎಚ್.ವಿ.ಸಿ. ಅಧ್ಯಕ್ಷ ಸುಖರಾಂ ಆರೋಪಿಸಿದ್ದಾರೆ. ರಾಜ್ಯದಲ್ಲಿ ಸಿಮೆಂಟ್ ಸ್ಥಾವರಗಳ ಸ್ಥಾಪನೆಗೆ ಅವರು ವಿರೋಧ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಎರಡು ಕಡೆ ಖಾಸಗಿಯವರು ತಲಾ 500 ಕೋಟಿ ರೂಪಾಯಿ ವೆಚ್ಚದಲ್ಲಿ ಸಿಮೆಂಟ್ ಸ್ಥಾವರಗಳನ್ನು ಸ್ಥಾಪಿಸುವ ಯೋಜನೆಗಳಿಗೆ ದುಮಾಲ್ ಸರಕಾರ ಮಂಜೂರಾತಿ ನೀಡಿದೆ.

ಸಿಮೆಂಟ್ ಸ್ಥಾವರಗಳ ಸ್ಥಾಪನೆಯಿಂದ ರಾಜ್ಯದ ಸೂಕ್ಷ್ಮ ಅಂತಕತೆ ಹಾಳಾಗುತ್ತದೆ. ಪರಿಸರಮಾಲಿನ್ಯವೂ ಉಂಟಾಗುತ್ತದೆ ಎಂದು ಸುಖರಾಂ ಹೇಳಿದ್ದಾರೆ.

ಸ್ಥಾವರಗಳ ಸ್ಥಾಪನೆಯ ನಿರ್ಧಾರಕ್ಕೆ ಎಚ್.ವಿ.ಸಿ ಕೂಡ ಸಮ್ಮತಿಸಿದೆ ಎಂದು ಮುಖ್ಯಮಂತ್ರಿ ಮತ್ತು ರಾಜ್ಯದ ಕೈಗಾರಿಕೆ ಮಂತ್ರಿ ಹೇಳಿರುವುದಕ್ಕೆ ಸುಖರಾಂ ಭಾರೀ ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಮಗೂ ಈ ನಿರ್ಧರಕ್ಕೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ.

ಸಿಮೆಂಟ್ ಸ್ಥಾವರಗಳ ಸ್ಥಾಪನೆಯಿಂದ ಪರಿಸರ ಮಾಲಿನ್ಯ ಉಂಟಾಗಿ ಪ್ರವಾಸೋದ್ಯಮಕ್ಕೆ ಹಾನಿಯಾಗುತ್ತದೆ ಎಂಬ ಸುಖರಾಮರ ವಾದವನ್ನು ಪೂರ್ಣವಾಗಿ ಬೆಂಬಲಿಸಲು ಸಾಧ್ಯವಾಗಲಾರದು. ಆದರೆ ಒಂದು ಸರಕಾರ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದನ್ನು ಮಾತ್ರ ಈ ಪ್ರಕರಣದಿಂದ ಖಂಡಿತವಾಗಿಯೂ ತಿಳಿಯಬಹುದು. ಹಿಮಾಚಲ ಪ್ರದೇಶ ಸರಕಾರದ ಜುಟ್ಟು ವಾಸ್ತವವಾಗಿ ಸುಖರಾಮರ ಕೈಯಲ್ಲಿದೆ. ಮುಖ್ಯ ಮಿತ್ರ ಪಕ್ಷದ ಸಲಹೆಯನ್ನು ತಿರಸ್ಕರಿಸಿ ಬಿಜೆಪಿ ನಡೆದುಕೊಳ್ಳುವ ಧೋರಣೆಗೆ ಇದು ಸಾಕ್ಷಿಯಾಗಿದೆ.

ಬೆದರಿಕೆ

ಈ ನಡುವೆ, ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್‌ರ ವಿರುದ್ಧ ನವೆಂಬರ್ 5 ರೊಳಗೆ ಎಫ್.ಐ.ಆರ್ ದಾಖಲಿಸಲು ಸಿಬಿಐ ವಿಫಲವಾದರೆ ಧುಮಾಲ್ ಮಂತ್ರಿಮಂಡಲದಿಂದ ತಮ್ಮ ಪಕ್ಷದ ಸಚಿವರನ್ನು ವಾಪಸು ಕರೆಸಿಕೊಳ್ಳುವುದಾಗಿ ಎಚ್.ವಿ.ಸಿ. ನಾಯಕ ಸುಖರಾಂ ಬೆದರಿಕೆ ಹಾಕಿದ್ದಾರೆ.

ಎಚ್.ವಿ.ಸಿ. ಮಂತ್ರಿಗಳು ಮಾತ್ರವೇ ಅಲ್ಲದೆ ಈಚೆಗೆ ಬಿಜೆಪಿ ಸೇರಿದ ಇಬ್ಬರು ಎಚ್.ವಿ.ಸಿ. ಸಚಿವರು ಮತು ವಿವಿಧ ನಿಗಮಗಳ ಅಧ್ಯಕ್ಷರಾಗಿರುವ ಎಚ್.ವಿ.ಸಿ. ಮುಖಂಡರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಲಿದ್ದಾರೆ ಎಂದು ಸುಖರಾಂ ತಿಳಿಸಿದ್ದಾರೆ. ಬೈಜನಾಥ ಕ್ಷೇತ್ರದಲ್ಲಿ ಬಿಜೆಪಿಯೇತರ ಅಭ್ಯರ್ಥಿಯನ್ನು ಎಚ್.ವಿ.ಸಿ. ಬೆಂಬಲಿಸುವ ಸಾಧ್ಯತೆಯನ್ನು ತಳ್ಳಿ ಹಾಕಲು ಅಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಈರುಳ್ಳಿ ನಂತರ ಉಪ್ಪಿನ ಸರದಿ...

ಈರುಳ್ಳಿ ಬೆಲೆ ಇಳಿಯದೆ ಗ್ರಾಹಕರ ಕಣ್ಣೀರು ಇಳಿಯುವ ಪ್ರವೃತ್ತಿ ಇನ್ನೂ ಮುಂದುವರಿದಿರುವಾಗಲೇ ಇದೀಗ ಉಪ್ಪಿಗಾಗಿ ಕೆಲವು ರಾಜ್ಯಗಳಲ್ಲಿ ಜನರು ಪರದಾಡಲು ಆರಂಭಿಸಿದ್ದಾರೆ. ಮುಖ್ಯವಾಗಿ ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ ಮತ್ತು ದೆಹಲಿ, ಹಾಗೂ ಬಿಹಾರದಲ್ಲಿ ಈ ಪರಿಸ್ಥಿತಿ ಉಂಟಾಗಿದೆ. ನವಂಬರ್ ಒಂದರ ಭಾನವಾರ. ರಾಜಧಾನಿ ದೆಹಲಿಯಲ್ಲಿ ಉಪ್ಪಿಗಾಗಿ ಹಾಹಾಕಾರ, ಮುತ್ತಿಗೆ ಬೆಳಗಾಗುತ್ತಲೇ ಜನ ಹಿಂಡು ಹಿಂಡಾಗಿ ಬಂದು ಉಪ್ಪು ಖರೀದಿಸಿದರು. ಅಂಗಡಿಗಳಲ್ಲಿ ಇದ್ದ ಬದ್ದ ಉಪ್ಪಿನ ಸಂಗ್ರಹವೆಲ್ಲಾ ಇದ್ದಕ್ಕಿದ್ದಂತೆ ಬರಿದಾಗಿ ಹೋಯಿತು. ಉಪ್ಪಿಗೆ ತೀವ್ರ ಕೊರತೆ ಉಂಟಾಗಿದೆ. ಅದರ ಬೆಲೆ ಏರಲಿದೆ ಎಂಬ ಭಯವೇ ಈ ರೀತಿಯ ಹಠಾತ್ ಖರೀದಿಯ ಹಿಂದಿನ ಕಾರಣವಾಗಿದೆ.

ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಉಪ್ಪಿಗೆ ತೀವ್ರ ಬಿಕ್ಕಟ್ಟು ಉಂಟಾಗಿ ಕೆಜಿಯೊಂದಕ್ಕೆ 60 ರೂಪಾಯಿ ದರದಲ್ಲಿ ಮಾರಾಟವಾಯಿತು ಎಂಬ ಸುದ್ದಿಯಿಂದ ಆತಂಕಿತರಾಗಿ ದೆಹಲಿಯಲ್ಲೂ ಈ ರೀತಿ ಖರೀದಿಗೆ ಜನರು ಮುಗಿಬಿದ್ದರು ಎನ್ನಲಾಗಿದೆ.

ಬಿಜೆಪಿಯ ವೃಥಾಲಾಪ

ದೆಹಲಿಯಲ್ಲಿ ವಿಧಾನಸಭೆ ಚುನಾವಣೆ ಹತ್ತಿರ ಬಂದಿರುವುದರಿಂದ ಬಿಜೆಪಿಯ ವರ್ಚಸ್ಸಿಗೆ ಮಸಿ ಬಳಿಯಲು ಪಟ್ಟಭದ್ರ ಹಿತಾಸಕ್ತಿಗಳು ಹೂಡಿದ ತಂತ್ರವಿದು ಎಂದು ಜನರು ಮುಗಿಬಿದ್ದು ಹೆಚ್ಚು ಬೆಲೆಗೆ ಉಪ್ಪು ಖರೀದಿಸಿದ್ದಕ್ಕೆ ದೆಹಲಿಯ ಮುಖ್ಯಮಂತ್ರಿ ಸುಷ್ಮಾ ಸ್ವರಾಜ್ ಅವರ ವಾದ.

ಆದರೆ, ಬಿಜೆಪಿ ಅಧಿಕಾರದಲ್ಲಿ ಇರುವುದರಿಂದಲೇ ವ್ಯಾಪಾರಿಗಳು, ಕಾಳಾಸಂತೆಕೋರರು ಧೈರ್ಯದಿಂದ ಇಂಥ ಪ್ರವೃತ್ತಿಯಲ್ಲಿ ತೊಡಗಿದ್ದಾರೆ ಎನ್ನುವುದು ವಾಸ್ತವ ವಿಚಾರವಾಗಿದೆ.

ಬಿಜೆಪಿ ಅಧಿಕಾರದಲ್ಲಿ ಇದುವರೆಗೆ ಬೆಲೆಯೇರಿಕೆ ಇದ್ದದ್ದೇ ಎಂದು ಪಶ್ಚಿಮಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು ಮಾಡಿರುವ ವಿಶ್ಲೇಷಣೆ ಸರಿಯಾಗಿಯೇ ಇದೆ.

ಇಂಥ ಸರಕಾರದಿಂದ ಏನನ್ನುತಾನೆ ನಿರೀಕ್ಷಿಸಲು ಸಾಧ್ಯ. ಬಿಜೆಪಿ ನೇತೃತ್ವದ ಸರಕಾರದ ಆಡಳಿತದಲ್ಲಿ ಪ್ರತಿಯೊಂದು ವಸ್ತುವಿನ ಬೆಲೆಯೂ ಹೆಚ್ಚಲಿದೆ ಎಂದು ನವೆಂಬರ್ 2 ರಂದು ಕಲ್ಕತ್ತಾದಲ್ಲಿ ಸುದ್ದಿಗೋಷ್ಠಿಯೊಂದರಲ್ಲಿ ಸಿಪಿಐ(ಎಂ) ನೇತಾರ ಹೇಳಿದರು.

ಕೆಲವು ರಾಜ್ಯಗಳಲ್ಲಿ ಉಪ್ಪಿನ ಬೆಲೆ ಏರಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಸು ಉಪ್ಪೊಂದೇ ಏಕೆ, ಬಿಜೆಪಿ ಅಧಿಕಾರದಲ್ಲಿ ಇರುವವರೆಗೆ ಪ್ರತಿಯೊಂದರ ಬೆಲೆಯೂ ಏರುವುದನ್ನು ನೀವು ಕಾಣುವಿರಿ ಎಂದು ಉತ್ತರಿಸಿದರು.

ಬಿಜೆಪಿ ಸರಕಾರದ ನಿರ್ಲಕ್ಷ್ಯತೆ; ಶಾಲಾಮಕ್ಕಳ ಊಟಕ್ಕೆ ಸಂಚಕಾರ

ಲಖನೌ: ಉತ್ತರ ಪ್ರದೇಶದಲ್ಲಿ ಶಾಲಾ ಮಕ್ಕಳ ಮಧ್ಯಾಹ್ನದ ಊಟದ ಯೋಜನೆಯನ್ನು ಸದ್ದಿಲ್ಲದೆ ಸಮಾಧಿ ಮಾಡಲು ಸಿದ್ಧತೆ ನಡೆದಿದೆ.

1994 ರಲ್ಲಿ ಈ ಯೋಜನೆ ಜಾರಿಗೆ ಬಂದಾಗ ಉತ್ತರ ಪ್ರದೇಶವು ಅತಿ ಹೆಚ್ಚಿನ ಲಾಭ ಪಡೆದಿತ್ತು. ಬಡ ಮಕ್ಕಳನ್ನು ಶಾಲೆಯತ್ತ ಆಕರ್ಷಿಸುವ ಆಶಯದಿಂದ ಈ ಯೋಜನೆಯನ್ನು ಆರಂಭಿಸಲಾಗಿತ್ತು. ಇದಕ್ಕಾಗಿ ರಾಜ್ಯವು ಪ್ರತಿ ತಿಂಗಳೂ 3 ಲಕ್ಷ ಕ್ವಿಂಟಾಲ್ ಗೋಧಿ ಹಾಗೂ 2.25 ಲಕ್ಷ ಕ್ವಿಂಟಾಲ್ ಅಕ್ಕಿಯನ್ನು ಪಡೆಯುತ್ತಿತ್ತು. ಇನ್ನಾವುದೇ ರಾಜ್ಯ ಇಷ್ಟೊಂದು ಪ್ರಮಾಣದ ನೆರವು ಪಡೆಯುತ್ತಿರಲಿಲ್ಲ. ಈ ಯೋಜನೆಯ ಬಾಬ್ತು ಭಾರತೀಯ ಆಹಾರ ನಿಗಮಕ್ಕೆ ಪಾವತಿ ಮಾಡಬೇಕಾದ ಹಣವನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಕಳೆದ 10 ತಿಂಗಳಿಂದಲೂ ಬಾಕಿ ಉಳಿಸಿಕೊಂಡಿದೆ. ಈ ಬಾಕಿ 1500 ಕೋಟಿ ರೂಪಾಯಿಗಳಿಗೂ ಜಾಸ್ತಿಯಾಗಿದೆ. 'ಈ ಪರಿಸ್ಥಿತಿಯಲ್ಲಿ ಶಾಲೆಗಳಿಗೆ ಅಕ್ಕಿ, ಗೋಧಿ ಪೂರೈಸಲು ಸಾಧ್ಯವಿಲ್ಲ' ಎಂದು ಉತ್ತರ ಪ್ರದೇಶದ ಆಹಾರ ನಿಗಮದ ಪ್ರದೇಶಿಕ ನಿಯಂತ್ರಣಾಧಿಕಾರಿ ಹೇಳಿದ್ದಾರೆ.

ರಾಜ್ಯದಲ್ಲಿಯ 20,045 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 70 ಲಕ್ಷ ಮಕ್ಕಳು ಓದುತ್ತಿದ್ದಾರೆ. ಸದ್ಯಕ್ಕಂತೂ ರಾಜ್ಯದಲ್ಲಿ ಈ ಯೋಜನೆ ಪುನರಾರಂಭವಾಗುವಂತೆ ಕಾಣುವುದಿಲ್ಲ. ಪ್ರಾಥಮಿಕ ಶಿಕ್ಷಣ ಸಚಿವ ರವೀಂದ್ರ ಶುಕ್ಲಾ ಅವರಿಗಂತೂ ಈ ಯೋಜನೆಯಲ್ಲಿ ಆಸಕ್ತಿಯೇ ಇಲ್ಲ. ಆದರೆ, ಸ್ಥಳೀಯ ಅಧಿಕಾರಿಗಳಿಗೆ ಈ ಯೋಜನೆ ಆದಾಯದ ಮೂಲವಾಗಿತ್ತು. ಶಾಲಾ ಮಕ್ಕಳಿಗೆ ನಿಗದಿಪಡಿಸಿದಷ್ಟು ಅಕ್ಕಿ ಗೋಧಿಯನ್ನು ಕೊಡುತ್ತಲೇ ಇರಲಿಲ್ಲ ಎಂದು ಶುಕ್ಲಾ ಹೇಳಿದ್ದಾರೆ. ಮಕ್ಕಳನ್ನು ಶಾಲೆಯತ್ತ ಆಕರ್ಷಿಸುವ ಇತರ ವಿಧಾನಗಳ ಬಗ್ಗೆ ಯೋಚಿಸಬೇಕಾಗಿದೆ. ಆದರೆ ಊಟದ ಯೋಜನೆಯನ್ನು ಕೈಬಿಡಲೇಬೇಕಾಗಿದೆ. ಯೋಜನೆಯನ್ನು ಕೈಬಿಡುವ ಬಗ್ಗೆ ಕೇಂದ್ರವು ಅಧಿಕೃತವಾಗಿ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಕೇಂದ್ರೀಯ ಯೋಜನೆಯಾಗಿರುವುದರಿಂದ ರಾಜ್ಯವು ಈ ವಿಚಾರವಾಗಿ ಏನೂ ಮಾಡು ವಂತಿಲ್ಲ ಎಂದು ಶುಕ್ಲಾ ಹೇಳಿದರು. ಉತ್ತರ ಪ್ರದೇಶದ ಗ್ರಾಮಾಂತರ ಪ್ರದೇಶ ದಲ್ಲಂತೂ ಈ ಯೋಜನೆ ಇನ್ನೂ ಜಾರಿಗೆ ಬಂದಿಲ್ಲ ಎಂದು ವರದಿಗಳಿಂದ ತಿಳಿದುಬಂದಿದೆ.

ಗ್ರಾಮಾಂತರ ಪ್ರದೇಶದ ಶಾಲೆಗಳಿಗೆ ಈ ಯೋಜನೆಯ ಪ್ರಯೋಜನ ತಲುಪಿಯೇ ಇಲ್ಲ. ಇದಕ್ಕಾಗಿ ಒದಗಿಸಿದ ಅಕ್ಕಿ ಗೋಧಿ ಎಲ್ಲಿಯೋ ಸೋರಿ ಹೋಗುತ್ತಿದೆ.

ಏನೇ ಇರಲಿ, ಉತ್ತರಪ್ರದೇಶದ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ತಪ್ಪುವಂತಾಗಿದೆ.

ಕಾಂಗ್ರೆಸ್ ಪ್ರಚಾರ ಸಮಿತಿಯಲ್ಲಿ ಸಿಖ್ ವಿರೋಧಿ ಗಲಭೆಯ ಆರೋಪಿಗಳು

ನವೆಂಬರ್ 25 ರಂದು ನಡೆಯಲಿರುವ 4 ರಾಜ್ಯ ವಿಧಾನಸಭೆ ಚುನಾವಣೆಗಳ ಸಂಬಂಧ ರಚಿತವಾಗಿರುವ ಕಾಂಗ್ರೆಸ್ ಪ್ರಚಾರ ಸಮಿತಿ ವಿವಾದವನ್ನು ಹೆಚ್ಚಿಸಿದೆ. 1984ರ ಸಿಖ್ ವಿರೋಧಿ ಗಲಭೆಗಳ ಆರೋಪಿಗಳು ಸಮಿತಿಯಲ್ಲಿರುವುದೇ ಇದಕ್ಕೆ ಕಾರಣವಾಗಿದೆ.

ಇಂದಿರಾಗಾಂಧಿ ಹತ್ಯೆ ಹಿನ್ನೆಲೆಯಲ್ಲಿ ದೇಶಾದ್ಯಂತ ಭುಗಿಲೆದ್ದ ಸಿಖ್ ವಿರೋಧಿ ಹಿಂಸಾಚಾರದಲ್ಲಿ ಅನೇಕ ಮುಗ್ಧ ಸಿಖ್ಖರು ಸಾವಿಗೀಡಾಗಿದ್ದರು. ನೂರಾರು ಕುಟುಂಬಗಳು ಬೀದಿಪಾಲಾದವು. ವಿಶೇಷವಾಗಿ ದೆಹಲಿಯಲ್ಲಿ ಸಿಖ್‌ರ ಮೇಲೆ ನಡೆದ ದೌರ್ಜನ್ಯಕ್ಕೆ ಎಚ್.ಕೆ. ಎಲ್.ಭಗತ್ ಸಜ್ಜನಕುಮಾರ ಮುಂತಾದವರು ನೀಡಿದ ಕುಮ್ಮಕ್ಕೇ ಕಾರಣ.

ಸ್ವರ್ಣ ಮಂದಿರದ ಬ್ಲೂಸ್ಟಾರ್ ಕಾರ್ಯಚರಣೆಗಾಗಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಕ್ಷಮೆ ಕೇಳಿದ್ದರು. ಸಿಖ್ ಸಮುದಾಯದ ಘಾಸಿಗೊಂಡ ಮನಸ್ಸಿಗೆ ಸಾಂತ್ವನ ನೀಡುವುದು ಅದರ ಗುರಿಯಾಗಿತ್ತು. ಆದರೆ ಸಿಖ್ ವಿರೋಧಿ ಗಲಭೆಗಳಲ್ಲಿ ಆರೋಪಿಯಾಗಿರುವವರನ್ನು ಚುನಾವಣೆ ಸಮಿತಿಗಳಲ್ಲಿ ಸೇರಿಸಿ ಪ್ರಮುಖ ಸ್ಥಾನಗಳನ್ನು ನೀಡಿ ತಮ್ಮ ಕ್ಷಮೆಯಾಚನೆ ಆ ಕ್ಷಣದ ಉದ್ದೇಶವನ್ನು ಈಡೇರಿಸಿ ಕೊಳ್ಳಲಿಕ್ಕಾಗಿ ಹೂಡಿದ ನಾಟಕವಷ್ಟೆ ಎಂಬುದಾಗಿ ತೋರಿಸಿಕೊಟ್ಟಿದ್ದಾರೆ.

ಪ್ರಚಾರ ಸಮಿತಿಯಲ್ಲಿ ಇವರಿಬ್ಬರಲ್ಲದೆ ಶಾಸ್ತ್ರಿ ಎನ್ನುವ ಇನ್ನೊಬ್ಬರೂ ಇದ್ದಾರೆ.

ಹಿಮಾಚಲ ಆಳುವ ಬಿಜೆಪಿ ಕೂಟದಲ್ಲಿ ಬಿರುಕು

ಬಿಕ್ಕಟ್ಟಿನೊಂದಿಗೆ ಆಡಳಿತ ನಡೆಸುವುದು ಭಾರತೀಯ ಜನತಾ ಪಕ್ಷ ನೇತೃತ್ವದ ಕೂಟಗಳ ವಿಶೇಷ ಗುಣಲಕ್ಷಣ ಆಗಿರುವಂತೆ ತೋರುತ್ತದೆ. ಹಿಮಾಚಲ ಪ್ರದೇಶದ ಪ್ರಸ್ತುತ ವಿದ್ಯಾಮಾನ ಅದಕ್ಕೆ ಕನ್ನಡಿ ಹಿಡಿಯುತ್ತದೆ.

ಹಿಮಾಚಲ ಪ್ರದೇಶದಲ್ಲಿ ಎಲ್ಲವೂ ಸರಿಯಾಗಿದೆ ಎಂದು ಬಿಜೆಪಿ ನಾಯಕತ್ವ ಹೇಳುತ್ತಿದೆ. ಆದರೆ ಬಿಜೆಪಿ ಹಿಮಾಚಲ ವಿಕಾಸ ಕಾಂಗ್ರೆಸ್ (ಎಚ್‌ವಿಸಿ) ಸಂಬಂಧ ದಿನೇ ದಿನೇ ಕ್ಷೀಣಿಸುತ್ತಿದೆ. ಅತೃಪ್ತಿಯ ಹೊಗೆ ಆಡುತ್ತಿದೆ.

ರಾಜ್ಯ ವಿಧಾನ ಸಭೆಯ ಬೈಜನಾಥ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಲಿದ್ದು ಅಲ್ಲಿ ಸರ್ವಮ್ಮತ ಜಂಟಿ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸುವಲ್ಲಿ ಮೈತ್ರಿಕೂಟ ವಿಫಲವಾಗಿದೆ. ಅದರ ಜತೆ ಇದೀಗ ರಾಜ್ಯದಲ್ಲಿ ಬೃಹತ್ ಸಿಮೆಂಟ್ ಸ್ಥಾವರಗಳನ್ನು ಸ್ಥಾಪಿಸುವ ವಿಚಾರದಲ್ಲಿ ಉಭಯ ಪಕ್ಷಗಳ ಮಧ್ಯೆ ಭಾರೀ ವಿರಸ ಕಾಣಿಸಿಕೊಂಡಿದೆ.

ಬಿಜು ಜನತಾದಳದಲ್ಲಿ ಬಂಡಾಯ

ಗುಂಪುಗಾರಿಕೆಯಿಂದ ಅಕ್ಷರಶಃ ಬೇಯುತ್ತಿದ್ದ ಬಿಜು ಜನತಾದಳ (ಬಿಜೆಡಿ) ಯುವ ಘಟಕ ನವೆಂಬರ್ 3 ರಂದು (ಮಂಗಳವಾರ) ಇಬ್ಭಾಗಗೊಂಡಿದೆ. ಬಿಜೆಡಿ ಅಧ್ಯಕ್ಷರು ಇತ್ತೀಚೆಗೆ ಕೈಗೊಂಡ ಪಕ್ಷದ ಸಾಂಸ್ಥಿಕ ಪುನರ್ ರಚನೆಯನ್ನು ತಿರಸ್ಕರಿಸಿ ಈ ಮುಂಚಿನ ಬಿಜೆಡಿ ಯುವ ಘಟಕದ ಪದಾಧಿಕಾರಿಗಳು ಯುವ ಜನತಾದಳ ರಾಜ್ಯಾಧ್ಯಕ್ಷ ದೇಬಿ ಮಿಶ್ರಾ ಅವರ ನೇತೃತ್ವದಲ್ಲಿ ಹೊರಬಂದಿದ್ದಾರೆ.

ಬಿಜೆಡಿ ಯುವ ಘಟಕದ ಈ ಮುಂಚಿನ ಪದಾಧಿಕಾರಿಗಳು ಅವರವರ ಸ್ಥಾನದಲ್ಲಿ ಹಿಂದಿನಂತೆಯೇ ಕಾರ್ಯನಿರ್ವಹಿಸುವರೆಂದು ಇಲ್ಲಿ ನಡೆದ ಪಕ್ಷದ ಜಿಲ್ಲಾ ಯುವ ಅಧ್ಯಕ್ಷರುಗಳ, ಪದಾಧಿಕಾರಿಗಳ, ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯಲ್ಲಿ ಘೋಷಿಸಲಾಗಿದೆ. ಪಕ್ಷದ ಮಟ್ಟದಲ್ಲಿ ಸಮಾಲೋಚಿಸದೇ ಯುವ ದಳದ ರಾಜ್ಯಾಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ ಹಾಗೂ ಜಿಲ್ಲಾ ಯುವ ಘಟಕಗಳನ್ನು ಅಸಂವಿಧಾನಿಕವಾಗಿ ಹಾಗೂ ಏಕಪಕ್ಷೀಯವಾಗಿ ಬಿಜೆಡಿ ಅಧ್ಯಕ್ಷರು ಬದಲಾಯಿಸಿರುವರೆಂದು ಯುವ ಘಟಕದ ನಾಯಕರು ಹಾಗೂ ಈ ಮುಂಚಿನ ಕಾರ್ಯಕಾರಿ ಸಮಿತಿ ಸದಸ್ಯರು ಆಪಾದಿಸಿದ್ದಾರೆ.

ಬಿಜೆಡಿಯ ಯುವ ಘಟಕದ ಪದಾಧಿಕಾರಿಗಳ ಈ ತೀರ್ಮಾನ ಬಿಜೆಡಿ ಅಧ್ಯಕ್ಷರೂ ಆಗಿರುವ ಕೇಂದ್ರ ಕಬ್ಬಿಣ ಮತ್ತು ಗಣಿ ಸಚಿವ ನವೀನ್ ಪಾಟ್ನಾಯಕ್ ಅವರಿಗೆ ಸವಾಲಾಗಿ ಪರಿಣಮಿಸಿದೆ.

ಪಕ್ಷದ ಅಧ್ಯಕ್ಷರು ನೀಡಲು ಮುಂದಾಗಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಮಿಶ್ರಾ ತಿರಸ್ಕರಿಸಿದ್ದಾರೆ. ಸಾಂಸ್ಥಿಕ ಪುನರ್ ರಚನೆಯನ್ನು ಪುನರ್ ಪರಿಶೀಲಿಸುವಂತೆ ನವೀನ್ ಪಾಟ್ನಾಯಿಕ್ ಅವರನ್ನು ಆಗ್ರಹಿಸಿ ಪ್ರತ್ಯೇಕಗೊಂಡಿರುವ ಸದಸ್ಯರು ನಿರ್ಣಯವೊಂದನ್ನು ಸಭೆಯಲ್ಲಿ ಅಂಗೀಕರಿಸಿದ್ದಾರೆ.

ತ್ರಿಪುರಾ ಉಗ್ರರಿಂದ ಅಪಹೃತರ ಬಿಡುಗಡೆ

ತ್ರಿಪುರಾದ ಎನ್.ಎಲ್.ಎಫ್.ಟಿ. ಉಗ್ರಗಾಮಿಗಳು ತಾವು ನಾಲ್ಕು ತಿಂಗಳ ಹಿಂದೆ ಅಪಹರಿಸಿದ್ದ ಸಿಪಿಐ(ಎಂ) ಸಂಸತ್ ಸದಸ್ಯ ಬಜುಬಾನ್ ರಿಯಾಂಗ್‌ರ ಪುತ್ರ ಮತ್ತು ಇತರ 12 ಜನರನ್ನು ಬಿಡುಗಡೆ ಮಾಡಿದ್ದಾರೆ. ರಿಯಾಂಗ್‌ರ ಪುತ್ರ ಹಾಗೂ ರಾಜ್ಯ ಆರೋಗ್ಯ ಇಲಾಖೆಯ ನೌಕರ ರಣಜಿತ್ ರಿಯಾಂಗ್ ಅಕ್ಟೋಬರ್ 31 ರ ರಾತ್ರಿ ಸುರಕ್ಷಿತವಾಗಿ ಮನೆಗೆ ಮರಳಿದರು. ಶಾಂತಿ ಬಜಾರ್ ಗ್ರಾಮದ ಮನೆಯಿಂದ ಜೂನ್ 29 ರಂದು ಅವರನ್ನು ಅಪಹರಿಸಲಾಗಿತ್ತು.

ಝಬುವಾಕ್ಕೆ ಕೇರಳ ಸಂಸತ್ ಸದಸ್ಯರ ಭೇಟಿ

ಸೆ. 23 ರಂದು ಕ್ರಿಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ ನಡೆದ ಮಧ್ಯ ಪ್ರದೇಶದ ಝಬುವಾಕ್ಕೆ ಕೇರಳದ ಸಂಸತ್ ಸದಸ್ಯರ ನಿಯೋಗವೊಂದು ಅಕ್ಟೋಬರ್ 12 ರಂದು ಭೇಟಿ ನೀಡಿ ಪರಿಸ್ಥಿತಿಯ ಅಧ್ಯಯನ ನಡೆಸಿತು.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ರಾಜ್ಯಸಭೆಯ ಮಾಜಿ ಸದಸ್ಯ ಎಂ.ಎ. ಬೇಬಿ ನೇತೃತ್ವದ ಸಂಸದರಾದ ಟಿ.ಗೋವಿಂದನ್, ಎಸ್.ಎಸ್. ಕೃಷ್ಣದಾಸ್ ಎ.ವಿಜಯರಾಘವನ್, ಸಿ.ಓ.ಪಾವ್ಲೋಸ್, ಸುರೇಶ ಕುರುಪ್, ಎ.ಕೆ.ಪ್ರೇಮಾಜಮ್ ಮತ್ತು ಕೇರಳ ವಿಧಾನಸಭೆ ಸದಸ್ಯ ಸೆಬಾಸ್ಟಿಯಸ್ ಪಾಲ್ ಇದ್ದರು. ಸಿಪಿಐ(ಎಂ) ಮಧ್ಯಪ್ರದೇಶ ರಾಜ್ಯ ಸಮಿತಿ ಕಾರ್ಯದರ್ಶಿ ಶೈಲೇಂದ್ರ ಶೈಲಿ ಅವರೂ ನಿಯೋಗದಲ್ಲಿದ್ದರು.

ಲೋಕಸಂಚಾರ

ಶರತ್ ಚಂದ್ರ

ದ.ಆಫ್ರಿಕಾದ ಸತ್ಯಶೋಧಕ ಕಮಿಶನ್ ವರದಿ ಬಿಡುಗಡೆ

ಶೋಷಕ-ಶೋಷಿತರನ್ನು ಒಂದೇ ತಕ್ಕಡಿಯಲ್ಲಿ ತೂಗುವ ಪ್ರಯತ್ನ

ದಕ್ಷಿಣ ಆಫ್ರಿಕಾದ ವರ್ಣಬೇಧ ವ್ಯವಸ್ಥೆಯಲ್ಲಿ ನಡೆದ ಅಪರಾದಗಳ ಬಗ್ಗೆ ತನಿಖೆ ನಡೆಸಲು ನೇಮಿಸಲಾಗಿದ್ದ, ಸತ್ಯಶೋಧಕ ಕಮೀಶನ್ ತನ್ನ ವರದಿ ತಯಾರಿಸಿ ಬಿಡುಗಡೆ ಮಾಡಿದೆ. ಅದರ ವರದಿ ಬಿಡುಗಡೆ ಹೊತ್ತಿಗೆ ಅನಿರೀಕ್ಷಿತ ವಿವಾದ ಉಂಟಾಗಿತ್ತು. ಆಳುವ ಪಕ್ಷ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಈ ವರದಿ ಸಾರ್ವಜನಿಕವಾಗಿ ಬಿಡುಗಡೆ ಮಾಡಬಾರದು ಎಂದು ಕೋರ್ಟಿಗೆ ಹೋಗಿತ್ತು. ಕೋರ್ಟು ಅದನ್ನು ತಳ್ಳಿ ಹಾಕಿತ್ತು.

ಆದರೆ ಈ ವಿವಾದ ಕಮಿಶನ್‌ನ ವರದಿ ಹೊರಗೆಡವಿರುವ ವಿವರಗಳು ವರ್ಣಭೇಧ ವ್ಯವಸ್ಥೆಯ ಕ್ರೌರ್ಯ ವಿಧಿ ವಿಧಾನಗಳು, ಅಗಾಧವಾದದ್ದು. ಐದು ಸಂಪುಟಗಳ 2700 ಪುಟಗಳ ಈ ವರದಿ ಅದು. ಈ ವ್ಯವಸ್ಥೆಯನ್ನು ನಡೆಸುತ್ತಿದ್ದವರ ಬಾಯಿಂದಲೇ ಸಂಗ್ರಹಿಸಿದ ಪುರಾವೆ, ಸಾಕ್ಷ್ಯಗಳು ಅಷ್ಟೇ ಮಹತ್ವದ್ದು. 1960ರ ಶಾರ್ಪ್‌ವಿಲೆಯ ದುರಂತದಿಂದ ಹಿಡಿದು 1994 ರಲ್ಲಿ ಬಹು-ಜನಾಂಗೀಯ ಚುನಾವಣೆಗಳ ವರೆಗಿನ ಎಲ್ಲಾ ಪ್ರಮುಖ ಘಟವೆಗಳ ಬಗ್ಗೆ ಮಾಹಿತಿ ಕಲೆ ಹಾಕಿದ ವರದಿ. ದಕ್ಷಿಣ ಆಫ್ರಿಕಾದ ಚರ್ಚು ಸಂಘಟನೆಯ ಮತ್ತು ಲಂಡನ್‌ನಲ್ಲಿ ಆಗ ANCಯ ಮುಖ್ಯ ಕಚೇರಿಗಳ ಮೇಲೆ ನಡೆದ ಬಾಂಬ್‌ದಾಳಿ ಸರ್ಕಾರದ ಅಧಿಕೃತ ಕಾರ್ಯಕ್ರಮವಾಗಿತ್ತು ಎಂದು ವರದಿ ಎತ್ತಿ ತೋರಿಸಿದೆ. ಹಲವಾರು ವರ್ಣವ್ಯವಸ್ಥೆಯನ್ನು ಜಾರಿಮಾಡಿದ ಮುಖ್ಯ ರಾಜಕಾರಣಿಗಳು ಅಧಿಕಾರಿಗಳು ಕಮಿಷನ್ ಮುಂದೆ ವಿವರವಾಗಿ ಇಂತಹ ಹಲವಾರು ಘಟನೆಗಳ ಬಗ್ಗೆ ಸಾಕ್ಷಿ ನೀಡಿದ್ದಾರೆ. 1994ರಲ್ಲಿ ಮಂಡೇಲಾ ಸರ್ಕಾರ ತಂದ ಕಾನೂನು ಪ್ರಕಾರ ಈ ಕಮಿಷನ್‌ನ್ನು ನೇಮಿಸಲಾಗಿತ್ತು. ಈ ಕಾನೂನು ಪ್ರಕಾರ ವರ್ಣವ್ಯವಸ್ಥೆಯ ಕ್ರೌರ್ಯಗಳಲ್ಲಿ ಪಾಲ್ಗೊಂಡವರು, ಅವರ ಬಗ್ಗೆ ನೇರ ಪುರಾವೆ ಹೊಂದಿರುವವರು ತಮ್ಮ ಜವಾಬ್ದಾರಿ ಬಗ್ಗೆ ತಪ್ಪುಗಳ ಬಗ್ಗೆ ಒಪ್ಪಿಕೊಂಡರೆ ಕಮಿಶನ್ ಅವರಿಗೆ ಕ್ಷಮಾದಾನ ನೀಡಬಹುದು. ವರ್ಣ ವ್ಯವಸ್ಥೆಯ ಕೊನೆಯ ಸರ್ಕಾರದ ಪೋಲೀಸ್ ಕಮೀಶನರ್, ಆಂತರಿಕ ಭದ್ರತಾ ಮಂತ್ರಿ ಕಮೀಶನ್ ಮುಂದೆ ವಿವರವಾಗಿ ಸಾಕ್ಷ ನೀಡಿ ಈ ಕ್ರಮವನ್ನು ಬಳಸಿಕೊಂಡಿದ್ದರು.

ಇನ್ನು ವರದಿಯ ಬಿಡುಗಡೆ ಹೊತ್ತಿಗೆ ವಿವಾದದ ಬಗ್ಗೆ ಬರುವುದಾದರೆ ಕಮೀಶನ್ ತನ್ನ ವರದಿಯಲ್ಲಿ ಮಾನವ ಜನಾಂಗದ ವಿರುದ್ಧ ಅಪರಾಧವಾಗಿದ್ದ ವರ್ಣಭೇದದ ಕ್ರೂರ ವ್ಯವಸ್ಥೆಯ ಪಾಲಕರಾಗದ ಶೋಷಿತರನ್ನು ಅವರ ವಿರುದ್ಧ ನ್ಯಾಯಯುತ ಯುದ್ಧ ಹೂಡಿದ್ದ ಶೋಷಕರನ್ನೂ ಒಂದೇ ತಕ್ಕಡಿಯಲ್ಲಿ ತೂಗಿದೆ, ಒಂದೇ ಮಾನದಂಡ ಬಳಸಿದೆ. ANC ವರ್ಣಭೇದ ಸರ್ಕಾರದ ನಾಯಕರು, ಕಾರ್ಯಕರ್ತರ ಮೇಲೆ ಬಳಸಿದ ಬಾಂಬಿಂಗ್ ಸಶಸ್ತ್ರ ಪ್ರತಿರೋಧಗಳನ್ನು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಕರೆದು ಅದಕ್ಕೆ ಜವಾಬ್ದಾರರಿಗೆ ಶಿಕ್ಷೆ ಆಗಬೇಕು, ANC ಮತ್ತು ಅದರ ಅಂಗ ಸಂಸ್ಥೆಗಳು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಹೇಳಿವೆ. ನ್ಯಾಯಯುತ ಯುದ್ಧಕ್ಕೆ ನ್ಯಾಯಯುತ ಸಾಧನಗಳನ್ನು ಬಳಸಬೇಕು ಎಂದು ಕಮೀಶನ್ ಕ್ಲಾಸು ಹಾಕಿದೆ. ಇದು ವರ್ಣಬೇದ ವ್ಯವಸ್ಥೆಯ ಪ್ರತೀಕವಾದ ಡಿಕ್ಲರ್ಕ್ ಹಾಗೂ ಮಂಡೇಲಾಗೆ ಜಂಟಿ ನೊಬೆಲ್ ಶಾಂತಿ ಪ್ರಶಸ್ತಿ ನೀಡಿದ ಸಾಮ್ರಾಜ್ಯಶಾಹಿ ಬಂಡವಾಳ ಶಾಹಿ ಮನಸ್ಸಿಗಿಂತ ಬೇರೆ ಅಲ್ಲ.

ಎಲ್ಲಾ ಕ್ರೂರವ್ಯವಸ್ಥೆಗಳಿಂದ ಬಳಲುವ ಶೋಷಿತರಿಗೆ ಎಷ್ಟೋ ಬಾರಿ ಕ್ರಾಂತಿಕಾರಿ ಹಿಂಸೆ ಬಳಸಬೇಕಾಗುತ್ತದೆ ಅಥವಾ ವ್ಯವಸ್ಥೆಯನ್ನು ಸುಮ್ಮನೆ ಒಪ್ಪಿಕೊಳ್ಳಬೇಕಾಗುತ್ತದೆ. ಇವೆರಡರ ನಡುವೆ ಮಾತ್ರ ಆಯ್ಕೆಯ ಸ್ವಾತಂತ್ರ್ಯವಿರುತ್ತದೆ. ದಕ್ಷಿಣ ಆಫ್ರಿಕಾದ ವರ್ಣಭೇದ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ಇದೇ ಆಯ್ಕೆ ಇತ್ತಷ್ಟೇ. ಶೋಷಕ ಶೋಷಿತರ ನಡುವಣ ಹೋರಾಟದಲ್ಲಿ ಯಾವ ಸಾಧನಗಳನ್ನು ಬಳಸಲಾಗುತ್ತದೆ ಎಂಬ ಬಗ್ಗೆ ಆಯ್ಕೆ ಇರುವುದು ಶೋಷಕರಿಗೆ ಮಾತ್ರ. ಶೋಷಿತರು ಅದೇ ಸಾಧನಗಳನ್ನು ಪ್ರತಿರೋಧಕ್ಕೆ ಬಳಸಬೇಕಾಗುತ್ತದೆ.

ಸುಹಾರ್ತೊ-ಮಾದರಿ ವ್ಯವಸ್ಥೆ ಬದಲಾಯಿಸಲು ಭಾರಿ ಪ್ರದರ್ಶನ

ಇಂಡೋನೇಶ್ಯಾದಲ್ಲಿ ಸುಹಾರ್ತೋ-ಮಾದರಿ ರಾಜಕೀಯ ವ್ಯವಸ್ಥೆ ಬದಲಾಯಿಸಿ ನಿಜವಾದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ತರಲು ಜನಾಂದೋಲನ ತೀವ್ರವಾಗುತ್ತಿದೆ. ಇತ್ತೀಚಿಗೆ ರಾಜಧಾನಿ ಜಕಾರ್ತಾದಲ್ಲಿ ಸಾವಿರಾರು ಜನ ಭಾಗವಹಿಸಿದ್ದ ಭಾರಿ ರ‍್ಯಾಲಿ ನಡೆದು, ಪಾರ್ಲಿಮೆಂಟಿನ ಮುಂದೆ ಮತಪ್ರದರ್ಶನ ನಡೆಯಿತು. ರಾಜಕೀಯ ಹಾಗೂ ಚುನಾವಣಾ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳನ್ನು ಸೂಚಿಸುವ ಕಾನೂನಿನ ಬಗ್ಗೆ ಈಗಿನ ಪಾರ್ಲಿಮೆಂಟು ಚರ್ಚಿಸುವುದನ್ನು ಅವರು ವಿರೋಧಿಸುತ್ತಿದ್ದರು. ದೇಶದ ರಾಜಕೀಯದಲ್ಲಿ ಎಲ್ಲೆಲ್ಲೂ ಹರಡಿಬಿಟ್ಟಿದ್ದ ಸೈನ್ಯದ ಪಾತ್ರದ ಬಗ್ಗೆಯೂ ಸ್ಪಷ್ಟ ನಿಲುವು ತೆಗೆದುಕೊಂಡಿದ್ದಾರೆ. ದೇಶದ ಸೈನ್ಯ ರಾಜಕೀಯವಾಗಿ ಪೂರ್ಣವಾಗಿ ತಟಸ್ಥವಾಗಿರಬೇಕು ಎಂದು ಅದರವಾದ. (ಈಗ ಪಾರ್ಲಿಮೆಂಟಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ಸೀಟುಗಳನ್ನು ಸೈನ್ಯದ ಪ್ರತಿನಿಧಿಗಳಿಗೆ ಕಾದಿರಿಸಲಾಗಿದೆ. ಸೈನ್ಯ ಹಾಗೂ ಅವರ ಕುಟುಂಬಗಳು ಆಳುವ ಪಕ್ಷಕ್ಕೆ ಓಟು ಮಾಡಬೇಕೆಂದು ಸೈನ್ಯ ಫರ್ಮಾನು ಹೊರಡಿಸುತ್ತದೆ.) ಈಗಿನ ಸರ್ಕಾರ ಈಗಿನ ವ್ಯವಸ್ಥೆಗೆ ತೇಪೆ ಹಾಕಿ, ಮುಂದುವರಿಸಲು ಹವಣಿಸುತ್ತಿದೆ. ಜನಾಂದೋಲನದ ತೀವ್ರತೆ ನೋಡಿದರೆ. ಇದು ಸಾಧ್ಯವಾಗುವಂತಿಲ್ಲ.

ಇರಾನಿಯನ್ ಚುನಾವಣೆಗಳು ಉದಾರವಾದಿಗಳಿಗೆ ಸೋಲು

ಇರಾನಿಯನ್ ಚುನಾವಣೆಗಳಲ್ಲಿ ಇಸ್ಲಾಮಿಕ್ ಉದಾರವಾದಿಗಳಿಗೆ ಸೋಲಾಗಿದೆ. ಉದಾರವಾದಿಗಳಿಗೆ 16 ಸೀಟು ದೊರಕಿದರೆ, 70 ಸೀಟುಗಳು ತೀವ್ರವಾದಿಗಳಿಗೆ ಹೋಗಿದೆ. ಆದರೆ ಇದು ಹೆಚ್ಚುಕಡಿಮೆ ಮೊದಲೇ ಗೊತ್ತಿದ್ದ ವಿಷಯವಾಗಿತ್ತು. ತಜ್ಞರ ಸಭೆ ಎಂದು ಕರೆಯಲಾಗುವ ಈ ಸರ್ವೋಚ್ಚ ಸಭೆಯ ಚುನಾವಣೆಗೆ ಅಭ್ಯರ್ಥಿಗಳನ್ನು 12 ಸದಸ್ಯರ ಪಾಲಕರ ಕೌನ್ಸಿಲ್ ಮಂಜೂರು ಮಾಡಬೇಕು. ಅಭ್ಯರ್ಥಿಗೆ ಬಂದ ಸುಮಾರು 400 ಅರ್ಜಿಗಳಲ್ಲಿ 230 ಕ್ಕೂ ಹೆಚ್ಚು ಅರ್ಜಿಗಳನ್ನು ಕೌನ್ಸಿಲ್ ತಿರಸ್ಕರಿಸಿತ್ತು. ತಿರಸ್ಕರಿಸಿದ ಅರ್ಜಿಗಳಲ್ಲಿ ಹೆಚ್ಚಿನವು ಉದಾರವಾದಿಗಳದ್ದು ಎನ್ನಲಾಗಿದೆ. ಇದಲ್ಲದೆ ಅಭ್ಯರ್ಥಿಗಳಲ್ಲಿ ಹೆಚ್ಚಿನವರು ತೀವ್ರವಾದಿಗಳಾದ್ದರಿಂದ ಮತದಾರರಲ್ಲಿ ಆಸಕ್ತಿ ಬಹಳ ಕಡಿಮೆಯಾಗಿತ್ತು. ದೇಶಾದ್ಯಂತ ಮತದಾನ ಶೇಕಡ 50 ಕ್ಕಿಂತಲೂ ಕಡಿಮೆ ಇತ್ತು. ರಾಜಧಾನಿ ಟೆಹರಾನ್‌ನಲ್ಲಿ ಮತದಾನ ಕೇವಲ ಶೇಕಡಾ 25 ಆಗಿತ್ತು. ಕಳೆದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಶೇಕಡಾ 75 ಕ್ಕಿಂತಲೂ ಹೆಚ್ಚು ಮತದಾನವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

1979 ಇಸ್ಲಾಮಿಕ್ ಕ್ರಾಂತಿ'ಯಲ್ಲಿ ಅಧಿಕಾರಕ್ಕೆ ಬಂದ ಮುಲ್ಲಾಗಳ ಆಡಳಿತ ಈಗ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ಹಿಂದೆಂದಿಗಿಂತಲೂ ಆರ್ಥಿಕ ಸಮಸ್ಯೆಗಳು, ನಿರುದ್ಯೋಗ ಹಣದುಬ್ಬರ ತಾಂಡವವಾಡುತ್ತಿದೆ. ತೀವ್ರವಾದಿ ಧಾರ್ಮಿಕ ಮೂಲಭೂತವಾದ ಸಹ ಜನಪ್ರಿಯವಾಗಿ ಉಳಿದಿಲ್ಲ. ಉದಾರವಾದಿಗಳು ಧಾರ್ಮಿಕ ಮೂಲ ಭೂತವಾದಿ ಅಂಶ ಕಡಿಮೆ ಮಾಡುವ ಬಗ್ಗೆ ವಾದಿಸುತ್ತಿದ್ದಾರೆ.

ಪೀಸ್-ಪೀಸ್ ಆಗುತ್ತಿರುವ ಮಧ್ಯ ಏಶ್ಯಾ 'ಪೀಸ್' ಒಪ್ಪಂದ

ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ನಡುವೆ ಐದು ವರ್ಷಗಳ ಹಿಂದೆ ಆದ ಶಾಂತಿ (ಪೀಸ್ Peace) ಒಪ್ಪಂದ ಜಾರಿಯಲ್ಲಿ ಬಂದೇ ಇಲ್ಲ. ಪುನ 3-6 ತಿಂಗಳಿಗೊಮ್ಮೆ ಶಾಂತಿ ಒಪ್ಪಂದದ ಜಾರಿಗೆ ಒತ್ತಾಯಿಸಿದಾಗ ಪುನಃ ಮಾತುಕತೆ ನಡೆಯುತ್ತದೆ ಅಮೇರಿಕದ ದಳ್ಳಾಳಿಗಿರಿಯಲ್ಲಿ ನಡೆಯುವ ಒಪ್ಪಂದದಲ್ಲಿ ಪ್ಯಾಲೆಸ್ಟೈನ್ನರಿಗೆ ಹಿತಾಸಕ್ತಿಗೆ ವಿರುದ್ಧವಾದ ಇನ್ನಷ್ಟು ಹೊಸ ಅಂಶಗಳು ಸೇರುತ್ತವೆ. ಪ್ಯಾಲೆಸ್ಟೈನ್‌ಪರ ಅಂಶಗಳ ಜಾರಿಯ ತಾರೀಕು ಮುಂದಕ್ಕೆ ಹೋಗುತ್ತದೆ. ಇತ್ತೀಚೆಗೆ ಅಮೆರಿಕದ ವೈ ನದಿತೀರದಲ್ಲಿ ನಡೆದ ಮಾತುಕತೆಯಲ್ಲಿ ಆದದ್ದೂ ಇದೆ. ಪ್ಯಾಲೆಸ್ಟೈನ್ ಮತ್ತು ಅರಬ್ ಜನತೆ ಮೊದಲಿಂದಲೂ ಈ ಶಾಂತಿ ಒಪ್ಪಂದದ ಬಗ್ಗೆ ಉತ್ಸಾಹ ತೋರಿಸಲೇ ಇಲ್ಲ. ಐದು ವರ್ಷದ ನಂತರ ಒಪ್ಪಂದದ ಜಾರಿಯ ನಿಧಾನಗತಿ ನೋಡಿದ ಮೇಲಂತೂ ಇಸ್ರೇಲ್ ಅಮೆರಿಕಗಳನ್ನು ಅವರು ನಾಂಬುವುದೇ ಇಲ್ಲ. ಈ ಬಾರಿ ಈ ಒಪ್ಪಂದದ ನಂತರ, ಅರಬ್ ಜನತೆ ಮಾತ್ರವಲ್ಲ ಇತರ ಅರಬ್ ಸರ್ಕಾರಗಳು ಈ ಒಪ್ಪಂದವನ್ನು ಟೀಕಿಸಿವೆ. ಅದರ ಜಾರಿ ಬಗ್ಗೆ ಸಂಶಯ ವ್ಯಕ್ತಪಡಿಸಿವೆ. ಜೋರ್ಡಾನ್ ದೊರೆ ಬಿಟ್ಟರೆ ಇತರ ಎಲ್ಲಾ ಅರಬ್ ದೇಶಗಳ ಮುಖ್ಯಸ್ಥರು ಒಪ್ಪಂದದ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಮೈಕ್ರೋಸೋಫ್ಟ್ ಮೇಲೆ ಏಕಸ್ವಾಮ್ಯದ ಆರೋಪ

ಅಮೆರಿಕದ ಏಕಸ್ವಾಮ್ಯ ವಿರೋಧಿ ಕಮಿಶನ್ ಮೈಕ್ರೋಸೋಫ್ಟ್ ಮೇಲೆ ಆರೋಪ ಹೊರಿಸಿ ವಿಚಾರಣೆ ನಡೆಸುತ್ತಿದೆ. ಮೈಕ್ರೊಸೋಪ್ಟ್ ಪೀಸಿಗಳು ಆಪರೇಟಿಂಗ್ ಸಿಸ್ಟಮ್ ಎಂಬ ಸಾಫ್ಟ್‌ವೇರ್ ಹೆಚ್ಚು ಕಡಿಮೆ ಏಕಸ್ವಾಮ್ಯ ಹೊಂದಿದೆ. ಅದನ್ನು ಬಳಸಿ ಇಂಟರ್‌ನೆಟ್ ನೋಡಲು ಬಳಸುವ ಬ್ರೌಸರ್ ಮಾರಾಟದಲ್ಲಿ ತನ್ನ ಮುಖ್ಯ ಪ್ರೈಪೋಟಿದಾರನಾದ ಕಿಟ್‌ಸ್ಕೈಪ್ ಎಂಬ ಕಂಪನಿಯ ಸಾಫ್ಟ್‌ವೇರ್ ಮಾರಾಟವಾಗದಂತೆ ಮಾಡಲು ಏಕ-ಸಾಮ್ಯದ ನೀತಿ ಬಳಸುತ್ತಿದೆ ಎಂದು ಆರೋಪ ಮಾಡಲಾಗಿದೆ. ಮೈಕ್ರೋಸೋಫ್ಟ್ ತನ್ನ ವಿಂಡೋಸ್ 98 ಎಂಬ ಹೊಸ ಆಪರೇಟಿಂಗ್ ಸಿಸ್ಟಮ್ ಜತೆ ಬ್ರಾಸರ್‌ನ್ನು ಉಚಿತವಾಗಿ ಕೊಡುತ್ತಿದೆ.

ಯುರೋಪಿಯನ್ನರ ಅಮೆರಿಕನ್ನರ ನಡುವೆ 'ಬಾಳೆಹಣ್ಣು' ವಿವಾದ

ಅಮೆರಿಕ ಯುರೋಪಿಯನ್ ಒಕ್ಕೂಟದ ವಿರುದ್ಧ ವಿಶ್ವ ವಾಣಿಜ್ಯ ಸಂಸ್ಥೆಗೆ ದೂರು ನೀಡುವುದಾಗಿ ಬೆದರಿಕೆ ಹಾಕಿದೆ. ವಿವಾದಕ್ಕೆ ಕಾರಣವಾಗಿರುವುದು ಯುರೋಪು ಬಾಳೆಹಣ್ಣು ಆಮದಿನ ಮೇಲೆ ವಿಧಿಸಿರುವ ನಿರ್ಬಂಧಗಳು. ಈ ಬಗ್ಗೆ WTO ನಿಲುವನ್ನು ಯುರೋಪಿಯನ್ನರು ಪಾಲಿಸುತ್ತಿಲ್ಲ ಎಂದು ಅಮೆರಿಕನ್ನರ ವಾದ. ಇದು ಹೀಗೆ ಮುಂದುವರೆದರೆ WTO ನ ಅನುಮತಿ ಪಡೆದು ವಾಣಿಜ್ಯ ನಿರ್ಬಂಧದ ಬೆದರಿಕೆ ಸಹ ಹಾಕಿದೆ. WTO ನಲ್ಲಿ ಉಳ್ಳವರ ನಡುವೆ ಕಾದಾಟ ತೀವ್ರವಾಗುತ್ತಿದೆ. ಅಮೆರಿಕ ಯುರೋಪ್, ಜಪಾನ್ ಉಳ್ಳವರು ಮೂರನೇ ಜಗತ್ತಿನ ದೇಶಗಳಿಗಿಂತಲೂ WTO ಬಡ ವರಿಗೆ ಪೋಲೀಸ್ ಸ್ಟೇಶನ್ ಇದ್ದಂತೆ - ಪೋಲೀಸ್ ದೂರು ಕೊಡುತ್ತೇನೆ ಅಂತ ಹೆದರಿಸಲು. ಅಲ್ಲಿ ಬಡದೇಶಗಳಿಗೆ ದನಿಯೆ ಇಲ್ಲ. ಉಳ್ಳವರು ಹೇಳಿದ್ದೇ. ಅಮೆರಿಕ ಮತ್ತು ಯುರೋಪಿಯನ್ನರ ನಡುವೆ ಇನ್ನೂ ಹಲವು ವಿವಾದಗಳು ಇವೆ. ಗೋಮಾಂಸದ ಹಾರ್ಮೋನುಗಳ ಮೇಲೆ ಯುರೋಪಿಯನ್ ನಿಷೇಧ ಮ್ಯಾಗರಿಫೀನ್ ಆಮದಿನ ಮೇಲೆ ಕೆನಡಾದ ನಿರ್ಬಂಧಗಳು ಇತರ ವಿವಾದಾಸ್ಪದ ವಿಷಯಗಳು.

ಪಾವತಿ ಶುಲ್ಕ ಆಧಾರಿತ ಪ್ರವೇಶ ನೀತಿ ವಿರುದ್ಧ ಮೈಸೂರು ವಿ.ವಿ.ಚಲೊ

ಸ್ನಾತಕೋತ್ತರ ಶಿಕ್ಷಣದ ಎಂ.ಬಿ.ಎ. ಎಂ.ಸಿ.ಎ. ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಜಿ) ಕಂಪ್ಯೂಟರ್ ವಿಜ್ಞಾನ, ಎಂ.ಎಸ್.ಸಿ. ಮುಂತಾದ ಹಲವು ವಿಭಾಗಗಳಲ್ಲಿ ಶೇ. 40 ರಷ್ಟು ಸೀಟುಗಳನ್ನು 25-30 ಸಾವಿರ ರೂಗಳ ವರೆಗೆ ಶುಲ್ಕದ ಆಧಾರದಲ್ಲಿ ನೀಡಬೇಕೆಂದು ಮೈಸೂರು ವಿಶ್ವ ವಿದ್ಯಾಲಯದ ಶಿಕ್ಷಣ ವಿರೋಧಿ ನೀತಿ ಕೂಡಲೇ ವಾಪಸ್ಸಾಗಬೇಕೆಂದು ಹಾಗೂ ವಿ.ವಿ. ಆಡಳಿತ ದಕ್ಷಗೊಳ್ಳಬೇಕು- ಆಡಳಿತವು, ವಿಕೇಂದ್ರೀಕರಣ ಪ್ರಜಾಪ್ರಭುತ್ವೀಕರಣ ಗೊಳ್ಳಬೇಕು ಎಂದು ಒತ್ತಾಯಿಸಿ ಸೆಪ್ಟೆಂಬರ್ 29 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ನೇತೃತ್ವದಲ್ಲಿ ಮೈಸೂರು ವಿಶ್ವ ವಿದ್ಯಾಲಯ ಚಲೊ ನಡೆಸಲಾಯಿತು.,

ಮೈಸೂರು ನಗರದ ಟೌನ್‌ಹಾಲ್‌ನಿಂದ, ವಿಶ್ವ ವಿದ್ಯಾಲಯ ಕಛೇರಿಯವರೆಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಮೈಸೂರು ಹಾಸನ, ಮುಖ್ಯವಾಗಿ ಮಂಡ್ಯ ಜಿಲ್ಲೆಯ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ನಂತರ ವಿಶ್ವ ವಿದ್ಯಾಲಯ ಕಛೇರಿಯ ಮುಂದೆ ನಡೆದ ಸಭೆಯಲ್ಲಿ, ಎಸ್.ಎಫ್.ಐ.ನ ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್ ರವರು ಮಾತನಾಡಿ ಉಳ್ಳವರಿಗೆ ಮಾತ್ರ ಶಿಕ್ಷಣ ಎನ್ನುವ ರಾಜೀವ್ ಗಾಂಧಿಯುವರು ಆರಂಭಿಸಿದ ನೂತನ ಶಿಕ್ಷಣ ನೀತಿಯನ್ನು ಬಿಜೆಪಿ ನೇತೃತ್ವದ ಕೇಂದ್ರ, ಸರಕಾರ ತೀವ್ರಗೊಳಿಸಿ ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗ (UGC)ಕ್ಕೆ ಹಣ ಕಡಿತಗೊಳಿಸಿದೆ. ಇದರ ನೇರ ಪರಿಣಾಮವಾಗಿ ಶಿಕ್ಷಣ ಶುಲ್ಕಗಳ ಏರಿಕೆ ಪಾವತಿ ಶುಲ್ಕ ಆದಾರಿತ ಪ್ರವೇಶ ಮುಂತಾದ ನೀತಿಗಳು ಜಾರಿಯಾಗುತ್ತಿದೆ ಎನ್ನುತ್ತಾ ವಿದ್ಯಾರ್ಥಿಗಳು ಇದನ್ನು ತೀವ್ರವಾಗಿ ಪ್ರತಿಭಟಿಸಬೇಕೆಂದು ಕರೆ ನೀಡಿದರು. ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷ ಆರ್. ರಾಮಕೃಷ್ಣ ಮಾತನಾಡಿದರು.

ಮತ್ತೊಬ್ಬ ಉಪಾಧ್ಯಕ್ಷರಾದ ಟಿ.ಎಲ್. ಕೃಷ್ಣೇಗೌಡ, ರಾಜ್ಯ ಸಮಿತಿ ಸದಸ್ಯರುಗಳಾದ ಅರುಣ್ ಕುಮಾರ್ ಲಿಂಗರಾಜು ಎಸ್.ಎಫ್.ಐ. ಮೈಸೂರು ಜಿಲ್ಲಾ ಸಂಚಾಲಕರಾದ ರಾಜು, ಶ್ರೀನಿವಾಸ್, ಹಾಸನ ಸಂಚಾಲಕರಾದ ಎನ್.ಆರ್. ಪ್ರಕಾಶ್ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ವಿಶ್ವ ವಿದ್ಯಾಲಯದ ಪರವಾಗಿ ರಿಜಿಸ್ಟ್ರಾರ್ ಶ್ರೀ ತಲ್ವಾರ್‌ರವರು ಮನವಿ ಪತ್ರ ಸ್ವೀಕರಿಸಿದರು ಅಕ್ಟೋಬರ್ 20 ರವರೆಗೆ ವಿಶ್ವ ವಿದ್ಯಾಲಯವು ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಗಡುವು ನೀಡಲಾಗಿದ್ದು, ಈ ನೀತಿ ವಾಪಸ್ಸಾಗದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಲಾಗಿದೆ.

ವಿದ್ಯಾರ್ಥಿ ಸಂಘದ ಚುನಾವಣೆ ಎಸ್.ಎಫ್.ಐ. ವಿಜಯ

ಸೆಪ್ಟೆಂಬರ್ 29 ರಂದು ಕೆ.ಜಿ. ಎಫ್. ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ. ಬೆಂಬಲಿತ ವಿದ್ಯಾರ್ಥಿ ತಂಡ ಜಯಗಳಿಸಿದೆ.

ಪ್ರಧಾನ ಕಾರ್ಯದರ್ಶಿ ಪಿ. ತಂಗರಾಜ್, ಉಪಾಧ್ಯಕ್ಷರು ಎಂ.ಪಳಿನಿ, ಸಹಕಾರ್ಯದರ್ಶಿ ಈ ಉದಯ ಕುಮಾರ್ ಹಾಗೂ ಕೆ. ಜಯಂತಿ ಜಯಗಳಿಸಿದರು. ಎಸ್.ಎಫ್.ಐ. ನೇತೃತ್ವದಲ್ಲಿ ಹಿಂದಿನಿಂದಲೂ ನಿರಂತರವಾಗಿ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿದ್ದೆ ಗೆಲುವಿಗೆ ಕಾರಣವೆಂಬುದು ಗಮನಾರ್ಹ.

ಬೆಳೆಹಾನಿಯಾದವರಿಗೆ ಪರಿಹಾರಕ್ಕೆ ಒತ್ತಾಯ

ದ.ಕ.ಜಿಲ್ಲೆಯ ರೈತರ ಬೆಳೆ ಕೊಯಿಲಿನ ಸಮಯಕ್ಕೆ ವಿಪರೀತ ಮಳೆಯಿಂದಾಗಿ ನೀರಿನಲ್ಲಿ ಕೊಚ್ಚಿಕೊಳೆತು ಹೋಗಿರುತ್ತದೆ. ಮತ್ತು ಅಡಿಕೆ ತೋಟಕ್ಕೂ ಕೊಳೆರೋಗ ಹರಡಿರುವುದರಿಂದ ಈ ಜಿಲ್ಲೆಯ ರೈತರು ಬಹಳ ಕಂಗಾಲಾಗಿದ್ದಾರೆ ಆದ್ದರಿಂದ ನಷ್ಟವಾದ ರೈತರಿಗೆ ಸರಕಾರ ಪರಿಹಾರ ಕೊಡಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ಮಂಜನಾಡಿ ಸಮ್ಮೇಳನದಲ್ಲಿ ಒತ್ತಾಯಿಸಿದೆ.

ತಾಲೂಕು ರೈತಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಸಮ್ಮೇಳನ ಉದ್ಘಾಟಿಸಿದರು. ಮಾಧವ ಕೋಡಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಮ್ಮೇಳನದಲ್ಲಿ ತಾಲೂಕು ಪಂಚಾಯತ್ ಸದಸ್ಯೆ ಇಂದಿರಾ ಟಿ. ವಾಸು, ಮಾಜಿ ಪಂಚಾಯತ್ ಸದಸ್ಯೆ ಚಂದ್ರಾವತಿಯುವರು ಭಾಗವಹಿಸಿದರು. ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು.

ಮಂಜನಾಡಿಗ್ರಾಮದಲ್ಲಿ 94 ರ ಸಾಲಿನಲ್ಲಿ ಅಂಬೇಡ್ಕರ್ ಯೋಜನೆಯಡಿಯಲ್ಲಿ 14 ಜನರಿಗೆ ಮನೆ ವಂಚಿತರಾದವರಿಗೆ ಸರಕಾರ ಕೂಡಲೇ ಮನೆ ಮಂಜೂರು ಮಾಡಬೇಕು.

ಮಂಜನಾಡಿಮಲಿಯಲ್ಲಿ ಕಾಲುಸೇತುವೆ ಮತ್ತು ಕಿಂಡಿ ಅಣೆಕಟ್ಟು ಬಹಳ ಅಗತ್ಯವಿದ್ದು ಸರಕಾರ ಕೂಡಲೇ ಮಂಜೂರು ಮಾಡಬೇಕು. ಕಲ್ಕಟದಿಂದ ಪದೋಳಿ ಕಟ್ಟೆಗೆ ಕಾಲುದಾರಿ ಮತ್ತು ಉರ್ಮನ್ ಕ್ರಾಸ್‌ನಿಂದ ಪದೋಳಿಕಟ್ಟೆಯವರೆಗೆ ಮಾರ್ಗಕ್ಕೆ ಡಾಂಬರಿಕರಣ ಆಗಬೇಕು. ನಾಟೆಕಲ್‌ನಿಂದ ಕಲ್ಕಟಕ್ಕೆ ನೀರು ಸರಬರಾಜು ಆಗಬೇಕು, ಮಾಂಟೆಪದವು ನಿಂದ ಕೋಡಿಪಂಭದರ ಹಿತ್ಲು ರಸ್ತೆ ರಿಪೇರಿ ಆಗಬೇಕು. ಕೃಷಿ ಕಾರ್ಮಿಕರಿಗೆ ವೃದ್ಧಾಪ್ಯ ಪೆನ್ಶನ್ ಸಿಗಬೇಕು. ಮಂಜುನಾಡಿಗ್ರಾಮಕ್ಕೆ ಹಿಂದು ಸ್ಮಶಾನದ ಅಗತ್ಯವಿದ್ದು, ಸರಕಾರ ಮಂಜೂರು ಮಾಡಬೇಕು. ರೈತ ಕಾರ್ಮಿಕರು ಅಕ್ರಮ ಮಾಡಿದ ಭೂಮಿ ಯನ್ನು ಸಕ್ರಮ ಮಾಡಬೇಕೆಂದು ಒತ್ತಾಯಿಸಿದೆ.

ಪದಾಧಿಕಾರಿಗಳು: ಮಾದವ ಕೋಡಿ ಅಧ್ಯಕ್ಷ, ಶಂಭು ಸಪಲ್ಯ ಉಪಾಧ್ಯಕ್ಷ, ವಿಶ್ವನಾಥ ಕಾರ್ಯದರ್ಶಿ, ನಾರಾಯಣ ಜಂಟಿ ಕಾರ್ಯದರ್ಶಿ, ಕರ್ನೈಕ್ಸ್ಟರ ಖಜಾಂಚಿಯಾಗಿ ಆಯ್ಕೆಯಾದರು.

ಡಿಸೆಂಬರ್ 10-11 ರ ಮುಷ್ಕರಕ್ಕೆ ಭರದ ಸಿದ್ಧತೆ

ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ನಿರ್ಧಾರ

ಡಿಸೆಂಬರ್ 10 ಹಾಗೂ 11 ರಂದು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಮುಷ್ಕರವನ್ನು ಯಶಸ್ವಿಗೊಳಿಸಲು ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಜೆ.ಎ.ಎಫ್. ನಿರ್ಧರಿಸಿದೆ. ಬೆಂಗಳೂರಿನಲ್ಲಿ ನವೆಂಬರ್ 4 ರಂದು ನಡೆದ ಸಮಾವೇಶ ಈ ಕಾರ್ಯಾಚರಣೆಗೆ ಸಿದ್ಧತೆಯಾಗಿ ಮೂರಂಶಗಳ ಕಾರ್ಯಕ್ರಮವನ್ನು ರೂಪಿಸಿ ಕಾರ್ಮಿಕರ ಮುಂದಿಟ್ಟಿದೆ.

ಸುಮಾರು 800 ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮಾವೇಶವನ್ನು ಹಿರಿಯ ಕಾರ್ಮಿಕ ಮುಖಂಡರಾದ ಮೈಕೆಲ್ ಫರ್ನಾಂಡೀಸ್, ಎಸ್.ಸೂರ್ಯ ನಾರಾಯಣ ರಾವ್, ಜಿ.ನಾಗರಾಜ್ ಹಾಗೂ ಎ.ಹ್ಯಾರಿ ಜೋಸೆಫ್ ರವರಿದ್ದ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟಿತು. ವಿಶೇಷ ಆಹ್ವಾನಿತ ರಾಗಿದ್ದ ಸಂಸತ್ ಸದಸ್ಯ ಜೀಬನ್ ರಾಯ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.

ಸಮಾವೇಶದಲ್ಲಿ ಮಂಡಿಸಿದ ಹಿನ್ನೆಲೆ ಪ್ರಬಂಧ ದೇಶದಲ್ಲಿ ಸಾರ್ವಜನಿಕ ವಲಯವನ್ನು ಅಳಿಸಿಹಾಕುವ ಪಿತೂರಿಯನ್ನು ಬಯಲಿಗೆಳೆಯಲಾಗಿತ್ತು. ಅಂಕೆ-ಸಂಖ್ಯೆಯುಗಳ ಮೂಲಕ ಸಾರ್ವಜನಿಕ ವಲಯ ಎಂದರೆ ನಷ್ಟ, ಖಾಸಗೀ ವಲಯವೆಂದರೆ ದಕ್ಷತೆಯ ಗಣಿಗಳೆಂಬ ಅಪಪ್ರಚಾರವನ್ನು ಈ ಪ್ರಬಂಧ ಖಂಡಿಸಿತು.

ಕಳೆದ ಸುಮಾರು ಹತ್ತು ವರ್ಷಗಳಲ್ಲಿ ಬಂದ ಸರಕಾರಗಳೆಲ್ಲಾ ಸಾರ್ವಜನಿಕ ವಲಯ ಬದುಕುಳಿಯುವುದನ್ನು ಹೆಚ್ಚೆಚ್ಚು ದುಸ್ತರಗೊಳಿಸುತ್ತಾ ಬಂದಿದ್ದಾರೆ. ಈಗಿನ ಸರಕಾರ ಈ ಧಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಆದ್ದರಿಂದ ಸಾರ್ವಜನಿಕ ವಲಯ ಕಾರ್ಮಿಕರು ಐ.ಎಂ.ಎಫ್.-ವಿಶ್ವಬ್ಯಾಂಕ್ ಪ್ರಾಯೋಜಿತ ಧಾಳಿಗಳಿಂದ ಸಾರ್ವಜನಿಕ ವಲಯವನ್ನು ಉಳಿಸಲು ಒಂದು ಬಲಿಷ್ಟ ಐಕ್ಯ ಚಳುವಳಿ ನಡೆಸಬೇಕಾಗಿದೆ ಎಂದಿರುವ ಈ ಸಮಾವೇಶದ ಘೋಷಣೆ ದೇಶಹಿತದ ಈ ಹೋರಾಟದಲ್ಲಿ ಎಲ್ಲಾ ಶ್ರಮಜೀವಿಗಳನ್ನು, ದೇಶಪ್ರೇಮಿ ಜನರನ್ನು ಅಣಿನೆರೆಸಲು ಕರೆ ನೀಡಿದೆ.

ಡಿಸೆಂಬರ್ 10 ಹಾಗೂ 11 ರ ದೇಶವ್ಯಾಪಿ ಸಾರ್ವಜನಿಕ ವಲಯದ ಮುಷ್ಕರವನ್ನು ಯಶಸ್ವಿಗೊಳಿಸಲು ಸಮಾವೇಶ ರೂಪಿಸಿದ ಸಿದ್ಧತಾ ಕಾರ್ಯಕ್ರಮ ಹೀಗಿದೆ -

- ನವೆಂಬರ್ ತಿಂಗಳಲ್ಲಿ ಮಾನವ ಸರಪಳಿ
- ನವೆಂಬರ್ 25 ರಂದು ಎಲ್ಲಾ ಕಾರ್ಮಿಕ ಸಂಘಗಳು ಜಂಟಿಯಾಗಿ ಮುಷ್ಕರದ ನೋಟಿಸು ನೀಡುವುದು.
- ಡಿಸೆಂಬರ್ 3 ರಂದು ದೇಶವ್ಯಾಪಿ ಕ್ಯಾಂಟೀನ್ ಬಹಿಷ್ಕಾರ.

ಬೆಂಗಳೂರಿನ ಸಾರ್ವಜನಿಕ ವಲಯ ಉದ್ದಿಮೆಗಳ ಎಲ್ಲಾ ನೌಕರರು ಅವರು ಯಾವುದೇ ಸಂಘಟನೆಗೆ ಸೇರಿದ್ದರೂ ಈ ಬೃಹತ್ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕು ಎಂದು ಜೆ.ಎ.ಎಫ್. ಮನವಿ ಮಾಡಿದೆ.

ಅಡ್ವಾಣಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಒಂದಾದರೂ ಉದಾಹರಣೆ ನೀಡಬಲ್ಲರೇ?

ಸಿಪಿಐ(ಎಂ) ಪೊಲಿಟ್‌ಬ್ಯೂರೋ

ಅಕ್ಟೋಬರ್ 31 ರಂದು ಗುಲ್ಬರ್ಗದಲ್ಲಿ ಸರ್ದಾರ್ ಪಟೇಲ್‌ರವರ ಪ್ರತಿಮೆಯ ಅನಾವರಣ ಮಾಡುತ್ತಾ ಕೇಂದ್ರ ಗೃಹಮಂತ್ರಿ ಎಲ್.ಕೆ.ಅಡ್ವಾಣಿಯವರು 1942 ರ ಆಂದೋಲನ ಹಾಗೂ 1962 ರಲ್ಲಿ ಭಾರತ-ಚೀನಾ ಘರ್ಷಣೆಯ ಕುರಿತು ಕಮ್ಯುನಿಸ್ಟರ ನಿಲುವಿಗೆ ಸಂಬಂಧಪಟ್ಟಂತೆ ಮಿಥ್ಯಾಪವಾದ ಹೊರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಶ್ರೀಯುತ ಅಡ್ವಾಣಿಯವರು ಸ್ವಾತಂತ್ರ್ಯ ಹೋರಾಟದ ಅಧ್ಯಯನ ಮಾಡಬೇಕಾಗಿದೆ. ಏಕೆಂದರೆ 1922 ರಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಪ್ರಶ್ನೆಯನ್ನು ಮೊದಲಿಗೆ ಎತ್ತಿದವರು ಕಮ್ಯುನಿಸ್ಟರು, ಅದಕ್ಕಾಗಿ ಅವರು ಅಪಾರ ತ್ಯಾಗ-ಬಲಿದಾನಗಳನ್ನು ನೀಡಿದ್ದಾರೆ. ಇಂತಹ ತ್ಯಾಗ ಬಲಿದಾನಗಳಿಂದಾಗಿಯೇ ಗದ್ದರ್ ಆಂದೋಲನ, ಭಗತ್‌ಸಿಂಗ್‌ರವರ ಹಿಂದೂಸ್ತಾನ್ ರಿಪಬ್ಲಿಕ್ ಆರ್ಮಿಯ, ಬಂಗಾಳದ ಅನುಶೀಲನ್ ಅಥವಾ ಜುಗಾಂತರ್ ಗುಂಪುಗಳ ಕ್ರಾಂತಿಕಾರಿಗಳು ಕಮ್ಯುನಿಸ್ಟ್ ಪಕ್ಷ ಸೇರಿದರು.

1942 ರಲ್ಲಿ ರಾಷ್ಟ್ರೀಯ ರಕ್ಷಣೆಗೆ ರಾಷ್ಟ್ರೀಯ ಸರಕಾರದ ಬೇಡಿಕೆ ಎದ್ದಾಗ ಕಮ್ಯುನಿಸ್ಟರು ಫ್ಯಾಸಿಸಂ ವಿರುದ್ಧ ಹೋರಾಟಕ್ಕೆ ನಮ್ಮ ದೇಶದ ಕಾಣಿಕೆ ನೀಡುವ ಅಗತ್ಯವನ್ನು ಪ್ರತಿಪಾದಿಸಿದವರು ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆರ್.ಎಸ್.ಎಸ್. ಬಹುಶಃ ಅದೇ ಫ್ಯಾಸಿಸಂನಿಂದಲೇ ಸ್ಫೂರ್ತಿ ಪಡೆಯುತ್ತಿದೆ ಎಂದು ಟೀಕಿಸಿದೆ.

1962 ರಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ ಧಾಳಿ ಮಾಡಿದ್ದು ಚೀಣಿಯರು ತಮ್ಮ ಸೇನಾಪಡೆಗಳನ್ನು ಹಿಂತೆಗೆದುಕೊಂಡ ನಂತರ ಭಾರತ-ಚೀಣಾ ವಿವಾದವನ್ನು ಶಾಂತಿಯುತ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಪ್ರತಿಪಾದಿಸಿದ್ದಕ್ಕಾಗಿ ಎಂಬುದನ್ನು ಪೊಲಿಟ್‌ಬ್ಯೂರೋ ನೆನಪಿಸಿದೆ.

ಅಡ್ವಾಣಿಯವರ ಬಿಜೆಪಿ ಎಂದೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಈಗ ಬಿಜೆಪಿ ಅಥವಾ ಹಿಂದಿನ ಜನಸಂಘದಲ್ಲಿದ್ದವರು ಆರೆಸ್ಸೆಸ್ಸಿಗರು ರಾಜ-ಮಹಾರಾಜರುಗಳ ಬೆಂಬಲಕ್ಕೆ ನಿಂತಿದ್ದರು. ರಾಜ-ಮಹಾರಾಜರು ಮುಸ್ಲಿಮರಾಗಿದ್ದಲ್ಲಿ ಮಾತ್ರ ಅವರು ವಿರೋಧವಾಗಿದ್ದರು. ಇವರಲ್ಲಿ ಯಾರಾದರೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಯಾವುದೇ ತ್ಯಾಗ ಮಾಡಿದ ಒಂದಾದರೂ ಚಾರಿತ್ರಿಕ ಅಂಶವನ್ನು ಅಡ್ವಾಣಿಯವರು ನೀಡಲಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸವಾಲು ಹಾಕಿದೆ.

ಕಮ್ಯುನಿಸ್ಟ್ ಪಕ್ಷ ಸ್ವಾತಂತ್ರ್ಯಕ್ಕಾಗಿ ತಮ್ಮ ಸಂಪೂರ್ಣ ಜೀವನವನ್ನೇ ಸಮರ್ಪಿಸಿದ ಅಮೂಲ್ಯ ಹುತಾತ್ಮರನ್ನು, ಕಾರ್ಯಕರ್ತರನ್ನು ತಯಾರಿಸಿ ಕೊಟ್ಟಿತು. ಇತಿಹಾಸವನ್ನು ತಿರುಚಿ ಇಂತಹ ಕಮ್ಯುನಿಸ್ಟ್ ಪಕ್ಷದ ಕೀರ್ತಿಗೆ ಮಸಿ ಬಳಿಯುವುದು ಯಾರಿಂದಲೂ ಸಾಧ್ಯವಿಲ್ಲ. ಸ್ವಾತಂತ್ರ್ಯದ ನಂತರ ಕಮ್ಯುನಿಸ್ಟ್ ಪಕ್ಷ ಕಾರ್ಮಿಕ ವರ್ಗ, ರೈತಾಪಿ ಜನಗಳು ಹಾಗೂ ಕೋಟ್ಯಾಂತರ ಶ್ರಮಜೀವಿಗಳ ಹಿತರಕ್ಷಣೆಗಾಗಿ, ಸಾಮಾಜಿಕ ಪರಿವರ್ತನೆಗಾಗಿ ಎಡ ಮತ್ತು ಪಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸಲು ಹೋರಾಡುತ್ತಿದೆ. ಆದ್ದರಿಂದ ಶ್ರೀಯುತ ಅಡ್ವಾಣಿ ಮತ್ತು ಬಿಜೆಪಿ ದುಷ್ಟ ಆಟದಲ್ಲಿ ಯಶಸ್ವಿಯಾಗುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಚ್ಚರಿಸಿದೆ.

ಪ್ರತಿಮೆ ವಿವಾದ ....

ಪುಟ 5 ರಿಂದ

ಮಾದರಿಯನ್ನು ಹೊರಗಿಟ್ಟಿದೆ.

ಅಡ್ವಾನಿಯವರ ವಿರುದ್ಧ ಪ್ರತಿಭಟನೆ ಏಕೆ?

ವಿಲೀನದ ಕಾರ್ಯಕ್ರಮವನ್ನು ಕೋಮು ರಾಜಕೀಯಕ್ಕೆ ಬಳಸುವ ಬಿಜೆಪಿ ವಿರುದ್ಧ ಸರ್ದಾರ ಪಟೇಲರಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರ, ದಿಟ್ಟ ಆಡಳಿತಗಾರ ಮತ್ತು ಅದಕ್ಕೂ ಮಿಗಿಲಾಗಿ ಒಬ್ಬ ನಿಷ್ಠಾವಂತ ಉನ್ನತ ಧರ್ಮ ನಿರಪೇಕ್ಷ ನೇತಾರರ ಪ್ರತಿಮೆ ಅನಾವರಣದ ಸುವರ್ಣ ಸಂದರ್ಭವನ್ನು ಬಿಜೆಪಿಯು ತನ್ನ ರಾಜಕೀಯಕ್ಕೆ ಬಳಸುತ್ತಿದೆ. ಪಟೇಲರ ವ್ಯಕ್ತಿತ್ವಕ್ಕೆ ಅತಿರಿಕ್ತವಾಗಿ ಅವರನ್ನು ಒಬ್ಬ ಕೋಮಿನ ನೇತಾರನಾಗಿ ಬಿಜೆಪಿಯು ಬಿಂಬಿಸುತ್ತಿರುವುದು ಖೇದದ ಸಂಗತಿಯಾಗಿದೆ.

ನಿಜಾಮ ಶಾಹಿಯ ಜಮಿನ್ದಾರಿ ದಬ್ಬಾಳಿಕೆ ವಿರುದ್ದದ ಮತ್ತು ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ಭಾರತ ಸಂಸ್ಥಾನದಲ್ಲಿ ವಿಲೀನಗೊಳಿಸುವ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ಪ್ರಾಣವನ್ನೇ ಕಳೆದು ಕೊಂಡವರಲ್ಲಿ ಕಮ್ಯುನಿಷ್ಟರು ಪ್ರಮುಖರು. ಅವರೊಡನೆ ಕಾಂಗ್ರೆಸ್ ಮತ್ತು ಆರ್ಯಸಮಾಜ ಸಂಘಟನೆಗಳು ಆ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಆ ಸಮಯದಲ್ಲಿ ಅಸ್ತಿತ್ವದಲ್ಲೇ ಇರದ ಬಿಜೆಪಿಯು ಮತ್ತು ಇನ್ನೂ ವಿಸ್ಮಯಕಾರಿ ವಿಷಯವೆಂದರೆ ಬಿಜೆಪಿಯ ಮಾತೃಸಂಸ್ಥೆಯಾದ ಆರ್.ಎಸ್.ಎಸ್. ಸಂಘಟನೆಯು ಜನಾಗಢ, ಬರೋಡಾ, ಕಾಶ್ಮೀರ, ಮೈಸೂರು ಮತ್ತು ಗ್ವಾಲಿಯರ್ ಸಂಸ್ಥಾನಗಳು ಭಾರತದಲ್ಲಿ ವಿಲೀನಗೊಳ್ಳಲು ವಿರೋಧಿಸಿತ್ತು.

ಸ್ವತಂತ್ರ ಭಾರತದ ಇತ್ತೀಚಿನ ಇತಿಹಾಸದಲ್ಲಿ ಬಾಬ್ರಿ ಮಸೀದಿಯ ಧ್ವಂಸದಲ್ಲಿ ಭಾಗವಹಿಸಿ ದೇಶಾದ್ಯಂತ ಕೋಮು ದಳ್ಳುರಿಗೆ ಕಾರಣ ಕರ್ತರಾದಂತಹ ಆಪಾದನೆಗೊಳಗಾಗಿರುವ ಶ್ರೀ ಲಾಲ ಕೃಷ್ಣ ಅದ್ವಾನಿಯವರು ಮತ್ತು ಹೈದ್ರಾಬಾದ ಕರ್ನಾಟಕವನ್ನು ಭಾರತದಲ್ಲಿ ವಿಲೀನಗೊಳಿಸುವ ಹೋರಾಟದ ಸಮಯದಲ್ಲಿ ಅಸ್ತಿತ್ವದಲ್ಲಿರದ ಬಿಜೆಪಿಯ ಒಬ್ಬ ನೇತಾರನಿಂದ ಸರದಾರ ಪಟೇಲರ ಪ್ರತಿಮೆ ಅನಾವರಣವನ್ನು ಕಲ್ಬುರ್ಗಿಯ ಬುದ್ಧಿಜೀವಿಗಳು, ಪ್ರಗತಿಪರರು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಬಲವಾಗಿ ವಿರೋಧಿಸಿದರು.

ರೈತರ ಸಂಕಷ್ಟಕ್ಕೆ ಬಾರದ ಬಿಜೆಪಿಗೆ ಧಿಕ್ಕಾರ: ಹೈದ್ರಬಾದ ಕರ್ನಾಟಕದಲ್ಲಿ ಇತ್ತೀಚೆಗೆ ಬಂದ ಭಾರಿ ಮಳೆಯಿಂದಾಗಿ ಇಲ್ಲಿನ ರೈತರ ಕೃಷಿಯು ಸರ್ವನಾಶವಾಗಿದೆ. ಅವರ ಜೀವನವು ಅತ್ಯಂತ ಹೀನಾಯ ಮಾನವಾಗಿದೆ. ಅವನ್ನೂ ಕೇಳುವವರು ಯಾರೂ ಇಲ್ಲದಂತಾಗಿದೆ. ಪಕ್ಕದ ಆಂಧ್ರಕ್ಕೆ ಬಿಜೆಪಿ ಪ್ರಧಾನಿ ವಾಜಪೇಯಿಯವರು ಬಂದು ವಿಮಾನ ಸಮೀಕ್ಷೆ ನಡೆಸಿ ಸ್ಥಳದಲ್ಲಿಯೇ ರೂ.200 ಕೋಟಿ ಮಂಜೂರು ಮಾಡಿದರು. ಆದರೆ ಗುಲಬರ್ಗಾ ಜಿಲ್ಲೆಯನ್ನು ಪ್ರತಿನಿಧಿಸಿರುವ ಸಂಸದ ಬಸವರಾಜ ಪಾಟೀಲರು ವಾಜಪೇಯಿಯವರನ್ನು ಗುಲಬಾರ್ಗಾಕ್ಕೆ ಕರೆದು ತರುವದು ಆಗಲಿಲ್ಲ ಮತ್ತು ಇದುವರೆಗೂ ಜಿಲ್ಲೆಯ ರೈತರಿಗೆ ಒಂದು ಪೈಸೆ ಪರಿಹಾರಕೊಡಿಸುವುದು ಆಗಿಲ್ಲ.

ಬನ್ನಿ ಧಾವಿಸಿ..............

ಪುಟ 10ರಿಂದ

ಈ ಬೆಂಕಿ ಒಂದಾಗಿದ್ದ ಯುಗೋಸ್ಲಾವಿಯಾವನ್ನು ದಹಿಸಿ ಬೊಸ್ನಿಯಾ ಸರ್ಬಿಯಗಳಿಗೆ ಬೆಂಕಿ ಹಚ್ಚಿದೆ. ಆಫ್ಘಾನಿಸ್ತಾನವನ್ನು ಕೊತಕೊತನೆ ಕುದಿಸುತ್ತಿದೆ, ಅಲ್ಜೀರಿಯವನ್ನು ಕಾಡುತ್ತಿದೆ. ಅಂತಹ ಕಾಡುಕಿಚ್ಚಾಗಿ ಭಾರತವನ್ನು ಮತ್ತೆ ಸುಡಬೇಕೆ? ಈ ಬೆಂಕಿ ಮತ್ತೆ ಬೃಹದಾಕಾರ ವಾಗಿ ಬೆಳೆದು ದೇಶವನ್ನು ಮತ್ತೊಮ್ಮೆ ಒಡೆಯುವ ವರೆಗೂ ಕಾಯಬೇಕೆ? ಅಥವಾ ಈಗಲೇ ಎಚ್ಚರಾಗಬೇಕೆ? ಇದು ನಮ್ಮ ದೇಶದ ಭವಿಷ್ಯ ಕೇಳುತ್ತಿರುವ ಸವಾಲು, ನಮ್ಮ ನಿಮ್ಮೆಲ್ಲರ ಬದುಕಿನ ಸವಾಲು.

ಈ ಸವಾಲನ್ನು ಭಾರತದ ಜನತೆ 91 ರಿಂದ ಇಲ್ಲಿಯವರೆಗೆ ಅಂಶಿಕವಾಗಿ ಎದುರಿಸಿದ್ದಾರೆ. ಮತ್ತೆ ಮತ್ತೇ ಹೋರಾಡಿ ನಿರಾಶರಾಗಿದ್ದಾರೆ. ಮತ್ತಷ್ಟು ಒಗ್ಗಟ್ಟಾಗಿ ಮತ್ತೆ ಕಾದಾಟ ನಡೆಸಿದ್ದಾರೆ. ಎಲ್ಲರೂ ಕೂಡಿ ಎಲ್ಲರ ಬದುಕಿಗೂ ಮೃತ್ಯುವಾಗುತ್ತಿರುವ ಈ ಸವಾಲನ್ನೆದುರಿಸಬೇಕು. ಇಂಡೊನೇಷ್ಯಾದ ಜನತೆ, ದ.ಕೊರಿಯದ ಕಾರ್ಮಿಕರು, ಬ್ರೆಜಿಲ್‌ನ ಕೂಲಿಕಾರರು ಇಂದು ಈ ಸವಾಲನ್ನು ಎದುರಿಸಿ ಕೆಲವೊಮ್ಮೆ ಕೆಲವಂಶ ಜಯಶೀಲರಾದಂತೆ ನಾವು ಒಟ್ಟಾಗಿ ಒಗಟ್ಟಾಗಿ ಎದ್ದು ನಿಲ್ಲಬೇಕು.

ಕರ್ನಾಟಕದ ನಾವೆಲ್ಲರು ಎಚ್ಚರಾಗುತ್ತಿದ್ದೇವೆ ಎಂದು ಸಾರಬೇಕು, ಕಾರ್ಮಿಕರು ರೈತರು ಕೂಲಿಕಾರರು ಮಹಿಳೆಯರು ವಿದ್ಯಾರ್ಥಿಗಳು ಯುವಕರು ಎಲ್ಲರೂ ಕೈಗೂಡಿಸಿ ನಡೆಯಬೇಕು. ಹೋರಾಡಬೇಕೆಂಬ ಛಲ ಹೊತ್ತು ನಡೆಯಬೇಕು.

ಕರ್ನಾಟಕದ ಎಲ್ಲ ಜನರಲ್ಲಿ ಹೋರಾಟ[illegible] ಛಲ ಮೂಡಿಸಲು, ಹೊರಹೊಮ್ಮಿಸಲು[illegible] ಬೆಂಗಳೂರಿಗೆ ಬರ ಬೇಕು. ಹೋರಾ[illegible] ಬಸವಳಿದ ನಮಗೆ ನಾವೇ ಹೋರಾಟ[illegible] ಕಿಚ್ಚು ಕಿಚ್ಚು ತುಂಬಿಕೊಳ್ಳಲು 'ಬೆಂಗಳೂರು ಚಲೋ' ದಲ್ಲಿ ಸಾಗಬೇಕು.

ಅವರಿವರು ಹಿಂದುಳಿತ್ತಿದ್ದಾರೆಂದು[illegible] ನಾವು ಹಿಂದುಳಿಯದೆ ಮುಂ[illegible] ನುಗ್ಗಬೇಕು. ನಮ್ಮ ಉತ್ಸಾಹ ಸ್ಫೂರ್ತಿಗ[illegible] ಸಾಂಕ್ರಾಮಿಕವಾಗಿ ಹಬ್ಬುವಂತೆ ಜನರ[illegible] ಪ್ರಭಾವಿಸುವಂತೆ ಕೆಲಸ ಮಾಡಬೇಕು[illegible] ನಮ್ಮ ಜೊತೆಗೆ ಸೇರಿರುವ ಎಲ್ಲರನ್ನು[illegible] ಕೂಡಿಸಿಕೊಳ್ಳಲು ಶ್ರಮಿಸಬೇಕು. ನಮ್ಮ ಜೊತೆಗೆ ಇನ್ನೂ ಸೇರಬೇಕಾದವರನ್ನು ಸೆಳೆದುಕೊಳ್ಳಲು ಇನ್ನೂ ಹೆಚ್ಚು ಶ್ರಮಿಸಬೇಕು.

ಈ ಚಲೋ, ಈ ಮುಷ್ಕರವನ್ನು ಯಶಸ್ವಿಗೊಳಿಸುವ ಮೂಲಕ ಭಾರತದ ಜನರೆಲ್ಲರೊಟ್ಟಿಗೆ ಸಾಗಬೇಕು. ವಿಶ್ವದೆಲ್ಲಾ ದುಡಿವ ಜನರೊಂದಿಗೆ ಛಲದಿಂದ ಹೋರಾಡುವ ಕನಸನ್ನು ನನಸಾಗಿಸುವತ್ತ ನಡೆಯಬೇಕು.

ಸುತ್ತಮುತ್ತೆಲ್ಲಾ ಬೆಂಕಿ ಬಿದ್ದಿದೆ
ದಹದಹಿಸುತ್ತಿವೆ ದೇಶ ದೇಶಗಳು
ಸುಡುತ್ತಿವೆ ಕೋಟಿಕೋಟಿ ಜನರ ಬದುಕು
ಹೊತ್ತಿಕೊಳ್ಳುವ ಮೊದಲೇ ನಮ್ಮ ಮನೆ
ಸುಟ್ಟು ಕರಕಾಗುವ ಮೊದಲೇ
ನಮ್ಮ ಬದುಕು
ಎಚ್ಚರಾಗೋಣ ಬನ್ನಿ
ಬನ್ನಿ ಬೆಂಗಳೂರಿಗೆ
ನವೆಂಬರ್ 16 ಕ್ಕೆ

ಅಡ್ವಾಣಿ ಹಿಂದೆ ತೊಲಗು.......

ಪುಟ 5 ರಿಂದ

ಆದರೂ ಹೆದರದ ಕಾರ್ಯಕರ್ತರು ಘೋಷಣೆ ಕೂಗಿಯೇ ಕೂಗಿದರು. ಸಂಘ ಪರಿವಾರದವರು ಕಲ್ಲುಗಳನ್ನು ಸಿಪಿಎಂ ಕಾರ್ಯಕರ್ತರತ್ತ ತೂರಲಾರಂಭಿಸಿದರು. ಲಾಠಿ ಏಟಿನ ಪೆಟ್ಟಿನ ಜೊತೆಗೆ ಕಲ್ಲೇಟಿನಿಂದ ಹಲವರು ಗಾಯಗೊಂಡರು.

ಅಡ್ವಾಣಿ ತಮ್ಮ ಭಾಷಣದಲ್ಲಿ ತಮ್ಮ ಅಸಹನೆ ವ್ಯಕ್ತಪಡಿಸಿದರು. ಕಮ್ಯುನಿಸ್ಟ್ ಪಕ್ಷಗಳ ಇತಿಹಾಸವನ್ನು ತಿರುಚಿ ಸಿಪಿಐ, ಸಿಪಿಎಂಗೆ ಇರುವ ಬೇಧ ಗೊತ್ತಿಲ್ಲದವರಂತೆ ಜನರನ್ನು ತಪ್ಪು ದಾರಿಗೆಳೆದರು. ಕಮ್ಯುನಿಸ್ಟ್ ಪಕ್ಷ ಪಾಕಿಸ್ತಾನವನ್ನು, ಬೆಂಬಲಿಸಿತು. ಸ್ವಾತಂತ್ರ್ಯಕ್ಕಾಗಿ ಕಮ್ಯುನಿಸ್ಟ್ ಪಕ್ಷಗಳು ಹೋರಾಡಲಿಲ್ಲ, ತರ್ತುಪರಿಸ್ಥಿತಿಯಲ್ಲಿ ಸಿಪಿಎಂ ಇಂದಿರಾಗಾಂಧಿಯನ್ನು ಬೆಂಬಲಿಸಿವೆ ಎಂದೆಲ್ಲಾ ಟೀಕಿಸಿದರು.


'ಕೈಲಾಗದೆ ಮೈಪರಚಿಕೊಂಡ' ಅಡ್ವಾಣಿಯವರ ಹೇಳಿಕೆಯನ್ನು ಸಿಪಿಎಂ ಪೊಲಿಟ್‌ಬ್ಯೂರೋ ಖಂಡಿಸಿದೆ. ಕಮ್ಯುನಿಸ್ಟ್ ಪಕ್ಷದ ಘನತೆಯನ್ನು ಕುಗ್ಗಿಸುವುದಕ್ಕಾಗಿ ಚರಿತ್ರೆಯನ್ನು ತಿರುಚಲು ಅಡ್ವಾಣಿ ಹೊರಟಿದ್ದಾರೆ, ಇದನ್ನು ಸಿಪಿಎಂ ಸಹಿಸುವುದಿಲ್ಲ ಎಂದು ಹೇಳಿಕೆ ನೀಡಿದೆ. *(ಈ ಪುಟದಲ್ಲಿ ಪೊಲಿಟ್‌ಬ್ಯೂರೋ ಹೇಳಿಕೆಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.)*

ಪಶ್ಚಿಮ ಬಂಗಾಳದಲ್ಲಿಯೂ ಅಡ್ವಾಣಿಯವರ ಹೇಳಿಕೆಯನ್ನು ಕಟುವಾಗಿ ಟೀಕಿಸಲಾಗಿದೆ.

ಪಶ್ಚಿಮ ಬಂಗಾಳದ ಸಚಿವ, ಸಿಪಿಎಂ ಕೇಂದ್ರ ಸಮಿತಿ ಸದಸ್ಯರಾದ ಬುದ್ಧದೇವ ಭಟ್ಟಾಚಾರ್ಯ ಅವರು ಈ ಕಾವಿ ಪಕ್ಷ ಸ್ವಾತಂತ್ರ್ಯ ಹೋರಾಟಕ್ಕೆ ಏನೂ ಕಾಣಿಕೆ ಸಲ್ಲಿಸಿಲ್ಲ ಎಂಬುದನ್ನು ಅಡ್ವಾಣಿ ನೆನಪಿಡಬೇಕು ಎಂದಿದ್ದಾರೆ.

ಬಿ.ಟಿ.ರಣದಿವೆ, ಎಕೆಜಿ, ಇಎಂಎಸ್, ಗಣೇಶ್ ಘೋಷ್, ಬಿನಯ್‌ಚೌಧರಿ, ಸರೋಜ್ ಮುಖರ್ಜಿ, ಪ್ರಮೋದ್ ದಾಸಗುಪ್ತ, ಜ್ಯೋತಿಬಸು ಅವರು ನೀಡಿರುವ ಕೊಡುಗೆಯನ್ನು ಬಿಜೆಪಿಯ ನಾಯಕರುಗಳ ಜೊತೆ ಹೋಲಿಸಲೂ ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ.

ವಾರದ ವ್ಯಂಗ್ಯಚಿತ್ರ 'ದಿ ಹಿಂದು'ನಲ್ಲಿ ಸುರೇಂದ್ರ



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ